ಮಹಿಳಾ ಪುರವಣಿಗಳ ಭಾಷಿಕ ಅಧ್ಯಯನ

(ಕನ್ನಡ ದಿನಪತ್ರಿಕೆಗಳನ್ನು ಅನುಲಕ್ಷಿಸಿ)

ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಎಂ.ಫಿಲ್. ಸಂಪ್ರಬಂಧ

ಸಂಶೋಧಕರು
ಕೆ. ಗಂಗಪ್ಪ

ಮಾರ್ಗದರ್ಶಕರು
ಡಾ. ಅಶೋಕ ಕುಮಾರ್
ಪ್ರವಾಚಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೭-೨೦೦೮

ಮಹಿಳಾ ಪುರಣವಣಿಗಳ ಭಾಷಿಕ ಅಧ್ಯಯನ

(ಕನ್ನಡ ದಿನಪತ್ರಿಕೆಗಳನ್ನು ಅನುಲಕ್ಷಿಸಿ)

ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸುತ್ತಿರುವ ಸಂಪ್ರಬಂಧ

ಸಂಶೋಧಕರು

ಕೆ. ಗಂಗಪ್ಪ

ಮಾರ್ಗದರ್ಶಕರು

ಡಾ. ಅಶೋಕ ಕುಮಾರ್

ಪ್ರವಾಚಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೭ ೨೦೦೮

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎ. ಮುರಿಗೆಪ್ಪ ಮತ್ತು ಮಾನ್ಯ ಕುಲಸಚಿವರಾದ ಹಿ. ಚಿ. ಬೋರಲಿಂಗಯ್ಯ ಮತ್ತು ಅಧ್ಯಯನಾಂಗದ ನಿರ್ದೇಶಕರಾದ ಡಾ. ಡಿ. ಪಾಂಡುರಂಗಬಾಬು ಅವರಿಗೆ.

ಎಂ.ಫಿಲ್. ಅಧ್ಯಯನಕ್ಕೆ ಪ್ರೋತ್ಸಾಹಿಸಿದ ನನ್ನ ಗುರುಗಳಾದ ಡಾ. ಕೆ. ರುದ್ರಪ್ಪನವರು ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ನಮ್ಮ ವಿ. ವಿ. ಸಂಘದ ಷಾ. ಷೇಷಾಜಿ ಹಸ್ತಿಮಾಲ್ ಜೈನ್ ಪದವಿಪೂರ್ವ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರು, ಸದಸ್ಯರು, ಪ್ರಾಚಾರ್ಯರಾದ ಎಂ. ಕುರುವತ್ತೆಪ್ಪನವರು ಮತ್ತು ಸಿಬ್ಬಂದಿ ವರ್ಗದವರಿಗೆ. ಗ್ರಂಥಾಲಯದಲ್ಲಿ ಪುಸ್ತಕಗಳನ್ನು ನೀಡಿ ಸಹಕರಿಸಿದ ಗ್ರಂಥಾಲಯ ಸಿಬ್ಬಂದಿ ವರ್ಗದವರಿಗೆ.

ಈ ನಿಬಂಧವನ್ನು ಸಿದ್ಧಪಡಿಸಲು ಮಾರ್ಗದರ್ಶಕರಾಗಿ ದೊರೆತು ನಿಬಂಧ ರೂಪುಗೊಳ್ಳಲು ಅನುವು ಮಾಡಿಕೊಟ್ಟ ಡಾ. ಅಶೋಕ ಕುಮಾರ್ ಅವರಿಗೆ, ಅಧ್ಯಯನ ಸಂದರ್ಭದಲ್ಲಿ ಸಂಶೋಧನೆಗೆ ನೆರವು ನೀಡಿದ ಕನ್ನಡ ಭಾಷಾಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಕೆ. ವಿ. ನಾರಾಯಣ, ಡಾ. ಸಾಂಬಮೂರ್ತಿ, ಹಾಗೂ ವಿಭಾಗದ ಮುಖ್ಯಸ್ಥರಾದ ಡಾ. ಪಿ. ಮಹದೇವಯ್ಯನವರಿಗೆ ಹಾಗೂ ಕಿರಿಯ ಸಹಾಯಕರಾದ ಶ್ರೀ ವಿರೇಶ ಅವರಿಗೆ, ಅನುಚರರಾದ ಮಾರಯ್ಯ ಅವರಿಗೆ.

ಪ್ರಾರಂಭದಿಂದಲೂ ಅಧ್ಯಯನಕ್ಕೆ ಪ್ರೋತ್ಸಾಹ ನೀಡಿದ ತಂದೆಯವರಾದ ಶ್ರೀ ಕೆ. ಕೊಟ್ರಪ್ಪ, ತಾಯಿಯವರಾದ ಶ್ರೀಮತಿ ಕೆ. ಶಿವಮ್ಮ, ಸಹೋದರರಾದ ನಿಂಗಪ್ಪ, ರಾಘುವೇಂದ್ರ, ಮಲ್ಲಿಕಾರ್ಜುನ ಶೆಟ್ಟರ್ ಅವರಿಗೆ, ಮಾವನವರಾದ ಶ್ರೀ ಬಿ. ನಾಗೇಂದ್ರಪ್ಪ, ಶ್ರೀ ಯು. ಆನಂದ್ ಅವರಿಗೆ.

ಅಧ್ಯಯನದ ಸಂದರ್ಭದಲ್ಲಿ ಸಹಾಯ ಮಾಡಿದ ಸ್ನೇಹಿತರಾದ ಎನ್. ವಾಗೀಶ್, ಕುಪ್ಪೇರಾವ್, ವೀರೇಶ್ ಜಾನೇಕಲ್, ಸೀತಾರಾಮ, ತಿಪ್ಪೇಸ್ವಾಮಿ, ಜಬ್ಬೀರ್, ಶೇಖರಾಚಾರಿ, ಉತ್ತಂಗಿ ವಿರೇಶ್, ಮಾರ್ಕಂಡೇಯ, ಗವಿಸಿದ್ದಪ್ಪ, ಸುದೀಪ್, ಸುಧಾಕರ, ನಿರಂಜನ್, ನಾಗರತ್ನ, ರೂಪ ಹೊಳಲು, ವೆಳ್ಳಿಮಾ, ಎಂ. ವೀರಾಕ್ಷಿ ಎಲ್. ವಿವೇಕ್, ಹಿರೇಮಠ್, ಲಾವಣ್ಯ, ಶಂಕರ್, ಯರ್ರಿಯಪ್ಪ, ಎಲ್. ಡಿ. ದೂರಣ್ಣ, ಹೊನ್ನೂರ್ ಸಾಬ್, ನಿಸಾರ್, ಉಮಾಪತಿ, ರಾಜೇಶ್, ಮಲ್ಲೇಶ್, ವಾಮದೇವ ಬಿ. ಟಿ., ಮಂಜು, ಟಿಪ್ಪು, ವಿರೇಶ್, ರಾಮಚಂದ್ರ ಅವರಿಗೆ.

ಅಧ್ಯಯನ ಸಂದರ್ಭದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ನನ್ನೆಲ್ಲಾ ಸ್ನೇಹಿತರಿಗೆ ಹಾಗೂ ಅಕ್ಷರ ಸಂಯೋಜಿಸಿ ಬೈಂಡಿಗ್ ಮಾಡಿಕೊಟ್ಟ ಅಭಿಗ್ರಾಫಿಕ್ಸ್‌ನವರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.

ಕೆ. ಗಂಗಪ್ಪ

ಮಾರ್ಗದರ್ಶಕರ ದೃಢೀಕರಣ ಪತ್ರ

ಮಹಿಳಾ ಪುರವಣಿಗಳ ಭಾಷಿಕ ಅಧ್ಯಯನ ಕನ್ನಡ ದಿನಪತ್ರಿಕೆಗಳನ್ನು ಅನುಲಕ್ಷಿಸಿ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ಕೆ. ಗಂಗಪ್ಪ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಅಶೋಕ ಕುಮಾರ್
ಪ್ರವಾಚಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ:

ಸ್ಥಳ: ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

"ಮಹಿಳಾ ಪುರವಣಿಗಳ ಭಾಷಿಕ ಅಧ್ಯಯನ" (ಕನ್ನಡ ದಿನಪತ್ರಿಕೆಗಳನ್ನು ಅನುಲಕ್ಷಿಸಿ) ಎಂಬ ಸಂಪ್ರಬಂಧವನ್ನು ಪ್ರವಾಚಕರಾದ ಡಾ. ಅಶೋಕ ಕುಮಾರ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಭಾಷಾ ನಿಕಾಯದ ಕನ್ನಡ ಭಾಷಾಧ್ಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕೆ. ಗಂಗಪ್ಪ

ದಿನಾಂಕ:

ಸ್ಥಳ: ವಿದ್ಯಾರಣ್ಯ

(ಕೆ. ಗಂಗಪ್ಪ)
ಸಂಶೋಧಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಯನದ ಉದ್ದೇಶ

ಸಮೂಹ ಸಂಪರ್ಕ ಮಾಧ್ಯಮದಲ್ಲಿ ಒಂದಾದ ಪತ್ರಿಕೆಯ ಹುಟ್ಟು ಬೆಳವಣಿಗೆಯನ್ನು ನೋಡಿದಾಗ ಪತ್ರಿಕೆಗಳ ಮಹತ್ವ, ಅದರ ಕಾರ್ಯಸಾಧನೆಗಳು ನಮಗೆ ಮನವರಿಕೆಯಾಗುತ್ತದೆ. ಪತ್ರಿಕೆಗಳನ್ನು ಮೊಟ್ಟ ಮೊದಲು ಜರ್ಮನ್ ದೇಶದವರು ಪ್ರಸಾರಗೊಳಿಸಿದರು ಎಂದು ನಮಗೆ ತಿಳಿದು ಬರುತ್ತದೆ. ೧೯೧೫ ರಲ್ಲಿ ಪ್ರಕಟವಾದ ಜರ್ಮನ್ ಪತ್ರಿಕೆ ಪ್ರಪಂಚದ ಪ್ರಥಮ ಪತ್ರಿಕೆ ಎನಿಸಿತು. ೧೮ನೆಯ ಶತಮಾನದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮದಿಂದಾಗಿ ಪ್ರಪಂಚದ ಅನೇಕ ದೇಶಗಳಲ್ಲಿ ಪತ್ರಿಕೆಗಳು ಪ್ರಾರಂಭಗೊಂಡವು ಎಂದು ಡಿ. ಬಿ. ನಾಯಕರು (೨೦೦೩) ಹೇಳುತ್ತಾರೆ. ನಂತರದ ಸಂದರ್ಭದಲ್ಲಿ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಪತ್ರಿಕೆಗಳ ಬೆಳವಣಿಗೆ ಕಂಡು ಬಂದಿತು.

ಕರ್ನಾಟಕದಲ್ಲಿಯೂ ದಿನಪತ್ರಿಕೆಗಳು ಬೆಳೆದು ಬರಲಿಕ್ಕೆ ಸಾಕಷ್ಟು ಮಹನೀಯರು ಶ್ರಮಿಸಿದ್ದಾರೆ. ಅಂದಿನ ರಾಜಕೀಯ ವ್ಯವಸ್ಥೆಗಳ ಮಧ್ಯೆ ನಿರಂತರ ಹೋರಾಟ ಪರಿಶ್ರಮಗಳ ಮೂಲಕ ಪತ್ರಿಕಾ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದಾರೆ. ಕನ್ನಡ ಪತ್ರಿಕಾ ಸಂಸ್ಥೆ ಅನೇಕ ಏಳು ಬೀಳುಗಳನ್ನು ಎದುರಿಸುತ್ತಾ ಇಂದು ಬೃಹತ್ ಉದ್ಯಮವಾಗಿ ಜ್ಞಾನ ಪ್ರಸಾರದ ಮಾಧ್ಯಮವಾಗಿ ಬೆಳೆದು ಬಂದಿದೆ.

ಚಾರಿತ್ರಿಕವಾಗಿ ಕನ್ನಡ ಭಾಷೆಯ ಬೆಳವಣಿಗೆಯನ್ನು ಗಮನಿಸಿದಾಗ ಒಂದಲ್ಲ ಒಂದು ಕಾಲಘಟ್ಟದಲ್ಲಿ ಬೇರೆ ಭಾಷೆಯ ಪ್ರಭಾವ ಆಗಿರುವುದನ್ನು ನೋಡಬಹುದು. ಇಂತಹ ಪ್ರಭಾವ ಒಂದೇ ಪ್ರಮಾಣದಲ್ಲಿ ಆಗಿದೆ ಎಂದು ಹೇಳಲು ಸಾಧ್ಯವಿಲ್ಲ. ಕನ್ನಡ ದಿನಪತ್ರಿಕೆಗಳಲ್ಲಿನ ಮಹಿಳಾ ಪುರವಣಿಗಳಲ್ಲಿ ಒಬ್ಬ ಸ್ತ್ರೀ ಲೇಖಕಿ ಇನ್ನೊಬ್ಬ ಸ್ತ್ರೀಯನ್ನು ಕುರಿತು ಬರೆಯುವಾಗ ಅವಳಿಗೆ ಅರಿವಿಲ್ಲದಂತೆಯೇ ಪುರುಷ ಪ್ರಧಾನ ವ್ಯವಸ್ಥೆಯನ್ನು ಒಪ್ಪಿಕೊಂಡು ಬರೆಯವಾಗ ಭಾಷೆಯನ್ನು ಬಳಸುವ ವಿಧಾನವೇ ಭಾಷಿಕ

ವ್ಯತ್ಯಾಸ. ಸ್ತ್ರೀಯನ್ನು ಕುರಿತು ಪುರುಷರು ಬರೆಯುವಾಗ ಅವರೂ ಕೂಡ ಬಳಸುವ ವಿಧಾನ, ಭಾಷಿಕ ವ್ಯತ್ಯಾಸವನ್ನು ಕುರಿತು ಚರ್ಚಿಸುವುದು ಕೂಡ ಸೂಕ್ತವೆನಿಸುತ್ತದೆ.

ಸಹಜವಾಗಿ ಬಳಸುವ ಬರವಣಿಗೆಯ ಕನ್ನಡಕ್ಕೂ ಮಹಿಳಾ ಪುರವಣಿಗಳಲ್ಲಿ ಬಳಸುವ ಕನ್ನಡಕ್ಕೂ ಇರುವ ವ್ಯತ್ಯಾಸ ಮತ್ತು ಭಾಷಿಕ ರಚನೆಯಲ್ಲಿ ಆಗುವ ಪಲ್ಲಟಗಳನ್ನು ಕುರಿತು ಅಧ್ಯಯನ ಮಾಡುವುದು ಈ ಅಧ್ಯಾಯನದ ಮುಖ್ಯ ಉದ್ದೇಶವಾಗಿದೆ.

ಉದಹಾರಣೆಗೆ 'ವನಿತೆಯರು' ಸಹಜವಾಗಿ ಬಳಸುವ ಬರವಣಿಗೆಯ ಕನ್ನಡ ಪದವಾಗಿದೆ. ಆದರೆ ಮಹಿಳಾ ಪುರವಣಿಗೆಗಳಲ್ಲಿ ವೀರ ವನಿತೆಯರು ಎಂದು ಬಳಸಿ ರಚನೆ ಮಾಡಿದ್ದಾರೆ. ಆದರೆ ಇಲ್ಲಿ ವೀರ ಎನ್ನುವ ಪದ ಪುರುಷ ಸೂಚಕ ಪದವಾದ್ದರಿಂದ ಸ್ತ್ರೀ ಸೂಚಕ ಪದವಾದ ವನಿತೆಯ ಜೊತೆಗೆ ವೀರ ಎನ್ನುವ ಪದ ಸೇರಿ 'ವೀರ ವನಿತೆಯರು' ಎಂಬ ಪದ ಬಳಕೆಗೆ ಬಂದಿತು. ಇದೇ ರೀತಿ ಧೀರ ಎನ್ನುವ ಪದದ ಜೊತೆಗೆ ರಾಣಿ ಎಂಬ ಪದ ಸೇರಿ ಧೀರ ರಾಣಿ, ದಿಟ್ಟ ಮಹಿಳೆ, ಶೂರ ಮಹಿಳೆ, ವೀರ ರಾಣಿ ಎಂಬ ಪುರುಷ ಸೂಚಕ ಪದಗಳ ಜೊತೆಗೆ ಸ್ತ್ರೀ ಸೂಚಕ ಪದಗಳು ರಚನೆಯಾಗಿ ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತವೆ.

ಜಾಗತೀಕರಣದ ಪ್ರಭಾವದಿಂದ ಕನ್ನಡ ದಿನ ಪತ್ರಿಕೆಗಳಲ್ಲಿ ಬಳಕೆಯಾಗಿರುವ ಭಾಷಾ ರಚನೆಯನ್ನು ಕುರಿತು ಚರ್ಚಿಸುವ ಅಗತ್ಯವಿದೆ. ಸಾಮಾನ್ಯವಾಗಿ ಭಾಷಾ ಬಳಕೆ ವಿವಿಧ ಪತ್ರಿಕೆಗಳಲ್ಲಿ ಒಂದೇ ರೀತಿಯಲ್ಲಿ ಬಳಕೆಯಾಗಿರದೆ ಸ್ವರೂಪದಲ್ಲಿ ವ್ಯತ್ಯಾಸ ಆಗಿದೆಯೇ ಎಂಬುದನ್ನು ಸಹ ಅಧ್ಯಯನಕ್ಕೆ ಒಳಪಡಿಸಲಾಗುವುದು.

ವ್ಯಕ್ತಿಯ ಮನೋಧರ್ಮಕ್ಕೆ ಅನುಗುಣವಾಗಿ ಭಾಷೆ ಬಳಕೆಯಾಗುತ್ತಿರುವುದನ್ನು ನಿದರ್ಶನಗಳ ಮೂಲಕ ಚರ್ಚಿಸಲಾಗುವುದು. ಮಹಿಳಾ ಪುರವಣಿಗಳಲ್ಲಿ ವಿಶೇಷವಾಗಿ ಸ್ತ್ರೀಯರನ್ನೇ ಉದ್ದೇಶವಾಗಿಟ್ಟುಕೊಂಡು ಲೇಖನಗಳನ್ನು ಬರೆಯುತ್ತಾರೆ. ಇದರ ಜೊತೆಗೆ ಸ್ತ್ರೀಯರ ಸೌಂದರ್ಯ, ಆರೋಗ್ಯ, ಉದ್ಯೋಗ, ಉಡುಪುಗಳ ಬಗ್ಗೆ ಅಡುಗೆ ಮನೆಯೊಳಗಿನ ಉಪಕರಣಗಳನ್ನು ಕುರಿತು ವಿಶೇಷ ಪದಗಳು ಬಳಕೆಯಾಗುತ್ತವೆ. ಈ ಎಲ್ಲಾ ಅಂಶಗಳನ್ನು ಕುರಿತು ಅಧ್ಯಯನ ಮಾಡುವುದು ಪ್ರಮುಖ ಉದ್ದೇಶವಾಗಿದೆ.

ಅಧ್ಯಯನದ ಸ್ವರೂಪ

ಭಾಷೆ ಎಂಬುದು ಮನುಷ್ಯನ ಭಾವನೆಗಳ ಅಭಿವ್ಯಕ್ತಿ ಮಾಧ್ಯಮವಾಗಿದೆ. ಭಾಷೆ ಇಲ್ಲದಿದ್ದರೆ ಜಗತ್ತೆಲ್ಲ ಅಂಧಕಾರದಲ್ಲಿ ಇರುತ್ತಿತ್ತು. ಭಾಷೆ ಮಾನವನ ಪರಸ್ಪರ ಸಂವಹನಕ್ಕೆ ಅಗತ್ಯವಾಗಿದೆ. ಭಾಷೆಯನ್ನು ಕುರಿತು ಆಧುನಿಕ ಯುಗದಲ್ಲಿ ಸಾಕಷ್ಟು ಅಧ್ಯಯನ ನಡೆಯುತ್ತಿವೆ. ಪ್ರಪಂಚದ

ಭಾಷೆಗಳನ್ನು ಕುರಿತು ವಿಶಿಷ್ಟವಾದ ಅಧ್ಯಯನಗಳು ಜರುಗಿವೆ. ಅಂತೆಯೇ ಕನ್ನಡ ಭಾಷೆ ಕುರಿತಾದ ಅಧ್ಯಯನಗಳೂ ನಡೆಯುತ್ತಿವೆ.

ಮನುಷ್ಯ ಮನುಷ್ಯರ ಮಧ್ಯೆ ಸಂವಹನ ಕ್ರಿಯೆಯನ್ನು ಉಂಟು ಮಾಡುವ ಸಾಧನಗಳೇ ಸಮೂಹ ಮಾಧ್ಯಮವಾಗಿದೆ. ಈ ಸಮೂಹ ಮಾಧ್ಯಮಗಳು ಪ್ರಸ್ತುತ ಸಮಾಜದಲ್ಲಿ ಒಂದು ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿವೆ. ಈ ಮೊದಲು ಇದ್ದ ಪತ್ರಿಕೆಯ ಜೊತೆಗೆ ರೇಡಿಯೋ, ಟೆಲಿವಿಷನ್, ಕಂಪ್ಯೂಟರ್ ಹಾಗೂ ಮೊಬೈಲ್ ಮಾನವನ ಬೌದ್ಧಿಕ ಆವಿಷ್ಕಾರದ ಕೂಸುಗಳಾಗಿದ್ದು ಜಗತ್ತಿನ ಆಗು ಹೋಗುಗಳನ್ನು ಜನರ ಕಡೆಗೆ ಬಹು ಬೇಗನೆ ಕೊಂಡೊಯ್ಯುವುದರಿಂದ ಮಾಧ್ಯಮಗಳಿಲ್ಲದೆ ಜನರ ಬದುಕೇ ಇಲ್ಲ ಎನ್ನುವಂತಾಗಿದೆ. ಮಾನವರ ಬೌದ್ಧಿಕ ವಿಕಾಸ ಹಾಗೂ ಬದಲಾಗುವ ಜಗತ್ತಿಗನುಗಣವಾಗಿ ಹೊಸ ಹೊಸ ಜ್ಞಾನದ ವಲಯಗಳನ್ನು ಅನಾವರಣಗೊಳಿಸಿವೆ.

ಮಾಧ್ಯಮಗಳು ಒಂದಲ್ಲ ಒಂದು ವಿಧದಲ್ಲಿ ಭಾಷೆಯನ್ನು ಬಳಸುತ್ತವೆ. ಭಾಷೆಯ ಎರಡು ರೂಪಗಳಾದ ಮಾತು ಮತ್ತು ಬರಹಗಳನ್ನು ಬೇರೆ ಬೇರೆ ರೀತಿಯಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತವೆ. ಶಿಕ್ಷಣ, ಆಡಳಿತ, ಹಾಗೂ ಮಾಧ್ಯಮ ವಲಯಗಳು ಭಾಷಾ ಬಳಕೆಯ ಪ್ರಮುಖ ವಲಯಗಳಾಗಿವೆ.

ಪ್ರಭಾವಿ ಮಾಧ್ಯಮಗಳಲ್ಲಿ ದಿನಪತ್ರಿಕೆಗಳು ದಿನದಿಂದ ದಿನಕ್ಕೆ ತೀವ್ರವಾಗಿ ಬೆಳೆದು ಅದೊಂದು ಉದ್ಯಮವಾಗಿದೆ. ದೃಶ್ಯ ಮಾಧ್ಯಮವಾದ ಟಿ.ವಿ. ಸುದ್ದಿಗಳನ್ನು ಪ್ರಕಟಿಸಿ ಜನರಿಗೆ ತಲುಪಿಸುವುದರಿಂದ ಜನರು ಬೇಗನೆ ತಿಳಿದುಕೊಂಡು ಅದನ್ನು ನಂಬುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳ ಪ್ರತಿನಿಧಿಯಾಗಿ ಪ್ರಜೆಗಳ ಸರ್ವಾಂಗೀಣ ಬೆಳವಣಿಗೆಯ ಜವಬ್ದಾರಿ ಪತ್ರಿಕೆಯ ಹೆಗಲ ಮೇಲಿದೆ. ಜಗತ್ತಿನ ನಾನಾ ದೇಶಗಳು ಪತ್ರಿಕೆಗಳಿಗೆ ಪ್ರತ್ಯೇಕವಾದ, ಮಹತ್ವವಾದ ಸ್ವಾತಂತ್ರ್ಯದ ಹಕ್ಕನ್ನು ನೀಡಿವೆ. ಭಾರತವೂ ಸಹ ಈ ಪತ್ರಿಕಾ ಸಂಸ್ಥೆಗೆ ವಿಶೇಷ ಕಾಯಿದೆಗಳ ಅಡಿಯಲ್ಲಿ ಉನ್ನತ ಸ್ವಾತಂತ್ರ್ಯದ ಹಕ್ಕನ್ನೂ ನೀಡಿದೆ. ಜೊತೆಗೆ ಜವಾಬ್ದಾರಿಯೂ ಇರುವುದರಿಂದ ಪತ್ರಿಕೆಯ ಮಹತ್ವ ಎಷ್ಟಿದೆ ಎಂಬುದು ಅರ್ಥವಾಗುತ್ತದೆ. ಹಾಗಾಗಿ ಪತ್ರಿಕೆಗಳನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಕರೆಯುತ್ತಾರೆ.

ಪತ್ರಿಕೆಗಳಿಗೆ ವಿಶೇಷ ಜವಾಬ್ದಾರಿಯನ್ನು ನಮ್ಮ ಸಂವಿಧಾನ, ಸರ್ಕಾರಗಳು ನೀಡಿವೆ. ಈ ಬೆಳವಣಿಗೆಯಲ್ಲಿ ದಿನಪತ್ರಿಕೆಗಳು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿವೆ. ವಿವಿಧ ಕ್ಷೇತ್ರಗಳ ವಿಷಯಗಳನ್ನು ಒಳಗೊಂಡು ವರ್ಣರಂಜಿತವಾಗಿ ಓದುಗರನ್ನು ಆಕರ್ಷಿಸಲು ವಿವಿಧ ವಿನ್ಯಾಸದಲ್ಲಿ ಪ್ರಕಟವಾಗುತ್ತಿವೆ. ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಕ್ರೀಡೆ, ಸಿನಿಮಾ, ಉದ್ಯೋಗ, ಮಹಿಳಾ ಪುರವಣಿ, ವಾಣಿಜ್ಯ ಕ್ಷೇತ್ರಗಳ ಸುದ್ದಿಯನ್ನು ಕನ್ನಡ ದಿನಪತ್ರಿಕೆಗಳು ಒಳಗೊಂಡಿವೆ. ಈ ಎಲ್ಲಾ ಕ್ಷೇತ್ರದ ವಿಷಯಗಳು ಭಾಷೆಯ ಮೂಲಕವೇ ಜನರಿಗೆ ತಲುಪುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಪತ್ರಿಕೆಗಳು ಸಾಮಾನ್ಯವಾಗಿ ಶಿಷ್ಟ ಮಾದರಿಯ ಮೈಸೂರು - ಬೆಂಗಳೂರು ಕನ್ನಡ ಭಾಷೆಯನ್ನು ಬಳಸಿಕೊಂಡರೂ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಕೈಗಾರಿಕೀಕರಣ, ಹಾಗೂ ನಗರೀಕರಣ ವಿಜ್ಞಾನ ತಂತ್ರಜ್ಞಾನಗಳ ಪ್ರಭಾವದಿಂದಾಗಿ ಬದಲಾಗುವ ಜಗತ್ತಿಗನುಗುಣವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹಿನ್ನೆಲೆಯಲ್ಲಿ ಪತ್ರಿಕಾ ಮಾಧ್ಯಮದ ಪದಕೋಶದಲ್ಲಿ ಪರಿಣಾಮಕಾರಿ ಪಲ್ಲಟ ಕಂಡುಬರುತ್ತಿದೆ. ಕನ್ನಡ ಪದಕೋಶ ಜೊತೆಗೆ ಸಂಸ್ಕೃತ, ಇಂಗ್ಲಿಷ್, ಅರೇಬಿಕ್, ಉರ್ದು, ಮುಂತಾದ ಭಾಷೆಗಳು ಬಂದು ಸೇರಿಕೊಳ್ಳುತ್ತಿವೆ. ಕ್ರೀಡಾ ಪುರವಣಿ, ಮಹಿಳಾ ಪುರವಣಿ, ವಾಣಿಜ್ಯ ಪುರಣವಣಿಗಳಲ್ಲಿ ಇಂಗ್ಲಿಷ ಪದಗಳ ಬಳಕೆ ಹೆಚ್ಚಾಗಿ ಕಂಡು ಬರುತ್ತಿದೆ. ಇಂಗ್ಲಿಷ್ ಪದಗಳು ವ್ಯಂಜನಾಂತ್ಯದೊಂದಿಗೆ ವಿಭಕ್ತಿ ಪ್ರತ್ಯಯಗಳು ಬಳಕೆಯಾಗುವುದು.

ವಿಶೇಷವಾಗಿ ಮಹಿಳಾ ಪುರವಣಿಗಳಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ವಿಚಾರಗಳನ್ನು ಪ್ರಕಟಿಸಿರುತ್ತಾರೆ. ಮಹಿಳಾ ಸಬಲೀಕರಣ, ಸ್ತ್ರೀ ವಿಮೋಚನೆ, ಮಹಿಳಾ ಜಾಗೃತಿ ಇಂತಹ ಕಾರ್ಯಕ್ರಮಗಳನ್ನು ರೂಪಿಸಿ ಸ್ತ್ರೀಯರಿಗೆ ನೈತಿಕ ಬಲವನ್ನು ತುಂಬಲು ಈ ಪುರವಣಿಗಳು ಸಹಾಯಕ ಅಥವಾ ಪ್ರೇರಕ ಶಕ್ತಿಗಳಾಗಿ ನಿಲ್ಲುತ್ತವೆ.

ಮಹಿಳಾ ಪುರವಣಿಗಳಲ್ಲಿ ಸ್ತ್ರೀಯರ ಸೌಂದರ್ಯ, ಉದ್ಯೋಗ, ಆರೋಗ್ಯ, ಜಾಹಿರಾತುಗಳಿಗೆ ಸಂಬಂಧಿಸಿದಂತೆ ವಿಶಿಷ್ಟ ಪದಗಳು ರಚನೆಯಾಗಿ ಕನ್ನಡ ಭಾಷೆಯಲ್ಲಿ ಬಳಕೆಯಾಗುತ್ತವೆ. ಇಂತಹ ವಿಶಿಷ್ಟತೆಯನ್ನು ಕುರಿತು ಅಧ್ಯಯನ ಮಾಡುವುದು ಪ್ರಮುಖ ಉದ್ದೇಶವಾಗಿದೆ.

ಕನ್ನಡ ಭಾಷೆಯ ರಚನೆಯೊಳಗಡೆಯೇ ಪುರುಷ ಪ್ರಧಾನತೆಯ ಗುಣಗಳು ಸಾಕಷ್ಟು ಕಂಡುಬರುತ್ತವೆ. ಉದಾಹರಣೆಗೆ ಒಂದಾನೊಂದು ಕಾಲದಲ್ಲಿ ಒಬ್ಬ ಮನುಷ್ಯ ಇದ್ದನು ಎಂದು ಕಥೆಯನ್ನು ಪ್ರಾರಂಭಿಸುತ್ತೇವೆ. ಆದರೆ ಮನುಷ್ಯ ಇದ್ದಳು ಎಂದು ಬರೆಯುವುದಿಲ್ಲ. ಇದಕ್ಕೆಲ್ಲಾ ಕಾರಣ ನಮ್ಮದು ಶತಶತಮಾನಗಳಿಂದ ರೂಢಿಯಲ್ಲಿರುವಂತಹ ಪುರುಷ ಪ್ರಧಾನ ಸಮಾಜ ಇರುವುದರಿಂದ ಹೆಣ್ಣಿನ ಪ್ರತಿನಿಧೀಕರಣ ಲೋಪವಾಗಿ ಬೆಳೆಯುತ್ತಿದೆ.

ಸಂಸ್ಕೃತಿಯ ಘನೀಭೂತ ರಚನೆಗಳಾದ ಗಾದೆ, ಒಡಪು, ಬೈಯ್ಗುಳಗಳು ಹಾಗೂ ಹೆಣ್ಣಿನ ಸುತ್ತ ಕಟ್ಟಲ್ಪಟ್ಟ ಕೆಲವು ನಗೆಹನಿಗಳ ಮೂಲಕ ಹೆಣ್ಣಿನ ಪ್ರತಿನಿಧೀಕರಣದಲ್ಲಿ ವ್ಯಕ್ತವಾಗುವ ಲಿಂಗ ತಾರತಮ್ಯದ ಸ್ವರೂಪವನ್ನು ಕಾಣುತ್ತೇವೆ. ಗೃಹಿಣಿತ್ವ ಪಾತಿವ್ರತ್ಯ, ಶೀಲ, ಪಾವಿತ್ರ್ಯ, ತಾಯ್ತನ ಮೊದಲಾದ ಆದರ್ಶಗಳನ್ನು ಹೆಣ್ಣಿನ ತಲೆಗೆ ಕಟ್ಟುವ ರೂಢಿಯನ್ನು ಗಾದೆಗಳು ಶ್ರುತಪಡಿಸುತ್ತವೆ. ಒಂದು ಬಗೆಯಲ್ಲಿ ಹೆಣ್ಣನ್ನು ಸಮಾಜೀಕರಿಸುವ, ಸಂಸ್ಕೃತೀಕರಿಸುವ ತನ್ನ ಧೋರಣೆಗಳಿಗೆ ವಿರುದ್ಧವೆನಿಸಿದರೆ ಶಿಕ್ಷಿಸುವ, ದಂಡಿಸುವ ಮಾದರಿ ಅಭಿವ್ಯಕ್ತಿಯಾಗಿಯೂ ಗಾದೆಗಳು ಅಸ್ತಿತ್ವ ಹೊಂದಿರುವುದನ್ನು ಗಮನಿಸಬಹುದಾಗಿದೆ.

ಬೈಯ್ಗುಳಗಳನ್ನು ಸಾಮಾನ್ಯವಾಗಿ ನಿಂದನಾತ್ಮಕವಾಗಿ ಬಳಸಲಾಗುತ್ತದೆ. ಎಲ್ಲಾ ಬೈಗುಳಗಳನ್ನು ಹೆಣ್ಣನ್ನು ಕೇಂದ್ರವಾಗಿರಿಸಿಕೊಂಡು ರಚಿಸಲಾಗುತ್ತದೆ.

ಹೆಂಗಸರಿಗೆ ಬೈಯುವ ಬೈಗುಳುಗಳು

ಹಾದರಗಿತ್ತಿ

ಮಿಂಡ್ರಿ

ಸೂಳೆ

ಬೋಸುಡಿಕಿ ಇತ್ಯಾದಿ. ಗಂಡಸರಿಗೆ ಬಳಸುವ ಬೈಗಳುಗಳು

ಸೂಳೆ ಮಗ್ನೆ

ಬೋಳಿ ಮಗ್ನೆ

ಬೋಸುಡಿ ಮಗ್ನೆ

ರಂಡೀ ಮಗ್ನೆ

ಏಳು ಮಿಂಡ್ರುಗುಟ್ಟಿದೋನೆ ಇತ್ಯಾದಿ.

ಇಂತಹವುಗಳಲ್ಲಿ ಹೆಣ್ಣನ್ನೇ ಕೇಂದ್ರೀಕರಿಸಿ ಬೈಗಳುಗಳ ರಚನೆಯನ್ನು ನೋಡಬಹುದಾಗಿದೆ.

ಇಂಗ್ಲೀಷ್ ಭಾಷೆಯಲ್ಲಿ ಮಹಿಳೆಯರ ಹುದ್ದೆಯನ್ನು ಪರಿಚಯಿಸುವಾಗ ಪುರುಷ ಕೇಂದ್ರಿತ ಪದಗಳ ಮೂಲಕ ಪರಿಚಯಿಸಲಾಗಿದೆ. ಬಿಸಿನೆಸ್ ಮ್ಯಾನ್, ಪೊಲೀಸ್ ಮ್ಯಾನ್, ನ್ಯೂಸ್ ಮ್ಯಾನ್, ಪೋಸ್ಟ್‌ಮ್ಯಾನ್ ಮುಂತಾದ ಪದಗಳನ್ನು ಪಟ್ಟಿ ಮಾಡಬಹುದು. ಕೆಲವು ನಿರ್ದಿಷ್ಟ ವಲಯಗಳಲ್ಲಿ ಮಾಸ್ಟರ್, ಫಾದರ್ ಮತ್ತು ಸಿಸ್ಟರ್ ಮುಂತಾದ ಪದಗಳು ಬಳಕೆಯಲ್ಲಿವೆ. ಇಲ್ಲಿ ಮಹಿಳೆ ಕೆಲಸ ಮಾಡಿದರೂ ನಾವು ನೋಡುವ ದೃಷ್ಟಿಕೋನ ಮಾತ್ರ ಪುರುಷ ನೆಲೆಯಿಂದಲೇ.

ಇತ್ತೀಚಿಗೆ ನಮ್ಮ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯವರು ಹೊಸ ಮಾದರಿಗಳ ಬಸ್ಸುಗಳನ್ನು ಬಿಡುಗಡೆ ಮಾಡಿದ್ದಾರೆ. ಅವುಗಳಿಗೊಂದು ಆಕರ್ಷಕವಾದಂತಹ ಹೆಸರುಗಳನ್ನು ನೀಡುತ್ತಿದ್ದಾರೆ. ಅಂತಹ ಹೆಸರುಗಳಲ್ಲಿ ರಾಜಹಂಸ ಬಸ್ಸು ಒಂದು. ಏಕೆ ರಾಣಿಹಂಸ ಎಂದು ನಾಮಕರಣ ಮಾಡಬಾರದು.

ಹಿಂದಿನ ಕಾಲದಲ್ಲಿ ಸ್ತ್ರೀಯರು ಸಮಾಜದ ಅನೇಕ ಕ್ಷೇತ್ರಗಳಿಂದ ದೂರ ಇದ್ದ ಸಂಗತಿ ನಮಗೆಲ್ಲಾ ಗೊತ್ತಿರುವ ವಿಚಾರವಾಗಿದೆ. ಆದರೆ ಇಂದು ಸ್ತ್ರೀಯರು ಎಲ್ಲಾ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಆದರೆ ಹೆಣ್ಣು ಪ್ರವೇಶ ಮಾಡಿದ ಕ್ಷೇತ್ರಗಳಲ್ಲಿ ಬರೀ ಪುರುಷ ಸೂಚಕ ಪದಗಳನ್ನು ನಾವು ಕಾಣುತ್ತಿದ್ದೇವೆ. ಹೊರತು ಸ್ತ್ರೀ ಸೂಚಕ ಪದಗಳು ವ್ಯಕ್ತವಾಗಿಲ್ಲ ಒಂದು ವೇಳೆ ಅಂತಹ ಕ್ಷೇತ್ರಗಳಲ್ಲಿ ಅವರಿಗೆ ಸಂಬಂಧಿಸಿದ ಸ್ತ್ರೀ ಸೂಚಕ ಪದಗಳು ಹುಟ್ಟಿಕೊಂಡಿಲ್ಲ ಈಗೀಗ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆ ಪ್ರವೇಶ ಪಡೆದ ಮೇಲೆ ಸ್ತ್ರೀ ಕೇಂದ್ರಿತ ನೆಲೆಯಲ್ಲಿ ಪುರುಷ ಸೂಚಕ ಪದಗಳಿಗೆ ಪರ್ಯಾಯವಾಗಿ ರೂಪುಗೊಳ್ಳುತ್ತಿವೆ. ಹೀಗೆ ರೂಪುಗೊಂಡರೂ ಅದರ ಮೂಲ ಪದಗಳಲ್ಲಿ ಪುರುಷ

ಸೂಚಕ ಇರುವುದನ್ನು ನೋಡಬಹುದಾಗಿದೆ. ಅಂತಹುದರ ಹಿನ್ನೆಯಲ್ಲಿ ಈ ಅಧ್ಯಯನ ಮಾಡುವುದು ಸೂಕ್ತ ಎನಿಸುತ್ತದೆ.

ಉದಾ. ಆಧ್ಯಾತ್ಮ ಇದು ಹಿಂದಿನಿಂದಲೂ ಹಿಂದೂ ಸಂಪ್ರದಾಯದ ಒಂದು ವಿಸಿಷ್ಟತೆ ಇಂತಹ ಕ್ಷೇತ್ರಗಳಲ್ಲಿ ಸ್ತ್ರೀಯ ಪ್ರವೇಶ ಇರಲಿಲ್ಲ. ಹಾಗಾಗಿ ಇಲ್ಲಿ ಋ,ಇ ಎನ್ನುವ ಪುರುಷ ವಾಚಕ ಪದವನ್ನೇ ಬಳಸುತ್ತಾ ಬಂದಿದ್ದೇವೆ. ಸ್ತ್ರೀ ಸೂಚಕ ಪದ ಇಲ್ಲ.

ಶಿಕ್ಷಣ ಕ್ಷೇತ್ರದಲ್ಲಿ ಗುರು ಎನ್ನುವ ಪದ ಬಳಕೆಯಲ್ಲಿದೆ. ಇಲ್ಲಿ ಸ್ತ್ರೀಯರು ಪ್ರವೇಶಿಸಿದರೂ ಇದಕ್ಕೆ ಸಂವಾದಿಯಾದ ಸ್ತ್ರೀ ಸೂಚಕ ಪದ ಹುಟ್ಟಿಕೊಂಡಿಲ್ಲ. ಶಿಕ್ಷಕಿ ಎಂದು ಕರೆಯುತ್ತಾರೆ. ಆದರೆ ಗುರುಣಿ ಎಂದು ಕರೆಯಲಿಕ್ಕೆ ಸಾದ್ಯವಿಲ್ಲ.

ಯುದ್ಧ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಬರೀ ಪುರುಷರೇ ಇರಲು ಸಾಧ್ಯ ಎಂದು ನಂಬಿರುವ ನಮಗೆ ಈಗೀಗ ಮಹಿಳೆಯರೂ ಇಂತಹ ಕ್ಷೇತ್ರದಲ್ಲಿ ಕಾರ್ಯ ಮಾಡುತ್ತಿರುತ್ತಾರೆ. ಅದಕ್ಕಾಗಿ ಇಲ್ಲಿ ಇದೂ ಕಲಿ, ವೀರ, ಶೂರ, ಧೀರ, ಎನ್ನುವ ಪುರುಷ ಸೂಚಕ ಪದಗಳು ಇವೆ. ಈಗ ಇಂತಹ ಕ್ಷೇತ್ರಕ್ಕೂ ಸ್ತ್ರೀ ಲಗ್ಗೆ ಹಾಕಿದ್ದಾಳೆ ಆದರೆ ಅದಕ್ಕಾಗಿ ಸ್ತ್ರೀ ಸೂಚಕ ಪದಗಳು ಹುಟ್ಟಿಕೊಂಡಿಲ್ಲ.

ರಾಜಕಾರಣ ಕ್ಷೇತ್ರದಲ್ಲಿ ಸ್ತ್ರೀ ಪ್ರವೇಶ ಪಡೆದುಕೊಂಡಿದ್ದಾಳೆ ಆದರೆ ಸ್ತ್ರೀ ಸೂಚಕ ಪದಗಳು ಹುಟ್ಟಿಕೊಂಡಿಲ್ಲ.

ಉದಾ. ರಾಷ್ಟ್ರಪತಿ, ರಾಜ್ಯಪಾಲ, ಮಂತ್ರಿ ಎನ್ನುವ ಅನೇಕ ಶಬ್ದಗಳು ಪುರುಷ ಸೂಚಕ ಪದವಾಗಿವೆ. ಇಂಥವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಅಧ್ಯಯನ ಮಾಡುವುದು ಮುಖ್ಯವಾದ ಉದ್ದೇಶವಾಗಿದೆ. ಆದರೆ ಇಂದು ರಾಜಕೀಯ ಕ್ಷೇತ್ರಕ್ಕೆ ಮಹಿಳೆ ಪ್ರವೇಶ ಪಡೆದ ಮೇಲೆ ಪರ್ಯಾಯ ಪದಗಳು ಹುಟ್ಟಿಕೊಂಡಿವೆ. ಇನ್ನೂ ಕೆಲವು ಪದಗಳಿಗೆ ಸ್ತ್ರೀಸೂಚಕ ಪದಗಳೇ ಹುಟ್ಟಿಕೊಂಡಿಲ್ಲ ಎಂದರೂ ತಪ್ಪಾಗಲಾರದು. ಉದಾ. ರಾಷ್ಟ್ರಪತಿ,

ಧಾರ್ಮಿಕ ಕ್ಷೇತ್ರದಲ್ಲೂ ಈ ಹಿಂದೆ ಮಹಿಳೆಗೆ ಪ್ರವೇಶವಿರಲಿಲ್ಲ. ಹಾಗಾಗಿ ಋಷಿ, ಗುರು, ಸನ್ಯಾಸಿ, ಮುಂತಾದಪದಗಳು ಪುರುಷ ಸೂಚಕವಾಗಿಯೇ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ.

ಅಧ್ಯಯನ ವ್ಯಾಪ್ತಿ

ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ಕನ್ನಡದ ಪ್ರಮುಖ ದಿನಪತ್ರಿಕೆಗಳಲ್ಲಿ ಆರು ತಿಂಗಳಿಂದೀಚೆಗೆ ಪ್ರಕಟಗೊಂಡ ಮಹಿಳಾ ಪುರವಣಿಗಳಲ್ಲಿ ಪ್ರಕಟವಾದ ಲೇಖನಗಳಿಗೆ ಮಾತ್ರ ಸೀಮಿತವಾಗಿದೆ. ಇಂತಹ ಲೇಖನಗಳಲ್ಲಿ ಬಳಕೆಯಾಗುವ ಭಾಷೆಯ ವಿಶಿಷ್ಟತೆಯು ಈ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ, ಕನ್ನಡ ಪ್ರಭ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ

ಬಳಸಿಕೊಳ್ಳಲಾಗಿದೆ. ಮಾರ್ಚ್ ೨೦೦೮ ರಿಂದ ಆಗಸ್ಟ್ ೨೦೦೮ ರವರೆಗಿನ ಮಹಿಳಾ ಪುರವಣಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಅಧ್ಯಯನವು ಮಹಿಳಾ ಪುರವಣಿಗೆಗಳಲ್ಲಿ ಭಾಷಿಕ ಅಧ್ಯಯನವನ್ನು ಸಮಾಜೋ-ಭಾಷಿಕ ನೆಲೆಯಲ್ಲಿ ಕೈಗೊಳ್ಳಲಾಗಿದೆ.

ಭಾರತದಲ್ಲಿ ಅನೇಕ ಪತ್ರಿಕೆಗಳು ಪ್ರಕಟವಾಗುತ್ತಿವೆ. ಆದರೆ ಅದರಲ್ಲಿ ಕನ್ನಡ ದಿನ ಪತ್ರಿಕೆಗಳಾದ ಪ್ರಜಾವಾಣಿ, ಉದಯವಾಣಿ, ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ, ಕನ್ನಡ ಪ್ರಭಗಳಲ್ಲಿ ಬರುವಂತಹ ಮಹಿಳಾ ಪುರವಣಿಗೆಯ ಭಾಷಾ ವಿಶೇಷತೆಯನ್ನು ಕುರಿತು ಅಧ್ಯಯನ ಮಾಡಲಾಗುತ್ತಿದೆ.

ಮಹಿಳಾ ಪುರವಣಿಗೆಗಳಲ್ಲಿ ಸ್ತ್ರೀಯರಿಗೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ಅಲ್ಲಿ ಬಳಕೆಯಾಗುವಂಥ ಹೊಸ ಹೊಸ ಶಬ್ದಗಳನ್ನು ರಚನೆ ಮತ್ತು ಬಳಕೆಯ ದೃಷ್ಟಿಕೋನದಿಂದ ಸಮಾಜೋ-ಭಾಷಿಕ ನೆಲೆಯಿಂದ ಈ ಅಧ್ಯಯನವನ್ನು ತೆಗೆದುಕೊಳ್ಳಲಾಗಿದೆ.

ಮಹಿಳಾ ಪುರವಣಿಗಳಲ್ಲಿ ಪದಗಳು ಪಲ್ಲಟವಾಗುತ್ತವೆ. ಇದನ್ನೇ ನಾವು ಪದಕೋಶಗಳ ಪಲ್ಲಟ ಎನ್ನಬಹುದು. ಪದಕೋಶಗಳು ಪಲ್ಲಟಗೊಳ್ಳುವಾಗ ಭಾಷಿಕ ಭಿನ್ನಾಂಶಗಳಿಂದ ಕೂಡಿದವುಗಳಾಗಿರುತ್ತವೆ. ಹಾಗಾಗಿ ಈ ಮಹಿಳಾ ಪುರವಣಿಗಳಲ್ಲಿ ಭಾಷೆ ಹೇಗೆ ಬಳಕೆಯಾಗುತ್ತದೆ, ಪದಗಳ ಪ್ರಯೋಗ, ಬಳಕೆ, ರಚನೆ, ಪಲ್ಲಟಗಳು ಹೇಗೆ ಆಗುತ್ತವೆ ಎಂಬುದನ್ನು ಸಮಾಜೋ-ಭಾಷಿಕ ನೆಲೆಯಿಂದ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸ್ತುತ ಅಧ್ಯಯನದ ರೂಪುರೇಷೆ

ಪ್ರಸ್ತುತ ಅಧ್ಯಯನವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದ್ದು, ದಿನಪತ್ರಿಕೆಗಳ ಮಹಿಳಾ ಪುರವಣಿಗಳಲ್ಲಿ ವ್ಯಕ್ತವಾಗುವ ಅಂಶಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಸ್ವರೂಪ, ಉದ್ದೇಶ, ವ್ಯಾಪ್ತಿಯನ್ನು ಕುರಿತು ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಎರಡರಲ್ಲಿ ಇದುವರೆಗೆ ಕನ್ನಡ ದಿನಪತ್ರಿಕೆಗಳ ಬಗ್ಗೆ ನಡೆದಿರುವ ಭಾಷಾ ಅಧ್ಯಯನಗಳನ್ನು ಗಮನಿಸಲಾಗಿದೆ. ಹಾಗೆಯೇ ನಾಡಿನ ಅನೇಕ ವಿದ್ವಾಂಸರು ಪತ್ರಿಕೆಗಳ ಭಾಷಾ ಸ್ವರೂಪ ಹಾಗೂ ಇತ್ಯಾದಿ ಅಂಶಗಳನ್ನು ಕುರಿತು ಹಾಗೆ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯನ್ನು ಕುರಿತು ಈಗಾಗಲೇ ಅಧ್ಯಯನವನ್ನು ಮಾಡಿರುತ್ತಾರೆ. ಅವರ ಅಧ್ಯಯನದ ಮಾಹಿತಿ, ಸಮೀಕ್ಷೆ, ಚರ್ಚೆ, ವಿಮರ್ಶೆಯನ್ನು ಸಂಕ್ಷಿಪ್ತವಾಗಿ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಭಾಷಾ ವೈವಿಧ್ಯತೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಭಾಷಾ ವೈವಿಧ್ಯತೆ ಎಂದರೆ ಸಾಮಾನ್ಯ ಪತ್ರಿಕೆಗಳಲ್ಲಿ ಪ್ರಕಟವಾದ ಮಹಿಳೆಯರ ಭಾಷೆಗೂ, ಮಹಿಳಾ ಪುರವಣಿಗಳಾದ ಕ್ರೀಡೆ, ಉದ್ಯೋಗ, ವಾಣಿಜ್ಯ, ಸಾಪ್ತಾಹಿಕ ಪುರವಣಿಗಳಲ್ಲಿ ಬಳಕೆಯಾದ ಭಾಷೆಗೂ ಇರುವ ವ್ಯತ್ಯಾಸವನ್ನು ಗುರುತಿಲಾಗಿದೆ.

ಉದಹಾರಣೆಗೆ 'ಸುಂದರಿಯರು' ಎಂದು ಸಾಮಾನ್ಯ ಪುಟಗಳಲ್ಲಿ ಪ್ರಕಟಗೊಂಡಿರುತ್ತದೆ. ಆದರೆ ಈ ಮಹಿಳಾ ಪುರವಣಿಗೆಗಳಲ್ಲಿ 'ಕಪ್ಪು ಸುಂದರಿಯರು' ಎಂದು ಪ್ರಕಟಗೊಂಡಿದೆ. ಇಲ್ಲಿ ಕಪ್ಪು ಎನ್ನುವುದು ಅವಳ ಮೈ ಬಣ್ಣವನ್ನು ಹೇಳುತ್ತದೆ. ಅಂದರೆ ಕಪ್ಪು ಇರುವ ಸ್ತ್ರೀಯರಲ್ಲಿ ಇವರು ಒಂದಿಷ್ಟು ಚೆಲುವೆಯರು ಎಂದರ್ಥವಾಗುತ್ತದೆ. ಕಪ್ಪು ಎನ್ನುವ ಪದವು ಗುಣವಾಚಕ ಪದವಾಗಿದೆ. ಅವಳ ಗುಣ ಸ್ವಭಾವವನ್ನು ತಿಳಿಸುತ್ತದೆ. ಅದೇ ರೀತಿ ಮಂದಮತಿ, ಗಂಡುಬೀರಿ, ವೀರರಾಣಿ, ಛಲಗಾತಿ ಎನ್ನುವ ಮುಂತಾದ ಶಬ್ದಗಳ ಭಾಷಾ ವೈವಿಧ್ಯತೆಯನ್ನು ತಿಳಿದುಕೊಳ್ಳುವುದು ಪ್ರಮುಖವಾಗಿದೆ.

ಅಧ್ಯಾಯ ನಾಲ್ಕರಲ್ಲಿ ಕನ್ನಡ ಪದಗಳ ಪ್ರಯೋಗ ಮತ್ತು ಬಳಕೆ ಹೇಗೆ ಆಗಿವೆ ಎಂಬುದನ್ನು ಕುರಿತು ವಿವರಿಸಲಾಗಿದೆ. ಹಾಗೂ ಇಂಗ್ಲಿಷ್ ಮಾದರಿಯ ಶಬ್ದಗಳು ಕನ್ನಡ ಭಾಷೆಯಲ್ಲಿ ಹೇಗೆ ಸ್ವೀಕೃತಗೊಂಡಿವೆ ಎಂಬುದನ್ನು ವಿಶ್ಲೇಷಣೆ ಮಾಡುವುದು.

ಕನ್ನಡ ಪದಗಳ ಪ್ರಯೋಗ ಮತ್ತು ಬಳಕೆ ಉದಾಹರಣೆಗೆ -

> **ನೇತಾರಣಿ:** ಮುಖಂಡತ್ವ ವಹಿಸುವವಳು, ಮುಖ್ಯಸ್ಥೆ.... ಕಾಂಗ್ರೆಸ್ ಪಕ್ಷದ ವರಿಷ್ಠತೆಯ ಚುಕ್ಕಾಣಿ ಹಿಡಿದಿರುವ ನಮ್ಮ ನಿಮ್ಮೆಲ್ಲರ ನೆಚ್ಚಿನ ನಾಯಕಿ, ರಾಷ್ಟ್ರ ನೇತಾರಣಿಗೆ ಹೃತ್ಪೂರ್ವಕವಾಗಿ ಸ್ವಾಗತಿಸೋಣ. ಇಲ್ಲಿ ನೇತಾರ ಎಂಬ ಪುರುಷ ಸೂಚಕ ಪದಕ್ಕೆ ಇಣಿ ಎಂಬ ಪ್ರತ್ಯಯ ಸ್ತ್ರೀ ಸೂಚಕವಾಗಿ ಪ್ರಯೋಗಗೊಂಡು ಕನ್ನಡ ಭಾಷೆಯಲ್ಲಿ ಬಳಕೆಗೊಂಡಿದೆ. ಅದೇರೀತಿ ಛಲಗಾತಿ, ಟೆನಿಸ್‌ಗಾತಿ, ಡಕಾಯಿತೆ ಇನ್ನು ಮುಂತಾದ ಕನ್ನಡ ಪದಗಳು ಬಳಕೆಯಾಗಿವೆ.

ಜಾಗತೀಕರಣದ ಪ್ರಭಾವದಿಂದ ಕನ್ನಡ ಭಾಷೆಯಲ್ಲಿ ಬಹಳಷ್ಟು ಬದಲಾವಣೆಯನ್ನು ಕಂಡಿದ್ದೇವೆ. ಏಕೆಂದರೆ ಭಾಷೆ ನಿಂತ ನೀರಲ್ಲ, ಅದು ಸಧಾ ಹರಿಯುವ ನೀರು, ಅದಕ್ಕೆ ಹೊಸ ಹೊಸ ಶಬ್ದ ಬಂದು ಸೇರಬೇಕು ಎಂದು ಭಾಷಾ ವಿಜ್ಞಾನಿಗಳೇ ಹೇಳಿದ್ದಾರೆ. ಹಾಗಾಗಿ ಇಂಗ್ಲಿಷಿನ ಕೆಲವು ಪದಗಳು ಕನ್ನಡ ಭಾಷೆಯಲ್ಲಿ ಸೇರಿಕೊಂಡಿವೆ.

ಉದಾಹರಣೆಗೆ ಸ್ನೋ,. ಪೌಡರ್, ಸ್ನ್ಯಾಕ್ಸ್, ಹೇರ್‌ರಿಮೋವರ್, ಲಿಪ್‌ಸ್ಟಿಕ್, ಸ್ಟಾರ್, ಸೆಂಟ್ ಹೀಗೆ ಮುಂತಾದ ಇಂಗ್ಲೀಷ ಶಬ್ದಗಳು ಬಂದು ಸೇರಿವೆ. ಇವುಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಬಳಕೆಯಾದ ಪದಕೋಶ ಪಲ್ಲಟವನ್ನು ಕುರಿತು ಅಧ್ಯಯನ ಮಾಡುವುದರ ಜೊತೆಗೆ ಮಹಿಳೆಯರನ್ನು ಕುರಿತು ಪದಕೋಶ ಪಲ್ಲಟ ಹೇಗೆ ಆಗುತ್ತದೆ ಎಂಬುದನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಇಡೀ ಅಧ್ಯಯನದ ಸಾಧಿತ ಬಾಧಿತ, ಅಂಶಗಳ ಫಲಿತಗಳನ್ನು ಕುರಿತು ಚರ್ಚೆಗೆ ಒಳಪಡಿಸಲಾಗಿದೆ.

ಅಧ್ಯಾಯ ಎರಡು

ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಅಧ್ಯಾಯ ಎರಡು

ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

ಕರ್ನಾಟಕದಲ್ಲಿ ಇಂದು ಸಾಕಷ್ಟು ಸಂಖ್ಯೆಯಲ್ಲಿ ದಿನಪತ್ರಿಕೆಗಳು ಪ್ರಕಟವಾಗುತ್ತಿವೆ. ಕನ್ನಡ ಪತ್ರಿಕಾ ಲೋಕವನ್ನು ಗಮನಿಸಿದಾಗ ಅದರ ಬೆಳವಣಿಗೆಯಲ್ಲಿ ಅನೇಕ ಏಳುಬೀಳುಗಳು ಇರುವುದು ತಿಳಿದುಬರುತ್ತದೆ. ಕರ್ನಾಟಕದಲ್ಲಿ ಪತ್ರಿಕೆಗಳನ್ನು ನಡೆಸಿಕೊಂಡು ಬಂದವರ ಬದುಕು, ಸಾಹಸ, ಧೈರ್ಯ ತುಂಬಾ ಶ್ಲಾಘನೀಯವಾದದ್ದು. ಕನ್ನಡ ಭಾಷಾ ಬೆಳವಣಿಗೆಗೆ ಪತ್ರಿಕೋದ್ಯಮದ ಕೊಡುಗೆ ಅನನ್ಯವಾದುದು. ಜರ್ಮನ್ ದೇಶದವರು ಮೊಟ್ಟಮೊದಲ ಬಾರಿಗೆ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಕುರಿತು ಡಿ. ವಿ. ನಾಯಕರು (೨೦೦೦) ಅವರು ಹೀಗೆ ಅಭಿಪ್ರಾಯ ಪಡುತ್ತಾರೆ. ಕ್ರಿಶ್ಚಿಯನ್ ಮಿಶನರಿಗಳು ತಮ್ಮ ಮತ ಪ್ರಚಾರಕ್ಕಾಗಿ ಮುದ್ರಣ ಯಂತ್ರ ತಂದರು. ಅವರೇ ಭಾರತೀಯ ಭಾಷೆಗಳಲ್ಲಿ ಪತ್ರಿಕೆಗಳು ಬರಲು ಕಾರಣರಾದರು. ಈಸ್ಟ್ ಇಂಡಿಯಾ ಕಂಪನಿಯ ಮಾಜಿ ಉದ್ಯೋಗಿ ಜೇಮ್ಸ್ ಆಗಸ್ಟಸ್ ಹಿಕ್ಕಿ ೧೭೮೦ ರಲ್ಲಿ ಭಾರತದ ಮೊದಲ ಪತ್ರಿಕೆಯಾದ "The Bengal Gazette" ಪ್ರಕಟಿಸಿದ. ಮುಂದೆ ದೇಶೀಯ ನಾಯಕರು ಭಾರತದ ವಿವಿಧ ಭಾಷೆಗಳಲ್ಲಿ ಪತ್ರಿಕೆಗಳನ್ನು ಪ್ರಾರಂಭಿಸಿದರು. ಹಾಗಾಗಿ 'ಜೇಮ್ಸ್ ಆಗಸ್ಟಸ್ ಹಿಕ್ಕಿ' ಅವರನ್ನು 'ಭಾರತೀಯ ಪತ್ರಿಕೋದ್ಯಮದ ಪಿತಾಮಹ' ಎಂತಲೂ ಕರೆಯುತ್ತಾರೆ.

೧೯ನೆಯ ಶತಮಾನದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕರ್ನಾಟಕದಲ್ಲಿಯೂ ಸಹ ಪತ್ರಿಕೋದ್ಯಮ ಕಾಲೂರಿತು. ಡಿ. ಬಿ. ನಾಯಕರು (೨೦೦೩) 'ಸಮೂಹ ಮಾಧ್ಯಮಗಳು ಮತ್ತು ಸಮಾಜ' ಎನ್ನುವ ಪುಸ್ತಕದಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ. ಸುಮಾರು ೧೮೪೨-೪೩ ರಲ್ಲಿ ಈ ಕ್ರೈಸ್ತ ಮಿಶನರಿಗಳು ತಮ್ಮ ಧಾರ್ಮಿಕ ಕಾರ್ಯಗಳಿಗೆ ಕರ್ನಾಟಕದಲ್ಲಿ ಕನ್ನಡ ಭಾಷೆಯ ಮುದ್ರಣ ಯಂತ್ರವನ್ನು ಬಳಕೆ ಮಾಡಿದರು. ತರುವಾಯ ಸುಮಾರು ೧೮೪೩ ರಲ್ಲಿ ಪ್ರಥಮ ಕನ್ನಡ ಭಾಷಾ ಪತ್ರಿಕೆಯಾದ ಮಂಗಳೂರು ಸಮಾಚಾರ ೧೮೪೩ ಕನ್ನಡ ಭಾಷೆಯಲ್ಲಿ ಮುದ್ರಣಗೊಂಡ ಪ್ರಥಮ ಪತ್ರಿಕೆಯಾಯಿತು. ಮುಂದೆ ಕೆಲವೇ ವರ್ಷಗಳಲ್ಲಿ ಬೆಂಗಳೂರು, ಮೈಸೂರು, ಮಂಗಳೂರು ಹಾಗೂ ಬೆಳಗಾವಿಯಲ್ಲಿ ಮುದ್ರಣ ಯಂತ್ರಗಳನ್ನು ಸ್ಥಾಪಿಸಲಾಯಿತು.

ತರುವಾಯ ನಾಡಿನ ವಿದ್ವಾಂಸರಾದ ಎಂ. ವೆಂಕಟಕೃಷ್ಣಯ್ಯ, ಡಿ. ವಿ. ಗುಂಡಪ್ಪ, ತಿ. ತಾ. ಶರ್ಮ, ಸಿದ್ದನಹಳ್ಳಿ ಕೃಷ್ಣಶರ್ಮ, ಮೊಹರೆ ಹಣಮಂತರಾಯ ಮುಂತಾದ ಪತ್ರಕರ್ತರು ಪತ್ರಿಕೆಗಳ ಪ್ರಕಟಣ ಕಾರ್ಯದಲ್ಲಿ ತೊಡಗಿದರು. ಹೀಗೆಯೇ ಕನ್ನಡ ಭಾಷೆಯಲ್ಲಿ ಪತ್ರಿಕೋದ್ಯಮದ ಬೆಳವಣಿಗೆಯನ್ನು ಕಂಡಿತು. ಪ್ರಾರಂಭದ ಕನ್ನಡ ಭಾಷೆಯ ಪತ್ರಿಕೆಗಳಾದ ತಾಯಿನಾಡು (೧೯೨೭), ಪ್ರಜಾಮತ (೧೯೩೩), ಸಂಯುಕ್ತ ಕರ್ನಾಟಕ (೧೯೩೩), ಜಯ ಕರ್ನಾಟಕ, ಕೇಸರಿ ಇನ್ನು ಮುಂತಾದ ಕನ್ನಡ ಭಾಷೆಯ ದಿನಪತ್ರಿಕೆಗಳು ಕನ್ನಡ ಭಾಷೆಯನ್ನು ಬಲಪಡಿಸುವುದರೊಂದಿಗೆ ಸಾಮಾಜಿಕ ಕಾರ್ಯದಲ್ಲಿ ತೊಡಗಿದ್ದವು ಎಂಬ ಅಂಶ ವ್ಯಕ್ತವಾಗುತ್ತದೆ.

ಪತ್ರಿಕೋದ್ಯಮ ಪ್ರಸ್ತುತ ಸಂದರ್ಭದಲ್ಲಿ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆಯ ದಿನಪತ್ರಿಕೆಗಳು ಕನ್ನಡ ಭಾಷೆಯನ್ನು ಬೆಳೆಸುವ, ಬಲಪಡಿಸುವ ಕಾರ್ಯದಲ್ಲಿ ತೊಡಗಿವೆ. ಈ ಕುರಿತು ಹಿರಿಯ ವಿದ್ವಾಂಸರಾದ ಡಾ. ಸೋಮಶೇಖರ ಗೌಡ (೧೯೯೯) ಅವರು ಹೀಗೆ ಹೇಳಿದ್ದಾರೆ. ಕನ್ನಡ ಭಾಷೆ ಅತ್ಯಂತ ಸಮೃದ್ಧವಾಗಿ ಬಳಕೆಯಾಗುತ್ತಿರುವ ಯಾವುದಾದರೂ ಕ್ಷೇತ್ರ ಇದೆ ಎಂದಾದರೆ ಅದು ಪತ್ರಿಕೋದ್ಯಮ. ಕರ್ನಾಟಕದಲ್ಲಿ ಪತ್ರಿಕೋದ್ಯಮದ ಇತಿಹಾಸ ಕೆದಕಿದರೆ ಅದಕ್ಕೆ ೧೫೦ ವರ್ಷಗಳ ಚರಿತ್ರೆ ಇಲ್ಲ, ಆದರೆ ಪತ್ರಿಕೋದ್ಯಮದಲ್ಲಿ ಕಂಡುಬರುವ ಪ್ರಗತಿ ಆಧುನಿಕತೆಯ, ನಾಗರಿಕತೆಯ ನಂಟು, ಯಾರು ಮೆಚ್ಚುವಂತಹದ್ದು, ಯಾವ ಬಗೆಯವು ಯಾವ ಧೋರಣೆಯವು? ಧ್ಯೇಯೋದ್ದೇಶದವು? ಎಂಬ ವಿಚಾರ ಒತ್ತಟ್ಟಿಗಿರಲಿ ಇವೆಲ್ಲ ಕನ್ನಡದ ಬಗೆಗೆ ಕಾಳಜಿಯನ್ನುಳ್ಳವು. ಕನ್ನಡವನ್ನು ಕಟ್ಟಲು ಕಂಕಣಧಾರಿತವು ಎಂಬುದು ಸುಳ್ಳಲ್ಲ ಎಂಬ ಅಂಶ ವ್ಯಕ್ತವಾಗುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ಪತ್ರಿಕೆಗಳು ಭಾಷೆಯನ್ನು ಬಳಸುವಲ್ಲಿ ಸಹಕಾರಿಗಳಾಗಿವೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆಯ ದಿನಪತ್ರಿಕೆಗಳು ಪ್ರಕಟಗೊಳ್ಳುತ್ತಾ ಇವೆ. ಪತ್ರಿಕೆಯ ಭಾಷೆ ಒಂದು ಪ್ರತ್ಯೇಕ ಭಾಷೆಯ ದಿನಪತ್ರಿಕೆಗಳಾಗಿ ಪ್ರಕಟಗೊಳ್ಳುತ್ತಾ ಇವೆ. ಪತ್ರಿಕೆಯ ಭಾಷೆ ಒಂದು ಪ್ರತ್ಯೇಕ ಭಾಷಾ ಪ್ರಭೇದವಾಗಿ ಗೋಚರಿಸುತ್ತದೆ. ಕನ್ನಡ ಪತ್ರಿಕೆಗಳು ಕನ್ನಡ ಭಾಷೆಯನ್ನು ನವನವೀನಗೊಳಿಸುವುದರ ಜೊತೆಗೆ ಅದರ ಬೆಳವಣಿಗೆಗೂ ಕಾರಣವಾಗಿದೆ.

ಕನ್ನಡ ಪತ್ರಿಕೋದ್ಯಮದಲ್ಲಿ ಕನ್ನಡ ಭಾಷೆಯ ಬೆಳವಣಿಗೆಯನ್ನು ಕುರಿತಾದಂತಹ ಅಧ್ಯಯನಗಳು, ವಿದ್ವಾಂಸರ ಪುಸ್ತಕಗಳು ಹಾಗೂ ಬಿಡಿ ಲೇಖನಗಳು ಕಂಡುಬರುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ ಕನ್ನಡ ಪತ್ರಿಕೋದ್ಯಮದ ಬಗ್ಗೆ, ದಿನಪತ್ರಿಕೆಗಳ ಬಗ್ಗೆ ಅದರ ಕಾರ್ಯವ್ಯಾಪ್ತಿಯ ಬಗ್ಗೆ ಹಾಗೂ ಮುಖ್ಯವಾಗಿ ಅದರ ಭಾಷಾ ಬಳಕೆಯ ವಿಚಾಗಳನ್ನು ಒಳಗೊಂಡ ನಾಡಿನ ಅನೇಕ ಭಾಷಾ ಬಳಕೆಯ ವಿಚಾರಗಳನ್ನು ನಾಡಿನ ಅನೇಕ ವಿದ್ವಾಂಸರು ಅಧ್ಯಯನವನ್ನು ಮಾಡಿದ್ದಾರೆ. ಅವುಗಳಲ್ಲಿ ನನ್ನ ಅಧ್ಯಯನದ ಸಂದರ್ಭದಲ್ಲಿ ಗಮನಕ್ಕೆ ಬರುವಂತಹ ಕೆಲವು ಪುಸ್ತಕಗಳಲ್ಲಿ ದಿನ ಪತ್ರಿಕೆಗಳ ಕಾರ್ಯ ಅದರ ಮಹತ್ವ, ಅದರ ಭಾಷಾ ಬಳಕೆಯ ವಿಚಾರಗಳನ್ನು ಅವಲೋಕಿಸಲಾಗಿದೆ.

ಯಾವುದೇ ಕ್ಷೇತ್ರದಲ್ಲಿಯಾದರೂ ಸರಿ ಅದರ ಬೆಳವಣಿಗೆಯನ್ನು ಗುರುತಿಸುವ ಅಧ್ಯಯನಗಳು ನಡೆಯುತ್ತಲೇ ಇರುತ್ತವೆ. ಪತ್ರಿಕಾ ಕ್ಷೇತ್ರವೂ ಅದಕ್ಕೆ ಹೊರತಲ್ಲ. ಅನೇಕ ಪುಸ್ತಕಗಳು ಪತ್ರಿಕೆಯ ಒಳಹೊರಗನ್ನು ಪರಿಚಯಿಸುವ ಕೆಲಸ ಮಾಡಿವೆ. ಪತ್ರಿಕೆಯ ಇತಿಹಾಸ, ಬೆಳವಣಿಗೆ, ಸ್ವರೂಪ, ಪತ್ರಿಕಾರಂಗದ ಕಾರ್ಯವೈಖರಿ, ವಿವಿಧ ಅಂಶಗಳು, ಪತ್ರಿಕೆಯ ಭಾಷೆ ಹೀಗೆ ಹತ್ತು ಹಲವು ಅಂಶಗಳ ಬಗೆಗಿನ ಅಧ್ಯಯನಗಳು ನಡೆದಿವೆ ಹಾಗೂ ನಡೆಯುತ್ತಿವೆ.

ಇಡೀ ಪತ್ರಿಕಾ ಭಾಷೆಯ ಕುರಿತಾದಂತಹ ಅಧ್ಯಯನಗಳಲ್ಲಿ ಬಹುಮುಖ್ಯವಾಗಿ ಗಮನಿಸುವ ಅಧ್ಯಯನವೆಂದರೆ ಲೀಲಾವತಿ ಎಂ. ಎನ್. ರವರ ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ 'ಲಾಂಗ್ವೇಜ್ ಆಫ್ ಹೆಡ್‌ಲೈನ್ಸ್ ಇನ್ ಕನ್ನಡ ಡೈಲೀಸ್ (೧೯೯೬, ಮೈಸೂರು ವಿಶ್ವವಿದ್ಯಾಲಯ, ಮೈಸೂರು) ಕನ್ನಡ ದಿನಪತ್ರಿಕೆಗಳಲ್ಲಿನ ತಲೆಬರಹಗಳ ವಿವಿಧ ಅಂಶಗಳನ್ನು ಆಧರಿಸಿ ಅಧ್ಯಯನ ನಡೆಸಲಾಗಿದೆ. ತಲೆಬರಹಗಳಲ್ಲಿ ನಾಮಪದಯುಕ್ತ ತಲೆಬರಹ, ಕ್ರಿಯಾಪದಯುಕ್ತ ತಲೆಬರಹ, ಹಲವು ಅಂಶಗಳ ತಲೆಬರಹ, ಬಹುಸಾಲಿನ ತಲೆಬರಹಗಳಲ್ಲಿ ಲೇಖನ ಚಿಹ್ನೆಗಳ ಬಳಕೆ, ಆಲಂಕಾರಿಕ ಮಾತುಕತೆಗಳ ತಲೆಬರಹ - ಹೀಗೆ ತಲೆಬರಹದ ವಿವಿಧ ಅಂಶಗಳನ್ನು ಆಧರಿಸಿ ಅಧ್ಯಯನವನ್ನು ಮಾಡಲಾಗಿದೆ. ಇದನ್ನು ಕನ್ನಡ ಪತ್ರಿಕಾ ಲೋಕದ ಭಾಷೆಯ ಕುರಿತಾಗಿ ನಡೆದಿರುವ ಪ್ರಮುಖ ಅಧ್ಯಯನವೆಂದು ಹೇಳಬಹುದು.

ವಿನೋದ ದುಬೆಯವರು (೧೯೮೯) 'ನ್ಯೂಸ್ ಪೇಪರ್ ಇಂಗ್ಲಿಷ್ ಇನ್ ಇಂಡಿಯಾ' ಎಂಬ ಅಧ್ಯಯನವನ್ನು ಮಾಡಿದ್ದಾರೆ. ಇವಾನ್ಸ್ ಎಚ್. ರವರು ೧೯೭೪ ನ್ಯೂಸ್ ಹೆಡ್‌ಲೈನ್ಸ್ ಕುರಿತು ಅಧ್ಯಯನ ನಡೆಸಿದ್ದಾರೆ. ಟಿ. ಮಣಿಯನ್ (೧೯೭೮)ರವರು 'ದಿ ಲಾಂಗ್ವೇಜ್ ಆಫ್ ತಮಿಳ್ ಡೈಲೀಸ್' ಎಂಬ ಪಿಎಚ್.ಡಿ. ಅಧ್ಯಯನವನ್ನು ಮಾಡಿದ್ದಾರೆ. ಪತ್ರಿಕೆಯ ಭಾಷೆಯ ಕುರಿತಾದಂತಹ ಅಧ್ಯಯನಗಳು ಇನ್ನೂ ನಡೆಯುತ್ತಿವೆ.

ಭಾರತೀಯ ಪತ್ರಿಕೋದ್ಯಮ ಕುರಿತಂತೆ ಹಿರಿಯ ವಿದ್ವಾಂಸರಾದ ಡಿ. ವಿ. ಗುಂಡಪ್ಪನವರು ಬರೆದ 'ವೃತ್ತಪತ್ರಿಕೆ' (೧೯೨೮) ಎಂಬ ಪುಸ್ತಕದಲ್ಲಿ ಡಿ. ವಿ. ಜಿ. ಯವರು ಕ್ರಿ.ಶ. ೧೯೨೮ರಲ್ಲೆ ವೃತ್ತಪತ್ರಿಕೆಯ ಸ್ವರೂಪ, ಅದರ ಮಹತ್ವ ಹಾಗೂ ಕರ್ತವ್ಯಗಳನ್ನು ವಿವೇಚನೆ ಮಾಡಿರುವುದರ ಮೂಲಕ ಅಂತಹ ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹಗಲಿರುಳು ಶ್ರಮಿಸಿರುವ ಅನುಭವವನ್ನು ಹೇಳಿಕೊಂಡಿದ್ದಾರೆ. ಈ ಪುಸ್ತಕದಲ್ಲಿ ಮುಖ್ಯವಾಗಿ ಗಮನಿಸುವ ಅಂಶವೆಂದರೆ, ಕನ್ನಡ ಭಾಷಾಭಿವೃದ್ಧಿಯ ಚಿಂತನೆಗಳನ್ನು ಅವರ ಅನುಭವದ ನೆಲೆಯಲ್ಲಿ ವಿವೇಚಿಸಲಾಗಿದೆ. ಪತ್ರಿಕೆಯ ಭಾಷೆ ಸರಳತೆ, ಸ್ಪಷ್ಟತೆ ಹಾಗೂ ನಿಷ್ಕರ್ಷೆಯನ್ನು (ಹೊಸ ಬೆಳವಣಿಗೆ) ಹೊಂದಿರಬೇಕೆಂದು ತಿಳಿಸಲಾಗಿದೆ. ಕನ್ನಡ ಭಾಷೆಯ ಬೆಳವಣಿಗೆಗೆ ಪತ್ರಿಕೆಗಳು ಪೂರಕವಾಗಿರಬೇಕು. ಅದು ಜನಸಾಮಾನ್ಯರ ಭಾಷೆಗೆ ಹತ್ತಿರವಾಗಿರಬೇಕು, ಅದರ ಶೈಲಿ, ವಿವರಣೆ ಕುರಿತಾದಂತಹ ಸಲಹೆ, ಹಾಗೆಯೇ ಪತ್ರಿಕಾ ವೃತ್ತಿ, ಪತ್ರಿಕೋದ್ಯಮಿಯ ಆದರ್ಶ ಕರ್ತವ್ಯಗಳನ್ನು

ಕುರಿತು ಸಲಹೆಗಳನ್ನು ನೀಡಿದ್ದಾರೆ. ವೈ. ಎನ್. ಕೃಷ್ಣಮೂರ್ತಿಯವರು 'ಇದು ಸುದ್ದಿ ಇದು ಸುದ್ದಿ' ೧೯೮೫ ಎಂಬ ಪುಸ್ತಕದಲ್ಲಿ ವೃತ್ತಪತ್ರಿಕೆಗಳ ಬಗ್ಗೆ ಅದರ ಸ್ವರೂಪ ಇತ್ಯಾದಿ ಅಂಶಗಳ ಬಗ್ಗೆ ಚರ್ಚಿಸಿದ್ದಾರೆ. ಸುದ್ದಿ ಎಂದರೇನು, ಯಾವುದು ಸುದ್ದಿ, ಸುದ್ದಿಯ ಮಹತ್ವ ಹೇಗಿರಬೇಕು ಎಂಬುದನ್ನು ಕುರಿತು ವಿವೇಚಿಸಲಾಗಿದೆ. ಹಾಗೆಯೇ ವೃತ್ತಪತ್ರಿಕೆಗಳ ಭಾಷಾ ಸ್ವರೂಪ, ತಲೆಬರಹ, ವರದಿಗಳಲ್ಲಿ ಕನ್ನಡ ಭಾಷೆಯ ಬಳಕೆಯನ್ನು ಕುರಿತು ತಿಳಿಸಲಾಗಿದೆ. ಈ ವಿಷಯಗಳಲ್ಲಿ ಅಲ್ಲಿನ ಪದ ಬಳಕೆ ಸರಳವಾಗಿರಬೇಕು. ಪ್ರಾಸಬದ್ಧವಾದ ಭಾಷಾ ಬಳಕೆ ಹೊಂದಿರಬೇಕು. ಪತ್ರಿಕೆಗಳು ಭಾಷಾಭಿವೃದ್ಧಿಗೆ ಪೂರಕವಾಗಿರಬೇಕೆಂದು ಸಲಹೆ ನೀಡಲಾಗಿದೆ.

ಎಂ. ವಿ. ಕಾಮತ್‌ರವರು ವೃತ್ತ ಪತ್ರಿಕೋದ್ಯಮ ೧೯೯೦ ಎಂಬ ಪುಸ್ತಕದಲ್ಲಿ ಉಪಯುಕ್ತ ಮಾಹಿತಿಯನ್ನು ಒದಗಿಸಿದ್ದಾರೆ. ಪತ್ರಿಕೆಯನ್ನು ಪ್ರಸಾರಗೊಳಿಸುವಲ್ಲಿ ಅತಿ ಮುಖ್ಯವಾಗಿ ಬೇಕಾಗುವ ವರದಿಗಾರ, ಉಪಸಂಪಾದಕ, ಸಂಪಾದಕ ಹಾಗೂ ಇನ್ನಿತರ ಉಪಯುಕ್ತ ಮಾಹಿತಿಯನ್ನು ಒದಗಿಸಲಾಗಿದೆ. ಪ್ರತಿಯೊಂದು ಸುದ್ದಿ ಸಂಪಾದನೆಗೆ ಅದರದೇ ಆದ ಭಾಷಾ ಬಳಕೆ ಅನಿವಾರ್ಯ. ಅದರ ವಿಷಯದಿಂದ ವಿಷಯಗಳಿಗೆ ಭಿನ್ನವಾಗಿರುತ್ತದೆ ಎಂಬುದನ್ನು ನಿಯತಕಾಲಿಕೆಗಳ ಬರವಣಿಗೆಯ ಕ್ರಮ, ಶೀರ್ಷಿಕೆಗಳ ಬರಹದ ಬಗ್ಗೆ ಕನ್ನಡ ಭಾಷೆಯನ್ನು ಹೇಗೆ ಬಳಸಿ, ಬೆಳಸಬೇಕೆಂದು ತಿಳಿಸಿದ್ದಾರೆ.

ಪತ್ರಿಕೆಯ ಪರಿಸರದಲ್ಲಿ ಕನ್ನಡ ಭಾಷೆಯು ಹೇಗೆ ಬಳಕೆಯಾಗಬೇಕು, ಹಾಗೆಯೇ ಅದರ ಬೆಳವಣಿಗೆಯನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ಪ್ರಜಾವಾಣಿ ಸಂಪಾದಕರಾದ ಶ್ರೀ ಪದ್ಮರಾಜ ದಂಡಾವತಿಯವರ 'ಪತ್ರಿಕಾಭಾಷೆ' (೨೦೦೩) ಎನ್ನುವ ಪುಸ್ತಕವು ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಪತ್ರಿಕಾ ಮಾಧ್ಯಮದಲ್ಲಿ ಪತ್ರಕರ್ತನಿಗೆ ಭಾಷೆಯು ಮುಖ್ಯ ಸರಕು. ನಂತರ ವಿಷಯ ವಿವರಣೆಗೆ ಮಹತ್ವ ಕೊಡಬೇಕೆಂದು ತಿಳಿಸಿದ್ದಾರೆ. ಪತ್ರಕರ್ತನಾಗಬಯಸುವವರಿಗೆ ಮೊದಲು ಭಾಷಾಜ್ಞಾನ ಮುಖ್ಯ ಎಂಬ ವಿಚಾರವನ್ನು ತಿಳಿಸಲಾಗಿದೆ. ಪತ್ರಿಕಾ ಭಾಷೆಯ ಸ್ಪಷ್ಟತೆ, ಪದರಚನೆ, ಹೊಸ ಪದಗಳ ಸೃಷ್ಟಿ, ಸಂಕ್ಷಿಪ್ತ ರೂಪಗಳ ಬಳಕೆ ಇತ್ಯಾದಿ ವಿಷಯಗಳಿಂದ ಪತ್ರಿಕಾ ಭಾಷೆ ಕುರಿತು ಸೂಕ್ತ ಸಲಹೆಯನ್ನು ನೀಡಲಾಗಿದೆ. ಸಮರ್ಥವಾದ, ಸತ್ವಯುತವಾದ ಹಾಗೂ ಸುಂದರವಾದ ಭಾಷೆ, ಪತ್ರಿಕೆಯ ಭಾಷೆ ಆಗಬೇಕು. ಕನ್ನಡ ಭಾಷೆ ಆ ನಿಟ್ಟಿನಲ್ಲಿ ಬೆಳವಣಿಗೆ ಹೊಂದಬೇಕು ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪರಿಸರದಲ್ಲಿ ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಉಪಯುಕ್ತ ಪುಸ್ತಕವಾಗಿದೆ.

ಹಾಗೆಯೇ ಇನ್ನೊಂದು ಮುಖ್ಯವಾಗಿ ಗಮನಿಸುವಂತಹ ಪುಸ್ತಕವೆಂದರೆ ಡಾ. ದೇವೇಂದ್ರ ಕುಮಾರ ಹಕಾರಿಯವರ 'ವೃತ್ತಪತ್ರಿಕೆ ವರದಿ ಲೇಖನ' ೧೯೮೫ ಎಂಬ ಪುಸ್ತಕವು ಪತ್ರಿಕಾ ಪರಿಸರದಲ್ಲಿ ಪತ್ರಿಕೆಗಳಿಗೆ ಭಾಷಾ ಶೈಲಿ ಮುಖ್ಯವೆಂಬ ವಿಚಾರವನ್ನು ನಿರೂಪಿಸಲಾಗಿದೆ. ವರದಿಗಾರನಿಗೆ ಭಾಷಾಜ್ಞಾನದ ಪರಿಚಯ ಅತಿಮುಖ್ಯ. ವ್ಯಾಕರಣಬದ್ಧ ಬಳಕೆ, ಪದಗಳ ಬಗ್ಗೆ ತಿಳುವಳಿಕೆ ಇರಬೇಕು. ಆಯಾ ವಲಯದ

ಪಾರಿಭಾಷಿಕಗಳ ತಿಳುವಳಿಕೆ ವರದಿಗಾರನಿಗೆ ಮುಖ್ಯವಾಗಿ ತಿಳಿದಿರಬೇಕು ಎಂಬ ಸಲಹೆಗಳನ್ನು ನೀಡಲಾಗಿದೆ.

ಪಾರಿಭಾಷಿಕ ಕೋಶಗಳ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡುವಂತಹ ಕೃತಿ ಕೆ. ಆರ್. ಇಕ್ಬಾಲ್ ಅಹ್ಮದ್‌ರವರ 'ಪತ್ರಿಕೋದ್ಯಮದ ಮೂಲ ತತ್ವಗಳು' (೨೦೦೩) ಎಂಬ ಪುಸ್ತಕ ಸುದ್ದಿ ಸಂಗ್ರಹ, ಅದರ ಪಾತ್ರ, ಬಳಕೆ ಮುಂತಾದ ವಿಚಾರಗಳನ್ನು ಇಲ್ಲಿ ಅಧ್ಯಯನ ಮಾಡಿದ್ದಾರೆ.

ವರದಿಗಾರಿಕೆ, ಸುದ್ದಿ, ಲೀಡ್ ಅಂಶಗಳನ್ನು ಕುರಿತು ಶ್ರೀ ಪದ್ಮರಾಜ ದಂಡಾವತಿಯವರ 'ರಿಪೋರ್ಟಿಂಗ್' (೨೦೦೪) ಎಂಬ ಪುಸ್ತಕವೂ ಸಹ ಉಪಯುಕ್ತ ಮಾಹಿತಿಯನ್ನು ನೀಡುತ್ತದೆ. ಸುದ್ದಿ, ಲೀಡ್, ತಲೆಬರಹಗಳಲ್ಲಿ ಪದ ಬಳಕೆ, ಭಾಷಾ ಬಳಕೆಯ ಮುಖ್ಯ ವಿಚಾರಗಳನ್ನು ಚರ್ಚಿಸಲಾಗಿದೆ.

ಅದೇ ರೀತಿಯಾಗಿ ವಿವಿಧ ವಲಯದ ಪಾರಿಭಾಷಿಕ ಉಪಯುಕ್ತ ಪುಸ್ತಕಗಳೆಂದರೆ 'ಮಾಧ್ಯಮ ಪಾರಿಭಾಷಿಕ' (೧೯೯೨), ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು. ಇದೊಂದು ಪಾರಿಭಾಷಿಕ ಪದಗಳ ಕೈಪಿಡಿಯಾಗಿದೆ. ನ್ಯಾಯಾಂಗ, ವಿದ್ಯುನ್ಮಾನ ಮಾಧ್ಯಮ, ಗಣಕಯಂತ್ರ, ಕುದುರೆಜೂಜು, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಬಳಸಲಾದ ಪಾರಿಭಾಷಿಕ ಪದಗಳ ಸಂಗ್ರಹದ ದೃಷ್ಟಿಯಿಂದ ಹಾಗೆಯೇ ಅರ್ಥೈಸುವ ದೃಷ್ಟಿಯಿಂದ ಮಹತ್ವದ್ದಾಗಿದೆ.

ಪತ್ರಿಕಾ ವಲಯದಲ್ಲಿ ಕನ್ನಡ ಭಾಷೆ ಸಮೃದ್ಧವಾಗಿ ಬಳಕೆಯಾಗುತ್ತಿದೆ. ಅದು ಹೊಸ ಹೊಸ ಪ್ರಯೋಗವನ್ನು ಪದ ಸೃಷ್ಟಿಗಳನ್ನು ತಂತಾನೆ ಬಳಕೆ ಮಾಡುತ್ತದೆ ಎಂಬ ವಿಚಾರವನ್ನು ಕುರಿತು ಡಾ. ಕೆ. ವಿ. ನಾರಾಯಣರವರು ಸಂಪಾದಿಸಿದ 'ದಿನ ದಿನ ೧' (೧೯೯೭) ಹಾಗೂ ಡಾ. ಸಾಂಬಮೂರ್ತಿಯವರು ಸಂಪಾದಿಸಿದ 'ದಿನ ದಿನ ೨' (೨೦೦೧) ಹಾಗೂ ಡಾ. ಪಿ. ಮಹಾದೇವಯ್ಯನವರು ಸಂಪಾದಿಸಿದ 'ದಿನ ದಿನ ೩' (೨೦೦೬) ಕೃತಿಗಳು ಪತ್ರಿಕಾ ಪರಿಸರದಲ್ಲಿ ಹೊಸ ಪದಗಳ ಸೃಷ್ಟಿ ಹಾಗೂ ಅದರ ಬಳಕೆ ವಿಧಾನಗಳನ್ನು ಕುರಿತು ವಿವೇಚಿಸಿರುವ ಸೂಕ್ತ ಪುಸ್ತಕಗಳಾಗಿವೆ.

ಡಾ. ಟಿ. ಸಿ. ಪೂರ್ಣಿಮಾರವರ ಪಿಎಚ್.ಡಿ. ಮಹಾಪ್ರಬಂಧದ ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ (೨೦೦೧) ಎಂಬ ಪುಸ್ತಕವೂ ಸಹ ಸಮೂಹ ಮಾಧ್ಯಮಗಳಲ್ಲಿ ಕನ್ನಡ ಭಾಷೆಯ ಅಭಿವೃದ್ಧಿಯ ಮಹತ್ವಗಳನ್ನು ದಾಖಲಿಸಲಾಗಿದೆ. ಆಧುನಿಕ ಸಮೂಹ ಮಾಧ್ಯಮಗಳ ಪರಿಣಾಮದಿಂದ ಭಾಷೆಯಲ್ಲಿ 'ಈ'ಕರಣ, ಭಾಷಾಂತರ, ಅನ್ಯ ಭಾಷಾ ಸ್ವೀಕರಣ, ಭಾಷಾ ಮಿಶ್ರಣದಿಂದ ಕನ್ನಡ ಭಾಷೆಯ ವಲಯ ವಿಸ್ತೀರ್ಣಗೊಳ್ಳುತ್ತದೆ ಎಂಬ ವಿಚಾರಗಳನ್ನು ತಿಳಿಸಲಾಗಿದೆ.

ಇವುಗಳಲ್ಲದೆ, ಸಮೂಹ ಸಂವಹನ ಕುರಿತು ಪರಿಚಯಾತ್ಮಕ ಸ್ವರೂಪದ ಪುಸ್ತಕಗಳು ಹಲವಾರಿದ್ದು ಅವುಗಳಲ್ಲಿ ಪತ್ರಿಕಾರಂಗದ ಮಾಹಿತಿಗಳು ಇವೆ. ಶ್ರೀನಿವಾಸ್ ಹಾವನೂರರು ೨೦೦೪ 'ಕನ್ನಡ ಪತ್ರಿಕಾ

ಸೂಚಿ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಇದರಲ್ಲಿ ಕನ್ನಡ ಪತ್ರಿಕೆಗಳ ಹೆಸರುಗಳಿವೆ. ಇವು ಕಾಲಾನುಕ್ರಮ ರೂಪದಲ್ಲಿದ್ದು ಇದಕ್ಕೆ ಸಂಬಂಧಿಸಿದಂತೆ ದೀರ್ಘವಾದ ಪ್ರಸ್ತಾವನೆಯೂ ಇದೆ.

ಪತ್ರಿಕೆಗಳಲ್ಲಿನ ಕ್ರೀಡಾ ಪುರವಣೆಯ ಭಾಷೆ ಕುರಿತು ಸೂಗಣ್ಣನವರು 'ಕ್ರೀಡಾ ಪುಟದ ಭಾಷೆ' ೨೦೦೭ ಎಂಬ ಎಂ.ಫಿಲ್. ಸಂಪ್ರಬಂಧದಲ್ಲಿ ಕ್ರೀಡಾ ಪುಟದಲ್ಲಿ ಭಾಷೆ ಯಾವ ರೀತಿಯಾಗಿ ಬಳಕೆಯಾಗಿದೆ ಎಂಬುದನ್ನು ತಿಳಿಸಿದ್ದಾರೆ. ಈ ಗ್ರಂಥದಲ್ಲಿ ಇಂಗ್ಲಿಷ್ ಪದಗಳೇ ಅಲ್ಲದೆ ಆಟದ ಸಂದರ್ಭದಲ್ಲಿ ಬಳಕೆಯಾಗುವ ವಿಶೇಷ ಪದಗಳು, ಕ್ರಿಯಾಪದಗಳು, ಗುಣವಾಚಕಗಳು, ಸಂಖ್ಯಾವಾಚಕಗಳು, ಯಾವ ರೀತಿ ಬಳಕೆಯಾಗಿವೆ ಎಂಬುದನ್ನು ಚರ್ಚಿಸಿದ್ದಾರೆ. ಇದೊಂದು ಒಳ್ಳೆಯ ಅಧ್ಯಯನವಾಗಿದ್ದು ಕನ್ನಡ ಭಾಷೆಯಲ್ಲಿ ಆಗುತ್ತಿರುವ ಮಾರ್ಪಾಟುಗಳ ಬಗೆಗೆ ಬೆಳಕು ಚಲ್ಲುತ್ತದೆ.

ಕ್ರೈಂನ್ಯೂಸ್‌ನಲ್ಲಿ ಬಳಕೆಯಾಗುವ ಭಾಷೆಯನ್ನು ಕುರಿತು ಹೂಲೆಪ್ಪ ಸಂಡೂರು ರವರು ದೂರದರ್ಶನದಲ್ಲಿ 'ಕ್ರೈಂ ನ್ಯೂಸ್' ಭಾಷಿಕ ಅಧ್ಯಯನ ಎನ್ನುವ ಎಂ.ಫಿಲ್ ಸಂಪ್ರಬಂಧವನ್ನು ಬರೆದಿದ್ದಾರೆ. ಇದರಲ್ಲಿ ಕ್ರೈಂ ಭಾಷೆಯ ಬಳಕೆಯನ್ನು ಕುರಿತು ಚರ್ಚಿಸಿದ್ದಾರೆ. ಕ್ರೈಂನ್ಯೂಸ್‌ನಲ್ಲಿ ಪದಗಳ ರಚನೆ, ಧ್ವನಿ ರಚನೆ, ವಾಕ್ಯರಚನೆ ಹೇಗೆ ಆಗುತ್ತವೆ ಎಂಬುದನ್ನು ವಿವರಿಸಿದ್ದಾರೆ. ಇಷ್ಟಲ್ಲದೆ ಇಂಗ್ಲೀಷ್ ಪದಗಳು, ಕ್ರೈಂನ್ಯೂಸ್ ಪದಕೋಶ, ಕ್ರೈಂಸ್ಟೋರಿ ಮಾದರಿಗಳು ಇವುಗಳನ್ನು ಕುರಿತು ಸಾಕಷ್ಟು ಮಾಹಿತಿಯನ್ನು ಕಲೆ ಹಾಕಲಾಗಿದೆ.

ಕನ್ನಡ ವಿ ವಿ ಯ ಮಹಿಳಾ ಅಧ್ಯಯನ ಕೇಂದ್ರವು 'ಹೆಣ್ಣು ಮತ್ತು ಭಾಷೆ' ಎಂಬ ಕೃತಿಯನ್ನು ಹೊರತಂದಿದ್ದು ಇದು ಮಹಿಳೆಯ ಭಾಷಾ ಬಳಕೆಯ ಬಗೆಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ. ಮಹಿಳೆಯರನ್ನು ಸಂಬೋಧಿಸಲು ಬೇರೆ ಪದಗಳನ್ನೇ ಬಳಕೆ ಮಾಡುವ ಭಾಷೆಗಳಿವೆ. ವಿವಿಧ ವಲಯಗಳಲ್ಲಿ ಮಹಿಳೆಯ ಭಾಷಾ ಬಳಕೆಯ ಮಿತಿ, ವಿಧಾನಗಳನ್ನು ಕುರಿತು ಸಾಕಷ್ಟು ಇಲ್ಲಿ ಚರ್ಚಿಸಲಾಗಿದೆ.

ಈ ಹಿನ್ನಲೆಯಲ್ಲಿ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಿರುವ 'ಮಹಿಳಾ ಪುರವಣೆಗಳ ಭಾಷಾ ಬಳಕೆ' ಕುರಿತು ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಾಯ ಮೂರು

ಮಹಿಳಾ ಪುರವಣಿಗಳ ಭಾಷಾ ವೈವಿಧ್ಯತೆ ಮತ್ತು ಮಹತ್ವ

ಅಧ್ಯಾಯ ಮೂರು

ಮಹಿಳಾ ಪುರವಣಿಗಳ ಭಾಷಾ ವೈವಿಧ್ಯತೆ ಮತ್ತು ಮಹತ್ವ

ಪ್ರತಿಯೊಂದು ಪ್ರಮುಖ ದಿನಪತ್ರಿಕೆಗಳು ನಿರ್ದಿಷ್ಟ ಪುಟದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ವಿಷಯಗಳನ್ನು ಬೇರೆ ಬೇರೆ ಹೆಸರಿನ ಪುರವಣಿ ಕಾಲಂನಲ್ಲಿ ಪ್ರಕಟಗೊಳಿಸುತ್ತವೆ. ಇಂದು ಈ ಮಹಿಳಾ ಪುರವಣಿಗಳು ಓದುಗರಲ್ಲಿ ತುಂಬಾ ಆಸಕ್ತಿಯನ್ನು ಮೂಡಿಸುತ್ತಿವೆ.

ಇಂತಹ ಮಹಿಳಾ ಪುರವಣಿಗಳು ಆಧುನಿಕ ಸ್ತ್ರೀಯರ ಬದುಕಿನ ಅವಿಭಾಜ್ಯ ಅಂಗವಾಗಿವೆ. ಸರ್ಕಾರವು ಕೂಡ ಮಹಿಳೆಯರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕು. ಅವರೂ ಕೂಡ ಸಮಾಜದಲ್ಲಿ ಎಲ್ಲರ ಸರಿಸಮಾನವಾಗಿ ಬದುಕಲಿ ಎನ್ನುವುದಕ್ಕೋಸ್ಕರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಪ್ರಸ್ತುತ ಕಾಲಂನಲ್ಲಿ ಮಹಿಳಾ ಜಾಗೃತಿ, ಮಹಿಳಾ ಸಬಲೀಕರಣ, ಸ್ತ್ರೀ ಸಮಾನತೆ ಎನ್ನುವುದರ ಮೂಲಕ ಮಹಿಳೆಯರಿಗೆ ವಿಶೇಷ ಅನುಕೂಲತೆಗಳನ್ನು ಕಲ್ಪಿಸಿಕೊಡಲಾಗುತ್ತದೆ.

ಕನ್ನಡ ದಿನಪತ್ರಿಕೆಗಳಲ್ಲಿನ ಮಹಿಳಾ ಪುರವಣಿಗಳಲ್ಲಿ ಮಹಿಳೆಯರೇ ಭಾಷೆಯನ್ನು ಬಳಕೆ ಮಾಡುವಾಗ ಕಾಣಿಸಿಕೊಳ್ಳುತ್ತಿರುವ ವೈಶಿಷ್ಟ್ಯ,ಮಹಿಳೆಯರನ್ನು ಕುರಿತು ಪುರುಷರು ಬರೆಯುವಾಗ ಕಾಣಿಸಿಕೊಳ್ಳುತ್ತಿರುವ ವೈಶಿಷ್ಟ್ಯ ಒಂದೇ ರೀತಿಯಲ್ಲಿಲ್ಲ. ಇಂತಹ ಭಾಷಿಕ ವೈವಿಧ್ಯತೆಯನ್ನು ಕುರಿತು ಚರ್ಚೆಮಾಡುವುದೇ ಈ ಅಧ್ಯಾಯದ ಉದ್ದೇಶವಾಗಿದೆ.

ಮಹಿಳಾವಾದ ಆರಂಭವಾಗುವುದಕ್ಕಿಂತ ಮೊದಲು ಪುರುಷ ನಿರ್ಮಿತ ಭಾಷಾ ಬಳಕೆಯ ಕ್ರಮವನ್ನು ಹೆಣ್ಣು ಒಪ್ಪಿಕೊಂಡು ಭಾಷಾ ಬಳಕೆ ಮಾಡಿರುವುದು ಚಾರಿತ್ರಿಕವಾಗಿ ತಿಳಿದು ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಮಹಿಳಾ ಪರ ಚಿಂತನೆ ಆರಂಭಗೊಂಡ ಮೇಲೆ ಹೆಣ್ಣಿನ ಪರ ಭಾಷೆಯ ಬಳಕೆ ಹೇಗೆ ಆಗಿದೆ ಅದರ ಸ್ವರೂಪ ಎಂತಹದು ಎಂಬುದನ್ನು ಕುರಿತು ಅಧ್ಯಯನಗಳು ಅಲ್ಲಲ್ಲಿ ಜರುಗಿವೆ.

ಜಾಗತೀಕರಣ ಪ್ರಭಾವದಿಂದ ಕನ್ನಡ ದಿನಪತ್ರಿಕೆಗಳಲ್ಲಿ ಬಳಕೆಯಾಗಿರುವ ಭಾಷಾ ರಚನೆಯಲ್ಲಾಗುವ ಬದಲಾವಣೆ ಕುರಿತು ಚರ್ಚಿಸುವ ಅಗತ್ಯವಿದೆ. ಸಾಮಾನ್ಯವಾಗಿ ಭಾಷಾ ಬಳಕೆ ವಿವಿಧ ಪತ್ರಿಕೆಗಳಲ್ಲಿ ಒಂದೇ ರೀತಿಯಲ್ಲಿ ಬಳಕೆಯಾಗಿರದೆ ಸ್ವರೂಪದಲ್ಲಿ ವ್ಯತ್ಯಾಸ ಆಗಿದೆಯೇ ಎಂಬುದನ್ನು ಸಹ ಅಧ್ಯಯನಕ್ಕೆ ಒಳಪಡಿಸಲಾಗಿದೆ.

ವ್ಯಕ್ತಿಯ ಮನೋಧರ್ಮಕ್ಕೆ ಅನುಗುಣವಾಗಿ ಭಾಷೆ ಬಳಕೆಯಾಗುತ್ತಿರುವುದನ್ನು ನಿದರ್ಶನಗಳ ಮೂಲಕ ಚರ್ಚಿಸಲಾಗುವುದು. ಮಹಿಳಾ ಪುರವಣಿಗಳಲ್ಲಿ ವಿಶೇಷವಾಗಿ ಮಹಿಳೆಯರನ್ನೇ ಗಮನದಲ್ಲಿಟ್ಟುಕೊಂಡು ಲೇಖನಗಳನ್ನು ಬರೆಯುತ್ತಾರೆ. ಇದರ ಜೊತೆಗೆ ಸ್ತ್ರೀಯರ ಸೌಂದರ್ಯ, ಆರೋಗ್ಯ, ಉದ್ಯೋಗ, ಉಡುಪುಗಳ ಬಗ್ಗೆ ಅಡುಗೆ ಮನೆಯೊಳಗಿನ ಉಪಕರಣಗಳನ್ನು ಕುರಿತು ವಿಶೇಷ ಪದಗಳು ಬಳಕೆಯಾಗಿರುವುದನ್ನು ನೋಡಬಹುದಾಗಿದೆ.

ದಿನಪತ್ರಿಕೆಗಳು ಪ್ರಾರಂಭದಿಂದಲೂ ಮಹಿಳೆಯರ ತಿಳುವಳಿಕೆಗಾಗಿ ಒಂದಲ್ಲ ಒಂದು ರೀತಿಯಿಂದ ಮಹಿಳಾ ಪುರವಣಿಗೆಯಲ್ಲಿ ಮಹಿಳೆಯರು ಅನುಭವಿಸುವ ನೋವು-ನಲಿವುಗಳನ್ನು ವಿವರಿಸಿ ಅದಕ್ಕೆ ಪರಿಹಾರಗಳನ್ನು ಒದಗಿಸುತ್ತಾ ಬಂದಿರುವುದು ನಮ್ಮೆಲ್ಲರಿಗೆ ತಿಳಿದ ವಿಚಾರ.ಆದರೆ ಮಹಿಳೆಯರಿಗೆ ಇಂದು ಅನೇಕ ತೆರನಾದ ವಿವಿಧ ಬಗೆಯಲ್ಲಿ ಸೌಲಭ್ಯಗಳನ್ನು ಒದಗಿಸುತ್ತಿರುವುದು ನಮಗೆ ತಿಳಿದ ಸಂಗತಿಯಾಗಿದೆ. ಇಂತಹ ಯೋಚನೆಗಳು ಸಂಶೋಧನೆಯ ಅಡಿಯಲ್ಲಿ ಚರ್ಚಿತವಾಗಿವೆ. ಆದರೆ ಮಹಿಳಾ ಪುರವಣಿಗಳ ಬಗ್ಗೆ ಚರ್ಚೆಯಾಗದೇ ಇರುವುದು ನಮಗೆಲ್ಲ ತಿಳಿದ ಸಂಗತಿಯಾಗಿದೆ.

ಮಹಿಳಾ ಪುರವಣಿಗಳಲ್ಲಿ ಬಳಕೆಯಾಗುತ್ತಿರುವ ಭಾಷೆ ಇತರ ಪುರವಣಿಗಳಲ್ಲಿ ಬಳಕೆಯಾಗುವ ಭಾಷೆಗಿಂತ ಭಿನ್ನವಾಗಿರುತ್ತದೆ. ಮಹಿಳಾ ಪುರವಣಿಯಲ್ಲಿ ಬಳಕೆಯಾಗುವ ಭಾಷೆಯು ವೈವಿಧ್ಯತೆಯಿಂದ ಇದು ಮಹಿಳಾ ಪುರವಣಿ ಭಾಷೆ ಎಂದು ನಿರ್ಧರಿಸುವ ಲಕ್ಷಣ ಹೊಂದಿರುತ್ತದೆ. ಮುಖ್ಯವಾಗಿ ಮಹಿಳಾ ಪುರವಣಿಯಲ್ಲಿ ಎರಡು ಮಾದರಿಯಲ್ಲಿ ಭಾಷೆ ಬಳಕೆ ಆಗಿರುತ್ತದೆ. ೧. ಪುರುಷ ಕೇಂದ್ರಿತ ನೆಲೆಯಲ್ಲಿ ಮಹಿಳೆಯ ಸಾಮಾಜಿಕ ಸಮಸ್ಯೆಗಳನ್ನು ವಿವರಿಸುವುದು.

೨. ಮಹಿಳೆಯೇ ತನ್ನ ಸಾಮಾಜಿಕ ಸಮಸ್ಯೆಗಳನ್ನು ವಿವರಿಸುವಾಗ ಬಳಕೆಯಾಗುವ ಭಾಷೆ, ಈ ಎರಡು ನೆಲೆಯ ಭಾಷೆಯ ಬಳಕೆ ವೈವಿಧ್ಯತೆಯಿಂದ ಕೂಡಿರುತ್ತದೆ.

ನಮ್ಮ ಸಾಮಾಜಿಕ ಪರಿಸರದಲ್ಲಿ ಪಾರಂಪರಿಕ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಹೆಣ್ಣಿನ ಸಾಧನೆಯನ್ನು ಕುರಿತು ಪುರುಷಕೇಂದ್ರಿತ ನೆಲೆಯಲ್ಲಿ ವಿವರಿಸಿರುವುದನ್ನು ಚಾರಿತ್ರಿಕವಾಗಿ ಗಮನಿಸಬಹುದು. ಉದಾಹರಣೆಗೆ: ಚಮ್ಮಾರ, ಕಮ್ಮಾರ, ಕುಂಬಾರ, ಅಂಬಿಗ, ಇತ್ಯಾದಿ ಕ್ಷೇತ್ರಗಳಲ್ಲಿ ಹೆಣ್ಣು ಸಾಧನೆ ಮಾಡಿದರೂ ಆಕೆ ಸಾಧನೆಯನ್ನು ಪುರುಷ ಕೇಂದ್ರಿತ ನೆಲೆಯಲ್ಲಿಯೇ ವಿವರಿಸಿರುವುದು ಲಿಂಗತಾರತಮ್ಯ ಧ್ವನಿಸುವ ಭಾಷೆಯಾಗಿದೆ. ಇದೇ ಮುಂದುವರೆದು ವೃತ್ತಿ ಕಸುಬುಗಳಲ್ಲಿ ಸಹಾ ಎಷ್ಟೇ ಸಾಧನೆ ಮಾಡಿದರೂ ಪುರುಷನ ಹಿನ್ನೆಲೆಯಲ್ಲಿಯೇ ಗುರುತಿಸುವ ಕೆಲಸ ಆಗಿದೆ.

ಉದಾಹರಣೆಗೆ: ಬಿಸಿನೈಸ್ ಮ್ಯಾನ್, ಡ್ರೈವರ್, ಡಾಕ್ಟರ್, ಇತ್ಯಾದಿ ಕ್ಷೇತ್ರಗಳಲ್ಲಿ ಹೆಣ್ಣು ಎಷ್ಟೇ ಸಮರ್ಥವಾಗಿ ಕಾರ್ಯನಿರ್ವಹಿಸಿದರೂ ಮೇಲಿನ ಹುದ್ದೆಯನ್ನು ನಿರ್ವಹಿಸುವಲ್ಲಿ ಭಾಷೆಯನ್ನು ವಿವರಿಸುತ್ತಾರೆ. ಈ ಅಭಿಪ್ರಾಕ್ಕೆ ಅಪವಾದವಾಗಿ ಟೀಚರ್, ನರ್ಸ್, ದಾದಿ, ಮುಂತಾದ ಹುದ್ದೆಗಳನ್ನು

ಮಹಿಳೆ ಮಾತ್ರ ನಿರ್ವಹಿಸಬಲ್ಲಳು ಎಂಬುದನ್ನು ಸ್ತ್ರೀ ಕೇಂದ್ರಿತ ನೆಲೆಯ ಭಾಷೆಯಲ್ಲಿ ವಿವರಿಸಲಾಗುತ್ತಿದೆ.

ಕೋರ್ಟು ಕಛೇರಿಗಳಲ್ಲಿ 'ಅರ್ಜಿದಾರ'/ 'ಕಕ್ಷಿದಾರ' ಪದ ಬಳಕೆ ಪುಲ್ಲಿಂಗ ಸೂಚಕ ಪದವಾಗಿವೆ ಹೊರತು ಸ್ತ್ರೀಲಿಂಗದ ನೆಲೆಯಲ್ಲಿ ಬಳಕೆಯಲ್ಲಿ ಇಲ್ಲ. ಅರ್ಜಿದಾರಳಾದರೂ ಅರ್ಜಿದಾರ ಎಂದು ಬಳಕೆ ಮಾಡದೆ ಅರ್ಜಿದಾರ ಪದದಲ್ಲೆ ವ್ಯವಹರಿಸುತ್ತಿರುವುದು ವಚನ ಸೂಚಕ ಭಾಷೆಯಲ್ಲಿ ಲಿಂಗ ತಾರತಮ್ಯ ನಡೆದಿದೆ ಎಂಬುದು ತಿಳಿದು ಬರುತ್ತದೆ.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷನೇ ಪ್ರಧಾನ ಅಥವಾ ಪುರುಷ ಪ್ರಧಾನ ವ್ಯವಸ್ಥೆ ಇರುವುದರಿಂದ ಭಾಷಾ ಬಳಕೆಯಲ್ಲೂ ಪುರುಷ ಸೂಚಕ ಭಾಷೆಯನ್ನು ಬಳಸಲಾಗಿದೆ. ಇದು ಎಷ್ಟರ ಮಟ್ಟಿಗೆ ತಾರತಮ್ಯ ನಡೆದಿದೆ ಎಂದರೆ ಮಹಿಳೆ ಸಾಹಸ ಮೆರೆದಿದ್ದರೂ ಅದನ್ನು ವಿವರಿಸಲು ಪುರುಷ ಸೂಚಕ ಪದದಿಂದಲೇ ವರ್ಣಿಸಲಾಗಿದೆ. ಉದಾಹರಣೆಗೆ 'ಮನುಜರು' ಎಂದರೆ ಪುರುಷನಾಗಿರಬಹುದು. ಅಥವಾ ಮಹಿಳೆಯರು ಆಗಿರಬಹುದು. ಇದನ್ನು ಇಂಗ್ಲಿಷ್‌ನಲ್ಲಿ ಹೇಳುವವರು ಮನುಜ ಪದಕ್ಕೆ ಸಂವಾದಿಯಾಗಿ ಮ್ಯಾನ್ ಮತ್ತು ಮ್ಯಾನ್ ಕೈಂಡ್ ಪದಗಳನ್ನು ಬಳಕೆ ಮಾಡುತ್ತಾರೆ. ಇಲ್ಲಿ ಗಮನಿಸಬೇಕಾದ ಭಾಷಿಕ ಸಂಗತಿಯೆಂದರೆ ಮ್ಯಾನ್‌ಗೆ ಸಂವಾದಿಯಾಗಿ ಹ್ಯೂಮನ್ ಎಂದೂ ಸಾಮಾನ್ಯ ಪರಿಸರದಲ್ಲಿ ಪರ್ಸನ್ ಎಂದು ಬಳಕೆ ಮಾಡಬಹುದಿತ್ತು. ಅದೇ ಎಲ್ಲೆಲ್ಲಿ ಮ್ಯಾನ್ ಕೈಂಡ್ ಬಳಕೆ ಮಾಡಲಾಗಿದೆಯೋ ಅಲ್ಲೆಲ್ಲ ಹೂಮನ್ ಕೈಂಡ್ ಬಳಸಬಹುದಾಗಿತ್ತು. ಇಂತಹ ಮಾತುಗಳನ್ನು ನಾವು ಮಹಿಳಾವಾದ ಹುಟ್ಟಿಕೊಂಡ ಮೇಲೆ ಹೇಳುತ್ತಿದ್ದೇವೆ. ಅಥವಾ ಭಾಷಾ ಬಳಕೆಯಲ್ಲಿ ಆಗಿರುವ ಲಿಂಗತಾರತಮ್ಯವನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ನೋಡುತ್ತಿದ್ದೇವೆ.

ಛೇರಮನ್, ಛೇರ್‌ಪರ್ಸನ್‌ಗೆ ಪದಗಳು ಬಳಕೆಯಲ್ಲಿದ್ದವು ಅಂದರೆ ಛೇರ್‌ಮನ್, ಛೇರ್‌ಪರ್ಸನ್ ಹುದ್ದೆಗಳನ್ನು ಮಹಿಳೆಯರು ಹಿಂದೆ ನಿರ್ವಹಿಸಿಲ್ಲವೆ? ಏಕೆ ಛೇರ್ ಹ್ಯೂಮನ್ ಪದವನ್ನು ಬಳಕೆ ಮಾಡಲಿಲ್ಲ? ಅಂದರೆ ಇದರ ಅರ್ಥ ಇಷ್ಟೇ. ಮ್ಯಾನ್‌ಕೈಂಡ್, ಮ್ಯಾನ್ ಮಡ್, ಮ್ಯಾನ್ ಪವರ್, ಮಿಲ್ಕ್‌ಮ್ಯಾನ್ ಕೆಲಸಗಳನ್ನು ಮಹಿಳೆಯರು ಹೆಚ್ಚು ಕಾರ್ಯನಿರ್ವಹಿಸಿದ್ದರೂ ಪುರುಷ ಕೇಂದ್ರಿತ ಸೂಚಕವಾಗಿಯೇ ಭಾಷೆ ಬಳಕೆಯಲ್ಲಿ ಆಗಿರುವುದು ಚರಿತ್ರೆಯಿಂದ ತಿಳಿದು ಬರುತ್ತದೆ. ನಾವು ನಿರ್ಮಿಸಿಕೊಂಡಿರುವ ಚರಿತ್ರೆಯಲ್ಲಿಯೇ 'ಒಂದು ಊರಿನಲ್ಲಿ ಒಬ್ಬ ರಾಜನಿದ್ದನು' ಎಂದೇ ಆರಂಭ ಮಾಡುತ್ತೇವೆ. ಅಂದರೆ ಮಾನವರು ಎಂದಾಗ ಮಹಿಳೆ ಮತ್ತು ಪುರುಷ ಇಬ್ಬರನ್ನು ಸೇರಿಸಿಕೊಂಡು ಬಳಕೆ ಮಾಡಿದ್ದೇವೆ. ಆದರೆ ಚರಿತ್ರೆಯನ್ನು ಸೃಷ್ಟಿಸಿದ ಮಾನವನು ಎಂದರೆ 'ಅವನು' ಎಂದು ಪುರುಷ ಸೂಚಕವಾಗಿ ಮಾತ್ರ ಬಳಕೆ ಮಾಡಲಾಗಿದೆ.

ಇಂಗ್ಲಿಷ್ ಭಾಷೆಯಲ್ಲಿ ಮಹಿಳೆಯರು ಹುದ್ದೆಯನ್ನು ಪರಿಚಯಿಸುವಾಗ ಪುರುಷ ಕೇಂದ್ರಿತ ಪದಗಳ ಮೂಲಕ ಪರಿಚಯಿಸಲಾಗಿದೆ. ಬಿಸಿನೆಸ್ ಮ್ಯಾನ್, ಪೊಲೀಸ್‌ಮ್ಯಾನ್, ನ್ಯೂಸ್‌ಮ್ಯಾನ್,

ಪೋಸ್ಟ್‌ಮ್ಯಾನ್ ಮುಂತಾದ ಪದಗಳನ್ನು ಪಟ್ಟಿ ಮಾಡಬಹುದು. ಇದರಿಂದ ಕಂಡುಬರುವ ಸಾಮಾಜಿಕ ಸಂಗತಿಯೆಂದರೆ ಇಂತಹ ಮಾದರಿಯ ಹುದ್ದೆಗಳನ್ನು ಮಹಿಳೆಯರು ನಿರ್ವಹಿಸುವುದು ಸಾಧ್ಯವಿಲ್ಲ ಎಂಬುದು. ಹಾಗೆಯೇ ಒಂದು ವೇಳೆ ನಿರ್ವಹಿಸಿದ್ದರೂ ನಾವು ಬಳಸುವ ಭಾಷೆ ಹಾಗೆಯೇ ಎಂಬ ಮನೋಭಾವ ತೋರಿಬರುತ್ತದೆ. ಕೆಲವು ನಿರ್ದಿಷ್ಟ ವಲಯಗಳಲ್ಲಿ ಮಾಸ್ಟರ್, ಫಾದರ್ ಮುಂತಾದ ಪದಗಳು ಬಳಕೆಯಲ್ಲಿವೆ ಇಲ್ಲಿ ಮಹಿಳೆ ಕೆಲಸ ಮಾಡಿದರೂ ನಾವು ನೋಡುವ ದೃಷ್ಟಿಕೋನ ಮಾತ್ರ ಪುರುಷ ಕೇಂದ್ರಿತ ನೆಲೆಯಿಂದಲೇ.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ತನ್ನ ಹೆಂಡತಿ, ಸೊಸೆ, ತಾಯಿ ಮತ್ತು ಮಗಳನ್ನು ಏಕವಚನದಲ್ಲಿ ಸಂಭೋದನೆ ಮಾಡಬಹುದು. ಮಹಿಳೆ ಮಾತ್ರ ತಂದೆ, ತಾತ, ಮಾವ, ಗಂಡ, ಅಣ್ಣ, ತಮ್ಮ ಮತ್ತು ಅಳಿಯರನ್ನು ಬಹುವಚನದಲ್ಲಿ ಸಂಬೋಧನೆ ಮಾಡುವಂತಹ ಪರಿಸ್ಥಿತಿ ಇದೆ. ಭಾಷಾ ಬಳಕೆಯ ಸಂಬೋಧನೆ ಹಂತದಲ್ಲಿ ಆಕೆಯ ಪ್ರತಿನಿಧೀಕರಣ ಇಲ್ಲವಾಗಿದೆ.

ಭಾಷಾ ಬಳಕೆಯಲ್ಲಿ ಹೆಣ್ಣನ್ನು ಕುರಿತ ಭಾಷಿಕ ಶೈಲಿಗಿಂತ ಗಂಡನ್ನು ಕುರಿತ ಭಾಷಿಕ ಶೈಲಿ ಭಿನ್ನವಾದುದು. ಸಾಮಾನ್ಯವಾಗಿ ಶೈಲಿ ಎಂದರೆ ಈಗಾಗಲೇ ಒಪ್ಪಿತವಾದಂತಹ ಒಂದು ರೂಪಕ್ಕಿಂತ ಭಿನ್ನವಾದ ಬಳಕೆ ಎಂದು ಹೇಳಬಹುದು. ಹೆಣ್ಣನ್ನು ಕುರಿತು ಭಾಷಿಕವಾಗಿ ಧ್ವನಿ, ಪದ, ವಾಕ್ಯ, ಅನ್ಯೋಕ್ತಿ, ಪ್ರತಿಮೆ ಮತ್ತು ರೂಪಕ ಮುಂತಾದ ಹಂತಗಳಲ್ಲಿ ಅಧ್ಯಯನ ಮಾಡಬಹುದು.

ನಮ್ಮ ಮಾಧ್ಯಮಗಳಲ್ಲಿ ಹೆಣ್ಣನ್ನು ಕುರಿತು ಭಾಷೆಯನ್ನು ಬಳಕೆ ಮಾಡುವ ಒಪ್ಪಿತವಾದಂತಹ ರಚನೆಯನ್ನು ಬಳಕೆ ಮಾಡದೆ ಬೇರೆ ಬೇರೆ ಅರ್ಥದ ನೆಲೆಯಲ್ಲಿ ಬಳಕೆ ಮಾಡಲಾಗುತ್ತಿದೆ. ಉದಾಹರಣೆಗೆ ಡವ್, ಫಿಗರ್, ಪೀಸು, ಐಟಂ ಮುಂತಾದ ಪದಗಳು ಹೆಣ್ಣಿನ ನಡತೆಯನ್ನು ಕೀಳಾರ್ಥದಲ್ಲಿ ಗ್ರಹಿಸಲಾಗುತ್ತದೆ. ಹಾಗೆಯೆ ನಮ್ಮ ದಿನ ಪತ್ರಿಕೆಗಳಲ್ಲಿ ಬಳಕೆ ಆಗುತ್ತಿರುವ ಭಾಷೆಯನ್ನು ಗಮನಿಸಿದಾಗ ಪುರುಷರಿಗೆ ಸಂಬಂಧಿಸಿದ ಹೇಳಿಕೆಗಳಿಗೆ ಪೂರಕವಾಗಿ ಮಹಿಳೆಯ ಪರ ಹೇಳಿಕೆಗಳನ್ನು ದಾಖಲಿಸಲಾಗುತ್ತಿದೆ. ವಾಕ್ಯಗಳ ವಿವರಣೆಯು ವಿಸ್ತರಣೆಗಾಗಿ ಮಹಿಳೆಯರನ್ನು ಬಳಸಿ ಪ್ರಯೋಗ ಮಾಡಲಾಗುತ್ತಿದೆ.

ಉದಾಹರಣೆಗೆ "ಆ ಮಹತ್ವದ ಸಭೆಯಲ್ಲಿ ಮಹಿಳೆಯರೂ ಉಪಸ್ಥಿತರಿದ್ದರು. ಸತ್ತವರ ಪೈಕಿ ಐವರು ಮಹಿಳೆಯರೂ ಸೇರಿದ್ದಾರೆ".

ಉದಾ. ೧. ಭಾರತದ ಮಹಿಳಾ ಕ್ರಿಕೆಟ್ ಆಟಗಾರ್ತಿಯರು ಜಯಗಳಿಸುವುದು

೨. ಕುಸ್ತಿಯಲ್ಲಿ ಗೆದ್ದ ಮಹಿಳೆಯರನ್ನು ಕುರಿತು ಇಂತಹ ಅಂಶಗಳನ್ನು ಮಹಿಳಾ ಪುರವಣಿಗೆಗಳಲ್ಲಿ ನಾವು ಸಹಜವಾಗಿ ನೋಡಿರುತ್ತೇವೆ. ಇಂತಹ ಅಂಶಗಳನ್ನು ನಾವು ಮಹಿಳಾ ಪುರವಣಿಗೆಗಳ ವಿಶೇಷತೆ ಎಂದು ಗುರುತಿಸಬಹುದು.

ಉದಾಹರಣೆಗೆ **'ಕತ್ತಲನ್ನು ಭೇಧಿಸಿದ ಧೀರೆಯರು'**

ಈ ಒಂದು ವಾಕ್ಯವನ್ನು ಗಮನಿಸಿದಾಗ ಇಲ್ಲಿನ ಭಾಷಾ ವೈವಿಧ್ಯತೆ ಏನು ಎಂಬುದು ಗೊತ್ತಾಗುತ್ತದೆ.

ಕತ್ತಲು - ಅಜ್ಞಾನದ ಸಂಕೇತವಾಗಿದೆ. ಉಪಮೇಯವಾಗಿ ಬಳಸಿದ್ದಾರೆ.

ಬೇಧ - ವ್ಯೂಹವನ್ನು ಬೇಧಿಸಿದ, ಸೀಳಿದ ಎಂಬರ್ಥವಿದೆ.

ಧೀರೆ - ಎನ್ನುವ ಪದ ಸ್ತ್ರೀಸೂಚಕ ಪದವಾಗಿದೆ.

ಅಂದರೆ ಇಲ್ಲಿಯ ತನಕ ಪುರುಷ ಪ್ರಧಾನತೆಯ ಹಿನ್ನೆಲೆಯಲ್ಲಿ ಧೀರ ಎಂದು ಬಳಸಿರುವುದು. ಸಹಜವಾಗಿ ನಾವು ಕಂಡಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ಸ್ತ್ರೀಯರು ಕೂಡ ಎಂತಹ ಕೆಲಸಗಳಲ್ಲಿಯೂ ಯಶಸ್ಸನ್ನು ಪಡೆಯುತ್ತಿದ್ದಾಳೆ. ಆದಕಾರಣ ಇಲ್ಲಿ 'ಧೀರೆ' ಎಂದು ಬಳಸಿದ್ದಾರೆ. ಧೀರ ಎನ್ನುವ ಪದವು 'ರ' ಕಾರವು 'ಅ' ಕಾರಂತವಾಗಿದ್ದು ಪುರುಷವಾಚಕ ಪದವಾಗಿದೆ. ಧೀರೆ ಪದವು 'ರೆ' ಕಾರದಲ್ಲಿ 'ಏ' ಕಾರಾಂತವಾಗಿದ್ದು ಸ್ತ್ರೀ ಸೂಚಕ ಪದವಾಗಿ ಬಳಕೆಯಲ್ಲಿದೆ.

ಸಂಭ್ರಮವಿಲ್ಲ ಸಡಗರವಿಲ್ಲ

ಮನೆಯೊಳಗೆ ಸೂತಕದ ವಾತಾವರಣ

ಸಂಭ್ರಮ, ಸಡಗರ ಹಬ್ಬ ಹರಿದಿವಸದ ಸಂತೋಷದ ಕ್ಷಣಗಳಾಗಿರುತ್ತವೆ. ಸೂತಕ ಎಂದರೆ ಸತ್ತ ದಿವಸದ ಮನೆಯ ವಾತಾವರಣ ಎಂದು ಅರ್ಥವಾಗುತ್ತದೆ.

ಮನೆಯಲ್ಲಿ ಗಂಡು ಹುಟ್ಟಿದರೆ ಸಂಭ್ರಮ, ಸಡಗರ ಇದ್ದಂತೆ, ಹೆಣ್ಣು ಹುಟ್ಟಿದರೆ ಮನೆಯಲ್ಲಿ ಸೂತಕದ ವಾತಾವರಣ ಎಂತಲೂ ಚಿತ್ರಿಸಿದ್ದಾರೆ. ಸೂತಕ ಎನ್ನುವ ಪದವು ಸಂಸ್ಕೃತದ ಮೂಲದಿಂದ ಬಂದಿದೆ. ಜನನ ಮರಣದ ಸಂದರ್ಭದಲ್ಲಿ ಆಚರಿಸುವ ಮೈಲಿಗೆ ಎಂದರ್ಥ.

ಬೇಕಾಗಿದ್ದಾರೆ ಡಾಕ್ಟರು.... ಅಲ್ಲ.... ಸಮಾಲೋಚಕರು ಸಿಂಧೂರು ಪುರವಣಿ ಪುಟ ೧ ದಿ. ೨೧.೦೭.೦೮

ಈ ವಾಕ್ಯವನ್ನು ಗಮನಿಸಿದಾಗ ಡಾಕ್ಟರು ಎನ್ನುವ ಪದ ಲ್ಯಾಟಿನ್ ಮೂಲವನ್ನು ಹೊಂದಿದ್ದು, ಇದರ ಅರ್ಥ ಕಲಿಸು, ಎನ್ನುವ ಅರ್ಥ ಕೊಡುತ್ತದೆ. ಇಂಗ್ಲಿಷಿನ ಈ ಪದಕ್ಕೆ ಸಂಸ್ಕೃತದಲ್ಲಿ ವೈದ್ಯರು ಎಂದು ಕರೆಯುತ್ತಾರೆ. ಬಳಕೆಯಲ್ಲಿ ಡಾಕ್ಟರು ಎನ್ನುವ ಪದ ಚಾಲ್ತಿಯಲ್ಲಿದೆ.

ಏನಿದು? **'ಮೀಸಲು ಮುತ್ತು' 'ಎಂಜಲು ಮುತ್ತು....'** (ಸಿಂಧೂರು ಪುರವಣಿ - ಪುಟ - ೧ ದಿ. ೨೧.೦೭.೦೮. ಕೆ. ಆರ್.ಪ್ರಕಾಶ, ಲೇಖಕರು)

ಈ ವಾಕ್ಯವನ್ನು ಗಮನಿಸಿದಾಗ ಇಲ್ಲಿ ಮೀಸಲು ಎಂದರೆ ಹರಕೆ, ನೈವೇದ್ಯ, ಎಂದರ್ಥ. ಎಂಜಲು - ಭಗ್ನಗೊಂಡ, ಮುತ್ತು ಎಂದರೆ, ಹವಳ, ಚುಂಬನ ಎಂದರ್ಥ.

ಇಲ್ಲಿ ಮುತ್ತು ಎಂದಾಕ್ಷಣ ಅದರ ನಾನಾರ್ಥಗಳ ಹುಡುಕಾಟ ಸಹಜ. ಶಿಲ್ಪಶೆಟ್ಟಿಯ ಮುತ್ತು ಅದೆಷ್ಟು ಗಾಸಿಪ್‌ಗೆ ಕಾರಣವಾಗಿತ್ತಲ್ಲವೆ ಮುತ್ತಿನಲ್ಲಿ ಮೈ ಮರೆತು ಲೈವ್‌ಬ್ಯಾಂಡಿನಲ್ಲಿ ಕುಣಿಯುವವರ

ಬಗ್ಗೆ ಕೇಳಿದ್ದೇವೆ. ಆದರೆ ಇಲ್ಲಿ ತುತ್ತು ಕೂಳಿಗಾಗಿನ ಮುತ್ತು ಮಾತ್ರ..... ಭರತ ಖಂಡದ ಸ್ತ್ರೀ ಕುಲದ ಕರಾಳ ಛಾಯೆಗೆ ಹಿಡಿದ ಪರಂಪರೆಯ ಕೂಪ. ಮುತ್ತು ಎಂದರೆ ಹವಳ, ಬೆಳ್ಳಿ, ಬಂಗಾರದಂತಹ ವಸ್ತುವಾಗಿರದೆ ಮೀಸಲು ಮುದ್ರೆಯನ್ನು ಒತ್ತಿಸಿಕೊಂಡವಳು. ಗಂಡನೊಂದಿಗೆ ದೈಹಿಕ ಸಂಪರ್ಕವನ್ನು ಹೊಂದುವಂತಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಈ ಪದ್ಧತಿಯು ರೂಢಿಯಲ್ಲಿದೆ. ಸರಕಾರವು ಇದನ್ನು ತಡೆಯಿಡಿದಿದೆ.

ವನಿತೆ, ವನಿತೆಯಷ್ಟೆ ಅಲ್ಲ ಬಾಳ ಹಣತೆ (ಮಹಿಳಾ ಸಂಪದ, ಪು. ೧, ದಿ. ೨೦.೦೯.೦೮)

ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೀ ತತ್ರ ದೇವತಃ

ಎಲ್ಲಿ ಸ್ತ್ರೀಯರನನು ಪೂಜ್ಯ ಭಾವದಿಂದ ಕಾಣುತ್ತಾರೋ ಅಲ್ಲಿ ದೇವರಿರುತ್ತಾರೆ ಎಂದು ಸ್ಮೃತಿ ಹೇಳತ್ತದೆ.

ವನಿತೆ ಬಾಳ ಹಣತೆ ಅವಳಿಲ್ಲದೆ ಜೀವನ ಬೆಳಗುವುದೆಂತು ಬೆಳೆಯುವುದೇನು ನಿಜ ತಾನೆ ಎಲ್ಲಿಯವರೆಗೆ ಹೆಣ್ಣಿನಲ್ಲಿ ಪ್ರೀತಿ ವಾತ್ಸಲ್ಯ ಕರುಣೆ ಜೊತೆಯಾಗಿರುತ್ತದೆಯೋ, ಎಲ್ಲಿಯವರೆಗೆ ತಾಯ್ತನದ ಅಂಶವೊಂದು ಅವಳಲ್ಲಿ ಜಾಗೃತವಾಗಿರುವುದೋ ಅಲ್ಲಿಯವರೆಗೆ ಅವಳು ಪೂಜ್ಯನೀಯಳಾಗಿರುತ್ತಾಳೆ, ಜನ್ಮ ನೀಡುವ ಅವಳು ಜೀವ ಸೃಷ್ಟಿಗೆ ನಾಂದಿ ಹಾಡುತ್ತಾಳೆ. ಅಂದರೆ ಕೇವಲ ಹೆಣ್ಣು ಮಹಿಳೆಯಷ್ಟೇ ಅಲ್ಲ ಬಾಳಿನ ಕಣ್ಣು, ದೀಪವು ತಾನುರಿದು ಇತರರಿಗೆ ಬೆಳಕು ನೀಡುವಂತೆ ಹೆಣ್ಣು ಇತರರ ಬಾಳಿಗೆ ಬೆಳಕು ಇದ್ದಂತೆ. ಎಂಬರ್ಥದಲ್ಲಿ ಈ ವಾಕ್ಯ ಪಗಳು ಬಳಕೆಯಾಗಿವೆ. ಇದು ಮಹಿಳೆಯು ಪ್ರಾಚೀನ ಕಾಲದಿಂದ ನಡೆದು ಬಂದ ಬಗೆಯನ್ನು ಈ ವಾಕ್ಯವು ತಿಳಿಸುತ್ತದೆ.

ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ ಪ್ಲೀಸ್ (ಸಖಿ ಪುರವಣಿ, ಪುಟ. ೧. ದಿ. ೧೦.೦೫.೦೮ ಲೇ. ವಿದ್ಯಾರಶ್ಮಿ ಲತ್ತಡ್ಕ)

ಈ ವಾಕ್ಯವನ್ನು ಗಮನಿಸಿದಾಗ ಅಡ್ಜೆಸ್ಟ್ ಮತ್ತು ಪ್ಲೀಸ್ ಎನ್ನುವ ಪದವು ಲ್ಯಾಟೀನ್ ಮೂಲದ ಪದವಾಗಿದ್ದು ರಚನೆಯಲ್ಲಿ ಕನ್ನಡ ಪದದ ವಾಕ್ಯದಲ್ಲಿ ಬಳಕೆಯಾಗಿ ಸ್ವೀಕರಣ ಹೊಂದಿದ ಶಬ್ದಗಳಾಗಿವೆ. ಕನ್ನಡ ಪದದ ವಾಕ್ಯದಲ್ಲಿ ಬಳಕೆಯಾಗಿ ಸ್ವೀಕರಣ ಹೊಂದಿದ ಶಬ್ದಗಳಾಗಿವೆ. ಕನ್ನಡದ ಪದದೊಂದಿಗೆ ಇಂಗ್ಲೀಷಿನ ಶಬ್ದಗಳು ಸೇರಿ ಕನ್ನಡದಲ್ಲಿ ವಾಕ್ಯ ರಚನೆಯಾಗಿ ಎಲ್ಲರ ಗಮನಹರಿಸಲು ಇದೊಂದು ಪಕ್ಕ ಉದಾಹರಣೆಯಾಗಿದೆ.

ಬ್ಯೂಟಿ ಪಾರ್ಲರ್ ಎಚ್ಚರವಿರಲಿ (ಭೂಮಿಕಾ ಪತ್ರಿಕೆ, ಪು.೧, ದಿ. ೦೯.೦೯.೦೮, ಲೇ. ಶೀಲಾ ನಟರಾಜ್)

ಈ ವಾಕ್ಯದಲ್ಲಿ ಎರಡು ಇಂಗ್ಲಿಷ್ ಪದಗಳ ಬಳಕೆಯಾಗಿದೆ. ಹೆಣ್ಣುಮಕ್ಕಳ ಸೌಂದರ್ಯದ ಬಗ್ಗೆ ಹೇಳುವಂತಹ ಸಂದರ್ಭದಲ್ಲಿ ಬ್ಯೂಟಿ ಎಂದರೆ ಸುಂದರಿ. ಪಾರ್ಲರ್ ಎಂದರೆ ಕೂಡುವ ಕೋಣೆ, ವಸ್ತುವನ್ನು ಒದಗಿಸುವ ಅಂಗಡಿ. ಒಂದು ನಾಮಪದ. ಇನ್ನೊಂದು ಗುಣವಾಚಕ ಎರಡನ್ನು

ಉಪಯೋಗಿಸಿ ಕನ್ನಡದ ಪತ್ರಿಕೆಗಳಲ್ಲಿ ಬಳಕೆಯಾಗಿದೆ. ಬ್ಯೂಟಿ ಎನ್ನುವುದು ಗುಣವಾಚಕವೂ ಹೌದು. ಸ್ತ್ರೀಸೂಚಕವೂ ಹೌದು.

ಕನ್ನಡದಲ್ಲಿ ಇತ್ತೀಚಿನ ದಿನಗಳಲ್ಲಿ ಮಹಿಳಾ ಪರವಾದ ಭಾಷಾ ಬಳಕೆ ಹೆಚ್ಚಾಗುತ್ತಿರುವುದು ಮೇಲಿನ ಪದಗಳ ಪಟ್ಟಿಯನ್ನು ಗಮನಿಸಿದಾಗ ತಿಳಿದು ಬರುತ್ತದೆ. ಈ ಪ್ರಕ್ರಿಯೆ ಎಷ್ಟರ ಮಟ್ಟಿಗೆ ಅಂದರೆ ಕೆಲವು ಸಂದರ್ಭಗಳಲ್ಲಿ ಅನಾವಶ್ಯಕವಾಗಿ ಪುರುಷ ಕೇಂದ್ರಿತ ಪದಗಳೆಂದು ತಿಳಿದು ಸ್ತ್ರೀ ಕೇಂದ್ರಿತ ಪದಗಳನ್ನಾಗಿ ಬದಲಾವಣೆ ಮಾಡುತ್ತಿರುವುದು ಕಂಡುಬರುತ್ತದೆ.

ಉದಾಹರಣೆಗೆ ದಲಿತ ಪದವು ಒಂದು ಗುಣವಿಶೇಷಣವಾಗಿದ್ದು ಅದು ಪುರುಷ ಸೂಚಕ ಪದ ಎಂದು ತಿಳಿದು ದಲಿತೆ ಎಂದು ಅ ಕಾರಾಂತವಾಗಿರುವುದನ್ನು ಎ ಕಾರಾಂತವಾಗಿ ಬಳಸಿ ಸ್ತ್ರೀಸೂಚಕ ಪದವಾಗಿ ಬಳಕೆ ಮಾಡಿರುವುದು ವಿಶೇಷವಾಗಿದೆ. ಅದೇ ರೀತಿಯಲ್ಲಿ ಸರ್ವಾಧಿಕಾರಿ, ಸ್ಟಾರ್, ಮೇಯರ್ ಮುಂತಾದ ಸ್ಥಾನಗಳಲ್ಲಿ ಹೆಣ್ಣು ಮತ್ತು ಗಂಡು ಇಬ್ಬರೂ ಕಾರ್ಯ ನಿರ್ವಹಿಸುತ್ತಿರಬಹುದು. ಆದರೆ ಬಳಕೆ ಮಾಡುತ್ತಿರುವವರು ಉದ್ದೇಶ ಪೂರ್ವಕವಾಗಿ ಸರ್ವಾದಿಕಾರಣಿ ಸ್ಟಾರಿಣಿ, ಮೇಯರಿಣಿ ಎಂದು ಬಳಕೆ ಮಾಡಲಾಗಿದೆ. ಇಂತಹ ಪದಗಳನ್ನು ಮಹಿಳಾ ಪುರವಣಿಗಳಲ್ಲಿ ಹೆಚ್ಚು, ಹೆಚ್ಚು ಬಳಕೆಯಾಗಿರುವುದನ್ನು ಗಮನಿಸಲಾಗಿದೆ.

ಅಧ್ಯಾಯ ೪

ಮಹಿಳಾ ಪುರವಣಿಗಳಲ್ಲಿ ಪದಗಳ ಪ್ರಯೋಗ ಹಾಗೂ ಬಳಕೆ

ಅಧ್ಯಾಯ ೪

ಮಹಿಳಾ ಪುರವಣಿಗಳಲ್ಲಿ ಪದಗಳ ಪ್ರಯೋಗ ಹಾಗೂ ಬಳಕೆ

ಇಂದಿನ ದಿನಪತ್ರಿಕೆಗಳು ಮಹಿಳೆಯರನ್ನು ಕುರಿತ ಸುದ್ದಿಯ ವರದಿಗಳನ್ನು ಪತ್ರಿಕೆಗಳಲ್ಲಿ ಪ್ರತ್ಯೇಕವಾದ ಆಕರ್ಷಕ ರೀತಿಯಲ್ಲಿ ಪ್ರಕಟಿಸುತ್ತಿದೆ. ವಾಣಿಜ್ಯ, ಕೃಷಿ, ಉದ್ಯೋಗ, ಸಿನಿಮಾ, ಕ್ರೀಡೆಯಂತಹ ವಿಶೇಷ ಪುರವಣಿಗಳಂತೆ ಮಹಿಳಾ ಚಿಂತನೆಗಳನ್ನು ಹೊಂದಿದ ವಿಶೇಷ ಪುರವಣಿ ಪ್ರತ್ಯೇಕ ಭಾಗದಲ್ಲಿ ಮಹಿಳಾ ಪುರವಣಿಯಲ್ಲಿ ಪ್ರಸಾರವಾಗುತ್ತಿದೆ. ಹಾಗೆಯೇ ಒಂದೊಂದು ದಿನ ಒಂದೊಂದು ಪತ್ರಿಕೆಗಳು ಪ್ರತ್ಯೇಕ ಪುಟದಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಸುದ್ದಿಗಳನ್ನು ಪ್ರಕಟಿಸುತ್ತವೆ.

ಕನ್ನಡ ದಿನ ಪತ್ರಿಕೆಗಳಲ್ಲಿ ಇತರ ಭಾಗದಲ್ಲಿ ಕಾಣಿಸಿಕೊಳ್ಳದಂತಹ ಕನ್ನಡದ ಸಂವಾದಿ ಅಥವಾ ಭಾಷಾಂತರಗೊಂಡ ಪದಗಳ ಬಳಕೆ ಹಾಗೂ ಸ್ವೀಕೃತ ಪದಗಳ ಬಳಕೆ ಹೆಚ್ಚಾಗಿ ನಡೆದಿದೆ. ಮಹಿಳಾ ಪುರವಣಿಗಳಲ್ಲಿ ಕನ್ನಡದ ಪದಗಳು ಹೊಸ ಬಗೆಯ ರೂಪವನ್ನು ಹೇಗೆ ಪಡೆದುಕೊಂಡಿವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮಹಿಳಾ ಪುರವಣಿಗಳಲ್ಲಿ ಪದಗಳು ರಚನೆಯಾಗುವಾಗ ಪುರುಷ ವಾಚಕ ಪದಗಳನ್ನು ಸ್ತ್ರೀ ವಾಚಕ ಪದಗಳನ್ನಾಗಿ ಬಳಕೆ ಮಾಡಿರುವುದನ್ನು ಗಮನಿಸಿ ಸ್ತ್ರೀ ಸೂಚಕ ಪದಗಳಾವುವು ಎಂಬುದನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಇದರಲ್ಲಿ 'ಣಿ', 'ಗಾರ', 'ತ್ತಿ', 'ಇಗ', 'ಇಸು', ಪ್ರತ್ಯಯಗಳನ್ನು ಹಚ್ಚಿ ಹೊಸ ಹೊಸ ಪದಗಳು ಮಹಿಳಾ ಪುರವಣಿಗಳಲ್ಲಿ ಹೇಗೆ ಸೃಷ್ಟಿಯಾಗಿವೆ ಎಂಬುದನ್ನು ಈ ಅಧ್ಯಾಯದಲ್ಲಿ ಸವಿವರದೊಂದಿಗೆ ಚರ್ಚೆಗೆ ಒಳಪಡಿಸಿದ್ದೇನೆ.

ಅನುರಾಗಿಣಿ

ಗಾಢವಾದ ಪ್ರೀತಿಯುಳ್ಳವಳು.

'ಮಾತನಾಡಿದ್ದು ದಣಿಯೇ ಇಲ್ಲಿ ಗಿಣಿಯೇ ಅಥವಾ ಅನುರಾಗಿಣಿಯೇ'?

'ಅನುರಾಗಿ' 'ಪುಲ್ಲಿಂಗ' ಎಂದು ತಿಳಿದು 'ಣಿ' ಸ್ತ್ರೀ ಸೂಚಕ ಪ್ರತ್ಯಯ ಸೇರಿಸಿ ಸ್ತ್ರೀಲಿಂಗವಾಗಿ ಬಳಕೆ ಮಾಡಲಾಗಿದೆ.

ಎಂಪಿಣಿ

ಲೋಕಸಭೆಗೆ ಆಯ್ಕೆಯಾಗಿರುವ ಮಹಿಳೆ, ಸಂಸದೆ.

'ಈ ಸಮಾಜ ಮಂದಿರ ಅಧಿಕೃತವಾಗಿ ಮ್ಯಾಗಿ ಉದ್ಘಾಟಿಸಬೇಕಾಗಿತ್ತು, ಶಿಲಾಫಲಕದಲ್ಲೂ ಸನ್ಮಾನ್ಯ ಎಂಪಿಣಿಯ ಹೆಸರೇ ಇತ್ತು'.

ಎಂ. ಪಿ. ಪದವನ್ನು ಪುಲ್ಲಿಂಗ ರೂಪವೆಂದು ತಿಳಿದು ಅನಂತರ ಸ್ತ್ರೀಲಿಂಗ ರೂಪವನ್ನು ಪಡೆಯಲು 'ಣಿ' ಪ್ರತ್ಯಯ ಹಚ್ಚಿ ಬಳಕೆ ಮಾಡುತ್ತೇವೆ.

ಉಗ್ರಗಾಮಿನಿ

ಕ್ರೂರತ್ವವನ್ನು ಹೊಂದಿರುವ ವ್ಯಕ್ತಿ.

'ಸರಸ್ವತಿ ವಾಸಸ್ಥಾನವಾದ ಕಾಶ್ಮೀರದಿಂದ ಸರಸ್ವತಿಯನ್ನು ಹೊರಗಟ್ಟಿ, ಅಲ್ಲಿ ಉಗ್ರಗಾಮಿನಿ ಎಂಬ ದುರ್ದೇವತೆಯು ಇಂದು ನೆಲೆಸಿದ್ದು ಅದು ಎಲ್ಲರನ್ನೂ ಬಲಿ ತೆಗೆದು ಕೊಳ್ಳುತ್ತಿರುವುದು ಎಲ್ಲರಿಗೂ ತಿಳಿದ ವಿಷಯ'.

'ಉಗ್ರಗಾಮಿ' ಎಂಬ ಪದ ಪುಲ್ಲಿಂಗ ಎಂದು ತಿಳಿದು ಸ್ತ್ರೀಲಿಂಗ ಸೂಚಕವಾದ ಪದವನ್ನು ಬಳಸಲು 'ನಿ' ಪ್ರತ್ಯಯವನ್ನು ಹಚ್ಚಿ ಮಹಿಳಾ ಸೂಚಕ ಪದವನ್ನಾಗಿ ಬಳಕೆಯನ್ನು ಮಾಡಲಾಗಿದೆ.

ಉದ್ಯೋಗಿನಿ

ಉದ್ಯೋಗದಲ್ಲಿರುವ ಹೆಣ್ಣು.

'ಮಹಿಳೆಯರು ಆರ್ಥಿಕ ಸ್ವಾಲಂಬನೆ ಪಡೆಯಲು ಉದ್ಯೋಗಿನಿ ಯೋಜನೆ ಅಡಿ ಆರ್ಥಿಕ ಸೌಲಭ್ಯ ಪಡೆಯಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ'.

ಈ ಪದವು ಪುರುಷ ಸೂಚಕವಾದುದೆಂದು ತಿಳಿದು ಸ್ತ್ರೀ ಸೂಚಕ ಪದವನ್ನು ಮಾಡಲು ನಿ ಪ್ರತ್ಯಯ ಬಳಸಿ 'ಉದ್ಯೋಗಿನಿ' ಎನ್ನುವ ಮಹಿಳಾ ಸೂಚಕ ಪದವನ್ನು ರಚನೆ ಮಾಡಲಾಗಿದೆ.

ಕೊಲೆಗಾರಿಣಿ

ಕೊಲೆ ಮಾಡುವವಳು.

'ನೆರೆಹೊರೆಯವರೂ ಕೂಡ ಚಂದಾಳೇ ಕೊಲೆಗಾರಿಣಿ ಎಂಬ ನಿರ್ಧಾರಕ್ಕೆ ಬಂದಿದ್ದಾರೆ'.

ಕೊಲೆಗಾರ ಪುಲ್ಲಿಂಗ ಸೂಚಕ ಪದವಾದ್ದರಿಂದ ಣಿ ಪ್ರತ್ಯಯ ಹಚ್ಚಿ ಸ್ತ್ರೀ ಸೂಚಕ ಪದವಾದ 'ಕೊಲೆಗಾರಿಣಿ' ಎಂಬ ಪದವನ್ನು ಬಳಕೆಮಾಡಲಾಗಿದೆ.

ಕ್ರೀಡಾಕಾರಿಣಿ

ಆಟ ಆಡುವವಳು, ಆಟಗಾರ್ತಿ.

'ಕರ್ನಾಟಕದ ಬಗ್ಗೆ ಈ ಕೆಳಗಿರುವ ಕಾಳಜಿಗೆ ಒಂದು ಸಣ್ಣ ಉದಾಹರಣೆ ಎಂದರೆ ವಾಸ್ತವವಾಗಿ ಈಕೆ ಎಡಗೈ ಕ್ರೀಡಾಕಾರಿಣಿ' .

'ಕ್ರೀಡಾಕಾರ' ಎಂಬ ಪದವು ಈಗಾಗಲೇ ಬಳಕೆಯಲ್ಲಿದೆ. ಮೇಲಿನ ಪದಕ್ಕೆ ಣಿ ಪ್ರತ್ಯಯ ಹಚ್ಚಿ ಸ್ತ್ರೀಲಿಂಗ ಪದವನ್ನಾಗಿ ಬಳಕೆಮಾಡಲಾಗಿದೆ. ಕ್ರೀಡಾಕಾರ ಈಗಾಗಲೇ ಬಳಕೆಮಾಡಲಾಗಿದೆ.

ಗಂಡತಿ

ಗಂಡಸು.

'ಹೆಂಡತಿ ಪಳಗಿ ಗಂಡತಿಯಾಗಿರುವುದನ್ನು ಅರಿಯದೆ ಮೊದಲ ರಾತ್ರಿಯ ಮುಗ್ದೆಯನ್ನಾಗಿಯೇ ಕಾಣುವ ಹುಂಬನಾಗಿದ್ದರೆ ಹೇಗೆ' ?

ಹೆಂಡತಿ ಮಾದರಿಯಲ್ಲಿ ಈ ಪದವನ್ನು ಬಳಕೆಮಾಡಲಾಗಿದೆ.

ಗಂಡೋದರಿ

ಗುಡಾಣದಂತೆ ಹೊಟ್ಟೆಯುಳ್ಳವಳು.

'ಹೆಂಡತಿ ಗಂಡೋದರಿಯಾಗಿಯೂ ಮಂಡೋದರಿಯಂಥ ಪತಿ ಪರಾಯಣೆಯಾಗುವುದಕ್ಕೆ ಶಕ್ಯ'.

ಮಂಡೋದರಿಯಮಾದರಿಯಲ್ಲಿ ಮೇಲಿನ ಪದ ಬಳಕೆಯಾಗಿದೆ.

ಚೂಡಿಧಾರಿಣಿ

ಚೂಡಿದಾರ ಧರಿಸಿರುವವಳು.

'ಅಮ್ಮನ ಬಗ್ಗೆ ಕಾಳಜಿವಹಿಸುವ ಮಕ್ಕಳು ಅಮ್ಮನನ್ನು ಚೂಡಿಧಾರಿಣಿ ಮಾಡಿದ್ದರು' . ಚೂಡಿದಾರ ಪದಕ್ಕೆ 'ಣಿ' ಸ್ತ್ರೀಲಿಂಗ ಸೂಚಕ ಪ್ರತ್ಯಯವನ್ನು ಹಚ್ಚಿ ಪದವನ್ನು ರಚನೆ ಮಾಡಲಾಗಿದೆ.

ಜೀನ್ಸ ಧಾರಿಣಿ

ಜೀನ್ಸ ಉಡುಪು ಧರಿಸುವವಳು.

'ಜೀನ್ಸ ಧಾರಿಣಿಯಾಗಿ ಹಾಗೂ ಉಳವಿ ಸ್ವಾಮಿ ಜೊತೆ ಪುಟ್ಟ ಕಾಡಿನಲ್ಲಿ ಮಾತೆ ಬಸವರಾಜೇಶ್ವರಿ'. 'ಜೀನ್ಸದಾರ' ಎಂಬುದು ಪುಲ್ಲಿಂಗ ರೂಪ ಎಂದು ತಿಳಿದು 'ಜೀನ್ಸಧಾರಿಣಿ' ಎಂಬ ಸ್ತ್ರೀ ಸೂಚಕ ಪದ ರಚನೆ ಮಾಡಲಾಗಿದೆ.

ತ್ಯಾಗಿಣಿ

ತ್ಯಾಗ ಮಾಡುವವಳು, ತ್ಯಾಗಮಯಿ.

'ಅಲ್ಲಿಗೆ ಪದ್ಮಾವತಿ ಸಂಪೂರ್ಣವಾಗಿ ತ್ಯಾಗಿಣಿಯಾಗಿ ಬಿಟ್ಟಳು' ಇಲ್ಲಿ 'ತ್ಯಾಗ' ಎಂಬ ಪದಕ್ಕೆ 'ಣಿ' ಎಂಬ ಸ್ತ್ರೀ ಸೂಚಕ ಪ್ರತ್ಯಯವನ್ನು ಸೇರಿಸಿ ಪದ ರಚನೆ ಮಾಡಲಾಗಿದೆ.

ದುರ್ಗುಣಿ

ಕೆಟ್ಟ ಗುಣವುಳ್ಳವಳು.

'ಸುಗುಣಿಯನ್ನು ಕಂಡಾಗ ಅವನನ್ನು ಅನುಕರಿಸಲು ಯತ್ನಿಸು. ದುರ್ಗುಣಿಯನ್ನು ಕಂಡಾಗ ಅವನಲ್ಲಿರುವ ದುರ್ಗುಣಗಳಲ್ಲಿ ಯಾವುದು ನಿನ್ನಲ್ಲಿರಬಹುದು ಎಂಬುದನ್ನು ಪರೀಕ್ಷಿಸಿ ನೋಡು'.

'ದುರ್ಗುಣ' ಎಂಬ ನಾಮಪದವನ್ನು ಸ್ತ್ರೀಲಿಂಗ ಸೂಚಕ ಪ್ರತ್ಯಯವಾದ 'ಣಿ' ಸೇರಿಸಿ ಪದ ರಚನೆ ಮಾಡಲಾಗಿದೆ.

ನಗ್ನಿಣಿ

ಉಡುಪು ರಹಿತ ಹೆಣ್ಣು.

'ಅಂದ ಹಾಗೆ ಹಲವು ವರ್ಷಗಳ ಹಿಂದೆ ಇಟಲಿಯಲ್ಲಿ ನಾರೀಮಣಿಯೊಬ್ಬಳು ಚುನಾವಣೆಗೆ ನಿಂತು, ನಗ್ನಿಣಿಯಾಗಿ ಪ್ರಚಾರಮಾಡಿ ಗೆದ್ದೇ ಬಿಟ್ಟಳು'! 'ನಗ್ನ' ಪದ ಕನ್ನಡದಲ್ಲಿದೆ ಅದು ಸ್ತ್ರೀ ಮತ್ತು ಪುರುಷ ಬೇದವಿಲ್ಲದೆ ಬಳಕೆಯಲ್ಲಿದೆ. ಆದರೆ ಮೇಲಿನ ಪದವು ಸ್ತ್ರೀ ಸೂಚಕವಾಗಿ ಬಳಕೆ ಆಗಿರುವುದು ವಿಶೇಷ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಪುರುಷ ಕೇಂದ್ರಿತ ಪದಗಳು ಸ್ತ್ರೀ ಕೇಂದ್ರಿತ ಪದಗಳಾಗಿ ಬಳಕೆಯಾಗುತ್ತಿವೆ.

ನುಂಗಣ್ಣಿ

ಕಬಳಿಸುವವಳು.

'ಬೆರಳ ತೋರಿಸಿದರೆ ಹಸ್ತವನ್ನೇ ನುಂಗುವ ನುಂಗಣ್ಣ ನುಂಗಣ್ಣಿಯರು ಇರುವಾಗ....' 'ನುಂಗು' ಕ್ರಿಯಾಪದಕ್ಕೆ 'ಣಿ' ಸ್ತ್ರೀ ಸೂಚಕ ಪ್ರತ್ಯಯವನ್ನು ಹಚ್ಚಿ ಪದ ರಚನೆ ಮಾಡಲಾಗಿದೆ. ಅಂದರೆ ಕ್ರಿಯಾಪದವೊಂದು ನಾಮಪದವಾಗಿದೆ.

ಪೂಜಾರಿಣಿ

ಪೂಜೆ ಮಾಡುವವಳು.

'ನಮ್ಮೂರ ಪೂಜಾರಿಣಿಯರು' ಪೂಜಾರಿ ಪದ ಸಾಮಾನ್ಯವಾಗಿ ಪುರುಷ ವಾಚಕ ಪದವಾಗಿದೆ. ಇದಕ್ಕೆ 'ಣಿ' ಸ್ತ್ರೀ ಸೂಚಕ ಪ್ರತ್ಯಯವನ್ನು ಹಚ್ಚಿ 'ಪೂಜಾರಿಣಿ' ಎಂಬ ಸ್ತ್ರೀ ಸೂಚಕ ಪದವನ್ನು ರಚನೆ ಮಾಡಲಾಗಿದೆ. ಸಂಸ್ಕೃತದ 'ಅರ್ಚಕ' ಪದಕ್ಕೆ ಮುಂದೆ 'ಅರ್ಚಕಿ' ಪದವನ್ನು ಬಳಕೆ ಮಾಡಬಹುದು.

ಬಾಂಬಿಣಿ

ಬಾಂಬು ಹೊಂದಿರುವವಳು.

'ಮಲ್ಲಿಕಾ ಶೆರಾವತ್ ಎಂಬ ಬಾಲಿವುಡ್‌ನ ಹೊಸ ಸೆಕ್ಸಂ ಬಾಂಬಿಣಿ ನೇರವಾಗಿ ಶಾಂಪೈ...ಹೊಟ್ಟೆ ಎರಿಸಿಕೊಳ್ಳುತ್ತಿದ್ದಾಳಂತಲ್ಲ'.

ಕನ್ನಡದಲ್ಲಿ ದಾರ- ಗಾರ ಪ್ರತ್ಯಯಗಳು ಪುರುಷ ವಾಚಕ ಪ್ರತ್ಯಯಗಳಾಗಿ ಕಾರ್ಯ ನಿರ್ವಹಿಸುತ್ತಿವೆ. ಬಾಂಬ್ ಇಂಗ್ಲೀಷ್ ಪದಕ್ಕೆ 'ಣಿ' ಸ್ತ್ರೀ ಸೂಚಕ ಪ್ರತ್ಯಯ ಸೇರಿಸಿ ಬಳಕೆ ಮಾಡಲಾಗಿದೆ.

ಬಾಸಿಣಿ

ಮುಖ್ಯಸ್ಥೆ. ನಾಯಕಿ.

'ರಿಜಿಸ್ಟ್ರಾರ್ ಗುರು ಮಾಧವರಾವ್ ಮತ್ತವನ ಅನಧಿಕೃತ ಬಾಸಿಣಿ ಕಲ್ಪನಮ್ಮನ ಅಂದಾರುಂಧಿ ಆಡಳಿತದಿಂದ ಮಾಹೆಯ ನೌಕರರು ಅನ್ಯಾಯ ಹಿಂಸೆಗೆ ತುತ್ತಾಗಿ ಒದ್ದಾಡುತ್ತಿದ್ದಾರೆ'.

'ಇಂಗ್ಲೀಷ್' 'ಬಾಸ್' ಎಂಬ ಪದ ಪುರುಷ ಮತ್ತು ಸ್ತ್ರೀ ರೂಪಗಳೆರಡರಲ್ಲೂ ಬಳಕೆಯಲ್ಲಿತ್ತು. ಸಾಮಾನ್ಯವಾಗಿ ಮುಖಂಡರು ಪುರುಷರೇ ಆಗಿರುತ್ತಿದ್ದರಿಂದ ಸ್ತ್ರೀ ಜಿನಾಚರ ಪದ ಬಂದಿರಲಿಲ್ಲ. ಈಗ ಬದಲಾಗಿರುವ ಪರಿಸ್ಥಿತಿಗೆ ಅನುಗುಣವಾಗಿ ಈ ಪದ ಬಂದಿದೆ.

ಬ್ರಹ್ಮಚಾರಿಣಿ

ಮದುವೆಯಾಗದೆ ಇರುವವಳು.

'ಮದುವೆಯಾಗದೆ ಬ್ರಹ್ಮಚಾರಿಣಿಗಳಾಗಿ ಉಳಿಯುತ್ತಾರೆ ಎಂದರೆ ಅಸೂಯೆ ಪಡಬೇಕು'

'ಬ್ರಹ್ಮಚಾರಿ' ಪುಲ್ಲಿಂಗ ಸೂಚಕವೆಂದುತಿಳಿದು ಸ್ತ್ರೀ ಸೂಚಕ ಪ್ರತ್ಯಯವಾದ 'ಣಿ' ಸೇರಿಸಿ ಪದ ರಚನೆ ಮಾಡಲಾಗಿದೆ.

ಮಾಲೀಕಣಿ

ಒಡತಿ, ಅಧಿಪತಿ.

'ನಾಯಿಗಳೇನಾದರೂ ಇಶ್ಶೀ, ಸುಸ್ಸು ಮಾಡಿದರೆ ಮಾಲಿಕರೋ, ಮಾಲಿಕಮಿಯೋ ತಕ್ಷಣ ಶುದ್ದಗೊಳಿಸಬೇಕು' 'ಮಾಲಿಕ' ಎಂಬ ಪದ ಪುರುಷವಾಚಕವಾಗಿ ಬಳಕೆಯಲ್ಲಿದೆ 'ಮಾಲೀಕಣಿ' ಸ್ತ್ರೀ ವಾಚಕವಾಗಿ ಬಳಕೆ ಮಾಡಲಾಗಿದೆ.

ಮುಕುಟಧಾರಿಣಿ

ಕರೀಟ ಧರಿಸಿರುವವಳು.

ಈ ವರ್ಷ ವಿಂಬಲ್ಡನ್ ಮುಕುಟಧಾರಿಣಿಯಾಗಿರುವ ಮರಿಯಾ ಶರಪೋವಾ ಆಟ. ಮತ್ತು ಸೌಂದರ್ಯ ಮಾತ್ರವಲ್ಲ. ತೀಕ್ಷ್ಣಮತಿಯನ್ನು ಹೊಂದಿರುವ ಪ್ರಚಂಡ ನವ ಯುವತಿ. ಮುಕುಟದಾರ, ಮುಕುಟವರ್ಧನ ಮುಂತಾದ ಪುಲ್ಲಿಂಗ ಕೇಂದ್ರಿ ಪದಗಳನ್ನು ಸ್ತ್ರೀ ಕೇಂದ್ರಿತ ಪದವನ್ನಾಗಿ ಣಿ ಪ್ರತ್ಯಯದೊಂದಿಗೆ ಬಳಕೆ ಮಾಡಲಾಗಿದೆ.

ಮೇಯರಿಣಿ

ನಗರ ಸಭೆಯ ಅದ್ಯಕ್ಷೆ.

ತಮ್ಮಿಂದಾಗದ ಕೆಲಸಕ್ಕೆ ಮೇಯರಿಣಿ ನೇತೃತ್ವದ ಶಿಷ್ಯ ಬಣ ಕಲುಹಿಸಿದರು ಮೇಯರ್ ಪದಕ್ಕೆ ಸ್ತ್ರೀ ಸೂಚಕ ಪ್ರತ್ಯಯವಾದ ಣಿ ಸೆರಿಸಿಕೊಂಡು ಪದ ರಚನೆ ಮಾಡಲಾಗಿದೆ.

ಬಕಾಸುರಿಣಿ

ಅತಿಯಾಗಿ ತಿನ್ನುವವಳು.

ಅಂದರೆ ನಿಜವಾದ ಅರ್ಥದಲ್ಲಿ ಈ ಬಕಾಸುರಿಣಿ ತಿನ್ನುವುದಕ್ಕಾಗಿಯೇ ಬದುಕಿದ್ದವಳು. ಬಕಾಸುರ ಪದವನ್ನು ಲಕ್ಷಣಾರ್ಥದಲ್ಲಿ ಅತಿಯಾಗಿ ತಿನ್ನುವವನು ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. ಅದರಿಂದ ಪಡೆದ ರೂಪ ಬಕಾಸುರಿಣಿ.

ವಕ್ತಾರಿಣಿ

ಪಕ್ಷ ಅಥವಾ ಸಂಸ್ಥೆಯ ಪರವಾಗಿ ಅಧಿಕೃತವಾಗಿ ಮಾತನಾಡುವವಳು.

'ಅನಂತ ಚುನಾವಣಾ ಸಮಿತಿ ಸದಸ್ಯ. ಸುಷ್ಮಾ ವಕ್ತಾರಿಣಿ ಈಗಾಗಲೇ ಲಿಂಗ ಭೇದವಿಲ್ಲದೆ' 'ವಕ್ತಾರ' ಪದ ಬಳಕೆಯಲ್ಲಿದೆ. 'ವಕ್ತಾರ' ಪದವನ್ನು ಪುಲ್ಲಿಂಗ ಎಂದು ತಿಳಿದು ಸ್ತ್ರೀಲಿಂಗ ಸೂಚಕವಾಗಿ 'ವಕ್ತಾರಿಣಿ' ಪದವನ್ನು ಬಳಕೆ ಮಾಡಲಾಗಿದೆ.

ವರ್ಷಧಾರಿಣಿ.

ಹೊಸ ವರ್ಷವನ್ನು ಸ್ವಾಗತಿಸುವವಳು.

'ವರ್ಷ ಧಾರಿಣಿಯರು ನಾರಿ ಮಾರಿ ವ್ಯಾಲ ನಗೀ ನವಿಲು ಕುಣಿಯುತಲಿರಲಿ ಹೀಗೆಂದು ನೀವು ಶುಭ ಕೋರಿದ್ದರೆ ಹೊಸ ವರ್ಷಕ್ಕೆ ರಾಗ-ರಂಗು ಬರುತ್ತಿತ್ತು'.

ಇಲ್ಲಿ ಈ ಪದಕ್ಕೆ 'ಣಿ' ಸ್ತ್ರೀ ಸೂಚಕ ಪ್ರತ್ಯಯ ಹಚ್ಚಿ ಪದ ಪ್ರಯೋಗ ಮಾಡಲಾಗಿದೆ.

ವಾರಸುಧಾರಿಣಿ

ಹಕ್ಕುಳ್ಳವಳು.

'ವಿಶ್ವ ಹಿಂದೂ ಪರಿಷತ್‌ನ ನಾಯಕಿಯಾಗಿದ್ದ ರಾಜಮಾತಾ ವಿಜಯ ರಾಜೇಸಿಂದ್ಯಾ ಅವರ ವಾಸುಧಾರಿಣಿ' ವಾರಸುದಾರ ಎಂಬುದು ಪುರುಷ ಸೂಚಕ ಪದವಾಗಿದೆ. ಇದಕ್ಕೆ ಸ್ತ್ರೀ ಸೂಚಕ ಪ್ರತ್ಯಯವಾದ 'ಣಿ' ಪ್ರತ್ಯಯ ಹಚ್ಚಿ ಸ್ತ್ರೀ ವಾಚಕ ಶಬ್ದವನ್ನಾಗಿ ಬಳಕೆಮಾಡಲಾಗಿದೆ.

ಶಾಕಿಣಿ

ಮುಟ್ಟಿದರೆ ಶಾಖ್ ಹೊಡೆಯುವ ಹೆಣ್ಣು.

'ಮುಂಬೈನಲ್ಲಿ ಈಚೆಗೆ ನಡೆದ ಪ್ಯಾಷನ್ ಶೋ ಒಂದರಲ್ಲಿ ಈ ಶಾಕಿಣಿ ತೊಟ್ಟ ದಿರುಸು ಎಲ್ಲರ ಮನಗೆದ್ದಿತು. 'ಶಾಖ್' ಎಂಬ ಇಂಗ್ಲೀಷ್ ಪದಕ್ಕೆ 'ಣಿ' ಎಂಬ ಸ್ತ್ರೀ ಸೂಚಕ ಪ್ರತ್ಯಯವನ್ನು ಹಚ್ಚಿ ಪದ ರಚನೆ ಮಾಡಲಾಗಿದೆ.

ಶಿರಸ್ತ್ರಾಣಧಾರಿಣಿ.

ತಲೆಯನ್ನು ಕಾಪಾಡುವ ಸಾಧನವನ್ನು ಹೊಂದಿರುವವಳು.

ಹೆಲ್ಮೆಟ್ ಕಡ್ಡಾಯ....! ಮೈಸೂರು ನಗರ ಪಾಲಿಕೆ ಸಭೆಯಲ್ಲಿ 'ಕಾಂಗ್ರೆಸ್ ಸದಸ್ಯರು ಮೂರಾಮಾರಿ ನಡೆದ ಹಿನ್ನೆಲೆಯಲ್ಲಿ

ಜಾತ್ಯಾತೀತದಳ ಸದಸ್ಯರು ಗುರುವಾರ ಪಾಲಿಕೆ ಸಭೆಗೆ ಶಿರಸ್ತ್ರಾಣಧಾರಿಣಿಯಾಗಿ ಬಂದಿದ್ದರು'.

ಪುರುಷ ಸೂಚಕ ಪದಕ್ಕೆ ಸ್ತ್ರೀ ಸೂಚಕ ಪ್ರತ್ಯಯವಾದ 'ಣಿ' ಪ್ರತ್ಯಯ ಹಚ್ಚಿ ಈ ಪದ ಬಳಕೆ ಮಾಡಲಾಗಿದೆ.

ಸರದಾರಿಣಿ.

ಶೂರೆ.

'ಸರದಾರನಿಗೊಬ್ಬಳು ಹೊಸ ಸರಧಾರಿಣಿ ಕೊನೆಗೂ ಸಿಕ್ಕಿದ್ದಾಳೆ'. ಸರದಾರ ಎಂಬ ಪುಲ್ಲಿಂಗ ಸೂಚಕ ಪದಕ್ಕೆ ವಿರುದ್ಧವಾಗಿ ಸರದಾರಿಣಿ ಪದ ಬಳಕೆ ಮಾಡಲಾಗಿದೆ. 'ಣಿ' ಸ್ತ್ರೀ ಸೂಚಕ ಪದವಾಗಿ ಬಳಕೆಯಲ್ಲಿರುವುದು ಗಮನಿಸುವಂಥ ಅಂಶ.

ಸರ್ವಾಧಿಕಾರಿಣಿ

ಸರ್ವಾಧಿಕಾರ ಹೊಂದಿರುವವಳು.

'ಈ ಅನಾಥ ಮಕ್ಕಳನ್ನು ಸ್ವಾವಲಂಬನೆಗೆ ತರುವ ಪೋಷಣೆಯ ದಗಲುಬಾಜಿ ಸಂಸ್ಥೆಗೆ ಆರೆಂಟು ಜನರ ಆಡಳಿತ ಮಂಡಳಿ ಇದೆಯಾದರೂ ನಂದನಾ ರೆಡ್ಡಿಯಯೇ ಸರ್ವಾಧಿಕಾರಿಣಿ'. ಇಲ್ಲಿ ಸ್ತ್ರೀ ಸೂಚಕವಾಗಿ 'ಣಿ' ಪ್ರತ್ಯಯ ಹಚ್ಚಿ ಸರ್ವಾಧಿಕಾರ ಪದಕ್ಕೆ ಸರ್ವಾಧಿಕಾರಿಣಿ ಪದ ಬಳಕೆಯಲ್ಲಿದೆ.

ಸ್ಟಾರಿಣಿ

ಚಿತ್ರೋದ್ಯಮ ವೃತ್ತಿಯಲ್ಲಿರುವ ಹೆಂಗಸು.

'ಸೂಪರ್ ಸ್ಟಾರಿಣಿಯ ಕೈ ಖಾಲಿ!' ಸ್ಟಾರ್ ಪದವನ್ನು ಪುಲ್ಲಿಂಗ ರೂಪವೆಂದುತಿಳಿಯ ಬೇಕೆಂಬ ಒತ್ತಾಯವಿಲ್ಲದಿದ್ದರೂ ಸಾಮಾನ್ಯವಾಗಿ ನಾವು ಅದನ್ನು ಪುಲ್ಲಿಂಗ ರೂಪವೆಂದು ತಿಳಿದು ಅನಂತರ ಸ್ತ್ರೀಲಿಂಗ ರೂಪವನ್ನು ಪಡೆಯಲು ಪ್ರತ್ಯಯಗಳನ್ನು ಹತ್ತಿಸುತ್ತೇವೆ.

ಹಠವಾದಿಣಿ.

ಮೊಂಡುತನ ಮಾಡುವವಳು.

'ಅಪ್ಪನಿಗೆ ವಿರುದ್ಧವಾಗಿ ಮಾತನಾಡುವ ಹಠವಾದಿಣಿ ಈ ನಾಯಕಿ' ಇಲ್ಲಿ ಹಠವಾದಿ ಎಂಬ ಪುರುಷವಾಚಕ ಪದಕ್ಕೆ ಸ್ತ್ರೀ ಸೂಚಕ ಪ್ರತ್ಯಯ 'ಣಿ' ಹಚ್ಚಿ ಸ್ತ್ರೀ ಸೂಚಕಪದವಾಗಿ ಬಳಕೆ ಮಾಡಲಾಗಿದೆ.

ಶಾಸ್ತ್ರಿಣಿ

ಶಾಸ್ತ್ರಗಳನ್ನು ತಿಳಿದು ಕೊಂಡಿರುವ ಹೆಣ್ಣು ಮಗಳು.

'ಇಂತಹ ಸಾಕ್ಷರತ್ ಶಾಸ್ತ್ರಿಣಿಗೆ (ಲೇಡಿ ಸ್ವಾಮೀಜಿ !!) ಚುಂಬಿಸಿ ಅವಳ ದೀರ್ಘ ಪತ್ರವನ್ನು ಓದಿ ಭಂಗಗೊಳಿಸುವ ಸಾಹಸಕ್ಕೆ ಒಂದು ದಿನ ಮನಸ್ಸು ಮಾಡಿದೆ!' ಸ್ವಾಮೀಜಿ ಪುರುಷ ವಾಚಕ ಪದವಾದ್ದರಿಂದ ಅದಕ್ಕೆ ಸಂವಾದಿಯಾಗಿ ಸ್ತ್ರೀ ಸೂಚಕ ಪದವಾದ 'ಶಾಸ್ತ್ರಿಣಿ' ಎಂಬ ಪದವನ್ನು ಬಳಕೆ ಮಾಡಲಾಗಿದೆ.

ವಜ್ರಾಂಗಿ

ಮೈತುಂಬ ವಜ್ರವನ್ನು ಧರಿಸಿರುವವಳು.

'ಕಳೆದ ವಾರದ ಇದೇ ಅಂಕಣದಲ್ಲಿ ವಜ್ರಾಂಗಿಯನ್ನು ನೋಡಿದ್ದೀರಲ್ಲ'. 'ಅರ್ಧಾಂಗಿ' ಮಾದರಿಯಲ್ಲಿ ಈ ಪದವನ್ನು ರಚನೆ ಮಾಡಲಾಗಿದೆ.

ಲಂಚಕೋರಿ

ಲಂಚವನ್ನು ನುಂಗುವವಳು. 'ಲಂಚಕೋರಿ ಯೋಜನಾ ನಿರ್ದೇಶಕಿ ಪದ್ಮ!' ಒಬ್ಬ ವ್ಯಕ್ತಿಯ ಗುಣಸ್ವಭಾವವನ್ನು ಸೂಚಿಸುವುದಕ್ಕಾಗಿ 'ಕೋರ್' ಎಂಬ ಬದ್ಧ ರೂಪವನ್ನು ಹತ್ತಿಸಲಾಗುತ್ತಿದೆ. 'ಲಂಚಕೋರ' ಸ್ತ್ರೀ ಪದವನ್ನಾಗಿ 'ಲಂಚಕೋರಿ' ಪದವನ್ನು ಬಳಕೆ ಮಾಡಲಾಗಿದೆ.

ಲಂಗರುಗಾರ್ತಿ

ಕಾರ್ಯಕ್ರಮ ನಿರೂಪಕಿ.

'ಬಂಗಾಳಿ ಟಿ.ವಿ. ಚಾನೆಲ್ ಒಂದರಲ್ಲಿ ಲಂಗರುಗಾರ್ತಿ (ಆಂಕರ್‌ವುಮನ್) ಆಗಿದ್ದ ತನುಶ್ರೀ ದತ್ತಾ ಈಗ ಲಿಂಗದಾವಣಿ ಬಿಚ್ಚಿ ತನ್ನ ತನು ಸಿರಿಯನ್ನು ಪ್ರದರ್ಶಿಸಲು ಬಂದಿದ್ದಾಳೆ'.

ಇಲ್ಲಿ 'ಆಂಕರ್ ವುಮನ್'ಗೆ ಸಂವಾದಿಯಾಗಿ ಕನ್ನಡದಲ್ಲಿ 'ಲಂಗರುಗಾರ್ತಿ' ಪದ ಬಳಕೆಯಲ್ಲಿದೆ.

ರೋಷೋತ್ಪಾದಕಿ

ಕೋಪವನ್ನು ಹುಟ್ಟಿಸುವವಳು.

'ಜಯಲಲಿತ ರೋಷೋತ್ಪಾದಕಿ ಕರ್ನಾಟಕಕ್ಕೆ'.

ರೋಷೋತ್ಪಾದಕ ಪುಲ್ಲಿಂಗವೆಂದು ಭಾವಿಸಿ ರೋಷೋತ್ಪಾದಕಿ ಎಂದು

'ಇ' ಕಾರಂತಗೊಳಿಸಿ ರಚನೆ ಮಾಡಲಾಗಿದೆ. ಸಾಮಾನ್ಯವಾಗಿ ಕನ್ನಡದಲ್ಲಿ ಪದದಾಂತ್ಯ ಪರಿಸರ 'ಅ' ಕಾರಾಂತವಾದರೆ ಪುಲ್ಲಿಂಗವಾಗಿಯೂ, 'ಇ' ಕಾರಾಂತವಾಗಿದ್ದರೆ ಸ್ತ್ರೀ ಲಿಂಗವಾಗಿರುತ್ತದೆ. ಎಂಬ ಸಾಮಾನ್ಯ ನಿಯಮದ ಹಿನ್ನೆಲೆಯಲ್ಲಿ ಈ ಹೊಸ ಪದವನ್ನು ರಚಿಸಲಾಗಿದೆ.

ಮೇಸ್ಟ್ರಮ್ಮ

ಉಪಧ್ಯಾಯಿನಿ, ಶಿಕ್ಷಕಿ.

'ಮುತ್ತಮ್ಮ: ವೈದ್ಯರಿಗೇ ಮೇಷ್ಟ್ರಮ್ಮ' ಇಂಗ್ಲೀಷಿನ ಮಾಸ್ಟರ್ ಪದ ಕನ್ನಡದಲ್ಲಿ ತದ್ಭವಗೊಂಡು 'ಮೇಷ್ಟ್ರು' ಆಗಿದೆ. ಲಿಂಗ ಭೇದವಿಲ್ಲದೆ ಬಳಕೆಯಲ್ಲಿದೆ. 'ಮೇಸ್ಟ್ರು' ಪುಲ್ಲಿಂಗ ಎಂದು ತಿಳಿದು ಸ್ತ್ರೀಲಿಂಗ ಸೂಚಕವಾಗಿ 'ಮೇಸ್ಟ್ರಮ್ಮ' ಪದವನ್ನು ಬಳಕೆ ಮಾಡಲಾಗಿದೆ.

ಮಿಸ್ಸಮ್ಮ

ಸೌಂದರ್ಯ ರಾಣಿ.

'ಮಿಸ್ ಸ್ಪರ್ದೆಗೆ ಬಂದ ಮಿಸ್ಸಮ್ಮನ ಕೆನ್ನೆ ಗುಳಿಗೆ ಬಿದ್ದವರು. ಮರಿಗುಳಿಗೆಗಳಾಗಿ ಮತ್ತೆ ಮತ್ತೆ ಮಾರ್ಕ್ಸ ನೀಡಿ ಮರೀಬೇಕೆಂದರೆ ಮರೆಯಲಿ ಹ್ಯಾಂಗೆ ಅಂದಾರು'!.

ಇಂಗ್ಲೀಷಿನ ಮಿಸ್ ಪದಕ್ಕೆ ಕನ್ನಡದಲ್ಲಿ ಅಮ್ಮ ಸೇರಿಸಿ 'ಮಿಸ್ಸಮ್ಮ' ಎಂದು ಬಳಕೆ ಮಾಡಲಾಗಿದೆ.

ಮಹಿಳೋದಯ

ವಿವಿಧ ವಲಯಗಳಲ್ಲಿ ಮಹಿಳೆಯ ಅಭಿವೃದ್ಧಿ. 'ಬಡ ಕುಟುಂಬಗಳ ಪೋಷಣೆಗೆ ಆರ್ಥಿಕ ಸಹಾಯ, ಅನಾರೋಗ್ಯ ಪೀಡಿತರ ಶಶ್ರೂಷೆ, ಸೇವಾ ಯೋಜನೆಗಳಿಗೆ ಹಣ ಸಂಗ್ರಹ ಇತ್ಯಾದಿ. ಜವಾಬ್ದಾರಿಗಳನ್ನು ನಿಭಾಯಿಸಲು ಮಹಿಳೆಯರೇ ಕಂಡು ಕೊಂಡ ದಾರಿ ಮಹಿಳೋದಯ'. ಮಹಿಳೆ + ಉದಯ ಎಂಬ ಎರಡು ಪದಗಳು ಸೇರಿ ಸಂಧಿ ಕ್ರಿಯೆಗೆ ಅನುಗುಣವಾಗಿ ಬಂದಿರುವ ಪದವಾಗಿದೆ.

ಮಹಿಳೀಕರಣ.

ಮಹಿಳೆ.

'ಡುಡಿಮೆಯ ಮಹಿಳೀಕರಣ' 'ಫೆಮಿನೈಜೇಷನ್‌ಗೆ ಸಂವಾದಿಯಾಗಿ ಮಹಿಳೀಕರಣ ಪದವನ್ನು ಬಳಕೆ ಮಾಡದ್ದಾರೆ.

ಮಹಿಳಾ ಪದಕ್ಕೆ 'ಈ' ಕರಣ ಸೇರಿಸಿ ಕನ್ನಡ ಭಾಷೆಯನ್ನು ಪ್ರಮಾಣಿಕರಿಸಲು ಇಂತಹ ಶಬ್ದಗಳು ಅನುಕೂಲವಾಗಿವೆ.

ಬಜಾರಿತನ

ಗಯ್ಯಾಳಿ ಗುಣ ಹೊಂದಿರುವ ಸ್ಥಿತಿ.

'ಬಜಾರಿತನ ಯುವತಿಯರಿಗೆ ಇಷ್ಟ'. 'ತನ' ಪ್ರತ್ಯಯದ ಬಳಕೆ ಗುಣವೊಂದನ್ನು ಹೇಳುತ್ತದೆ. ಮೇಲಿನ ಪ್ರಯೋಗದಲ್ಲಿ ಬಜಾರಿ ಒಂದು ನಾಮಪದ ಅಲ್ಲದೆ ಗುಣವೊಂದರ ಇರುವಿಕೆಯನ್ನು ಸೂಚಿಸುತ್ತದೆ.

ಡುಮ್ಮಣ್ಣಿ

ದಪ್ಪನಾದವಳು.

'ಅಂತೂ ಮಗುವಿಗೆ ಮೂರು ತಿಂಗಳು ತುಂಬಿ ನಮ್ಮದು ಡುಮ್ಮ ಡುಮ್ಮಿ ಡುಮ್ಮಣ್ಣ ಡುಮ್ಮಣ್ಣಿಯ ಫ್ಯಾಟ್ ಫ್ಯಾಮಿಲಿಯಾಗಿ ಎಲ್ಲರ ಕಣ್ಣು ತುಂಬುವಂತೆ ಆಗಿತ್ತು'.

ಇಲ್ಲಿ 'ಡುಮ್ಮಣ್ಣ' ಪದಕ್ಕೆ ವಿರುದ್ಧವಾಗಿ 'ಡುಮ್ಮಣ್ಣಿ' ಪದವನ್ನು ಬಳಕೆ ಮಾಡಲಾಗಿದೆ.

ಛತ್ರಿಧಾರಿಣಿ.

ಛತ್ರಿಯನ್ನು ಹೊಂದಿರುವವಳು.

'ಛಳಿ ಮಳೆ ಗಾಳಿ ಎಲ್ಲದಕ್ಕೂ ಛತ್ರಿಧಾರಿಣಿಯಾಗಿರುವ ಕಾಮಾಕ್ಷಿ ರೇನ್ ಕೋಟ್ ಕೂಡ ಇಟ್ಟುಕೊಂಡಿದ್ದಳು'.

ಇಲ್ಲಿ 'ಛತ್ರಿದಾರ' ಪುಲ್ಲಿಂಗ ಎಂದು ತಿಳಿದು ಸ್ತ್ರೀಲಿಂಗ ಪ್ರತ್ಯಯವಾದ 'ಣಿ' ಹತ್ತಿಸಿ ಪದ ರಚನೆ ಮಾಡಲಾಗಿದೆ.

ಚಿತ್ರಕಾರಿಣಿ

ಚಿತ್ರವನ್ನು ಬರೆಯುವವಳು.

'ಚಿತ್ರಕಾರಣಿಯೊಬ್ಬಳಿಗೆ ಇರುವಂತೆ ತೆಳ್ಳಗಿರುವ ಆಕೆಯ ಕೈ ಬೆರಳುಗಳು ಮಾತ್ರ ಸೊಂಟದಲ್ಲಿ ನೇತಾಡುತ್ತಿರುವ ತಣ್ಣನೆಯ ಬಂದೂಕನ್ನು ಮೆದುವಾಗಿ ಸ್ಪರ್ಶಿಸುತ್ತಿವೆ'.

ಕನ್ನಡದಲ್ಲಿ ಚಿತ್ರಕಾರ ಪುಲ್ಲಿಂಗ ಸೂಚಕವಾಗಿ ಬಳಕೆಯಲ್ಲಿರುವುದರಿಂದ ಸ್ತ್ರೀಲಿಂಗ ಸೂಚಕವಾಗಿ 'ಚಿತ್ರಕಾರಣಿ' ಪದವನ್ನು ಪ್ರಯೋಗ ಮಾಡಲಾಗಿದೆ. 'ಣಿ' ಪ್ರತ್ಯಯು ಸ್ತ್ರೀ ಸೂಚಕವಾಗಿ ಬಳಕೆಯಾಗುತ್ತಿರುವುದು ಹೆಚ್ಚು ಕಂಡು ಬರುತ್ತದೆ.

ಕಣ್ಣೀರುಗಾರ್ತಿ

ಧಾರಾಕಾರವಾಗಿ ಕಣ್ಣೀರು ಸುರಿಸುವವಳು.

'ಈತನ ಉಪಟಳ ಅತಿಯಾದಾಗ ಮುಖ್ಯ ಕಣ್ಣೀರುಗಾರ್ತಿ ಸುಚಿತ್ರಾ ಧಾರವಾಹಿನಿಯಿಂದ ಹೊರ ಬಿದ್ದಳು'.

ಇದೊಂದು ಸ್ತ್ರೀಲಿಂಗ ರೂಪ. ಮಾದರಿ: ಲಂಗರುಗಾರ್ತಿ, ಆಟಗಾರ್ತಿ, ಓಟಗಾರ್ತಿ.

ಪೋಲಿಸಿಣಿ.

ಪೋಲಿಸ ವೃತ್ತಿಯಲ್ಲಿರುವ ಹೆಂಗಸು.

'ನಾವು ನೀವು ಇತರೆ ಪೋಲಿಸ ಠಾಣೆಗಳಲ್ಲಿ ನೋಡುವ ಕೇಳುವ ಥರ್ಡ್ ಡಿಗ್ರಿ ಶಿಕ್ಷೆಗಿಂತ ಕಡಿಮೆ ಇಲ್ಲದ ಪ್ರಯೋಗಗಳನ್ನು ಪೋಲಿಸಿಣೆಯರು ಪಾರ್ವತಿಯ ಮೇಲೆ ಪ್ರಯೋಗಿಸಿದರಂತೆ'.

ಇಲ್ಲಿ ಪೋಲಿಸ್ ಎಂಬ ಇಂಗ್ಲೀಷ್ ಪದಕ್ಕೆ ಕನ್ನಡದ 'ಣಿ' ಪ್ರತ್ಯಯ ಸೇರಿ 'ಪೋಲಿಸಿಣಿ' ಎಂದು ಬಳೆಯಾಗಿದೆ.

ಇತಿಹಾಸಾಧ್ಯಯನಿ

ಚರಿತ್ರೆಯ ಓದಿನಲ್ಲಿ ಆಸಕ್ತವುಳ್ಳ ವ್ಯಕ್ತಿ.

'ಇದರ ಸದಸ್ಯರು ಸಾಹಸ ಕ್ರೀಡಾ ಪ್ರಿಯರಷ್ಟೇ ಅಲ್ಲ ಇತಿಹಾಸಾಧ್ಯಯನಿಗಳೂ ಕೂಡ'. ಅಧ್ಯಯನ ಮಾಡುವ ವ್ಯಕ್ತಿಯನ್ನು ಅಧ್ಯಯನಕಾರ ಎನ್ನುವುದು ರೂಢಿ. ಆದರೆ ಇಲ್ಲಿ ಇಅಧ್ಯಯನಿ ಎಂಬ ಪದವನ್ನು ಬಳಸಲಾಗಿದೆ. ಮಾದರಿ: ಸಂಚಾರಿ, ಕೋಪಿ, ದಾನಿ ಇತ್ಯಾದಿ. ಅಧ್ಯಯನಿ ಪದದ ನೆರವಿನಿಂದ ಇತಿಹಾಸಾಧ್ಯಯನಿ ಎಂಬ ರಚನೆಯನ್ನು ರೂಪಿಸಲಾಗಿದೆ.

ಚೋರಿಣಿ.

ಕಳ್ಳತನ ಮಾಡುವ ಹೆಂಗಸು.

'ಒಂದು ದಿನ ನಮ್ಮ ಬಾಜೂ ಮನೆಯ ಭಾಗೀರಥಿ ಬಾಯರ ಮನೆಯಲ್ಲಿ ಒಬ್ಬ ಚಿಪ್ಪಾಡಿ ಬಳೆಯುವ ಚಲುವೆ' ಈ ಚೋರಿಣಿಯನ್ನು ಅವರೇ ಇವರು ಎಂದು ಪತ್ತೆ ಹಚ್ಚುವುದೇ ಕಷ್ಟ'.

ಇದು 'ಚೋರ' ರೂಪದ ಸ್ತ್ರೀಲಿಂಗ. 'ಚೋರ' ಎಂಬ ಗುಣವಾಚಕಕ್ಕೆ 'ಣಿ' ಪ್ರತ್ಯಯ ಹತ್ತಿಸಿ ಪದ ಬಳಕೆ ಮಾಡಲಾಗಿದೆ.

ನಗೆಯೊಡತಿ

ನಗೆಯನ್ನು ಬೀರುವ ಹೆಂಗಸು.

'ಆಜುಬಾಜು ಕುಳಿತ ಕಿಲಕಿಲ ನಗೆಯೊಡತಿಯರ ತುಟಿಗಳು ಬೀರಿದವು'.

ಈ ರಚನೆಯಲ್ಲಿ ನಗೆಯನ್ನು ಮೂರ್ತ ವಸ್ತುವೆಂಬಂತೆ ಬಗೆಯಲಾಗಿದೆ.

ಸಾಕ್ಷರಗಿತ್ತಿ

ಅಕ್ಷರಸ್ಥಳಾದ ಹೆಂಗಸು.

'ಸಾಕ್ಷರಗಿತ್ತಿ ಪಾತರಗಿತ್ತಿ! ಪಾತರಗಿತ್ತಿಗಳ ಪಕ್ಕಗಳಲ್ಲಿ ಇಂಗ್ಲೀಷ್ ಅಕ್ಷರಗಳನ್ನು ಗುರುತಿಸಬಲ್ಲಿರಾ?' ಪಾತರಗಿತ್ತಿ ಪದದೊಡನೆ ಪ್ರಾಸಕ್ಕಾಗಿ ರೂಪಿಸಿದ ಪದ 'ಗಿತ್ತಿ' ಪ್ರತ್ಯಯ ಸ್ತ್ರೀಲಿಂಗ ರೂಪಗಳನ್ನು ನೀಡುತ್ತದೆ.

ಸಂದರ್ಶಕಳು

ಸಂದರ್ಶನ ಮಾಡುವಾಕೆ.

'ಸಂಭಾಷಣೆಯ ಮೂಲಕ ಭಟ್ಟರ ಹಿಸಿತತ್ಯಕ ನಿಲುವುಗಳನ್ನು ಸಂಗ್ರಹಿಸುವುದಷ್ಟೇ ಸಂದರ್ಶಕಗಳ ಕೆಲಸ ಎಂದು ಕೊಳ್ಳುತ್ತ ಭಟ್ಟರೊಂದಿಗೆ ಮಾತಿಗೆ ಕೂತೆ'.

ಇಲ್ಲಿ ಸಂದರ್ಶಕ ಎಂಬ ಪುರುಷ ವಾಚಕ ಪದಕ್ಕೆ 'ಅಳು' ಪ್ರತ್ಯಯ ಸೇರಿಸಿ ಸಂದರ್ಶಕಗಳು ಎಂದು ಪದ ಬಳಕೆಯಾಗಿದೆ.

ಹೆಮ್ಮಕ್ಕಳು.

ಹೆಣ್ಣುಮಕ್ಕಳು.

'ಹೋದ ವಾರ ಪರಿಸರ ಮಾಲಿನ್ಯದ ವಿರುದ್ಧ ಹೆಮ್ಮಕ್ಕಳೆಲ್ಲಾ ಒಟ್ಟಾಗಿ ಕಿಚನ್ ಲಾಕೌಟ್ ನಡೆಸಿದರೆಂದು ಕೇಳಿ ಕರ್ಣಾನಂದವಾಯಿತು'.

ಇಲ್ಲಿ ಹೆಣ್ಣುಮಕ್ಕಳು ಪದಕ್ಕೆ ದೊಡ್ಡ ಅಥವಾ ಬೆಳೆದ ಮಕ್ಕಳು ಎಂಬ ಅರ್ಥವನ್ನು ಹೇಳಬೇಕಾಗುತ್ತದೆ. ಹೆಂಗರಳು, ಹೆಂಗೂಸು, ಇತ್ಯಾದಿ ರೂಪಗಳಲ್ಲಿ ಹೆಣ್ ಪ್ರತ್ಯಯವನ್ನು ಗುರುತಿಸಲು ಸಾಧ್ಯ. ಇದು (ಹೆಣ್) ಮಕ್ಕಳು ಪದಕ್ಕೆ ಸೇರಿ ಹೆಮ್ಮಕ್ಕಳು ರೂಪ ಲಭಿಸಿದೆಯೆಂದು ವಾದಿಸಲು ಸಾಧ್ಯವಿದೆ.

ಶಿಶುಪಾಲಿನಿ.

ಅನ್ಯರ ಶಿಶುಗಳನ್ನು ನಿರ್ದಿಷ್ಟ ಕಾಲದವರೆಗೆ ತನ್ನ ಸುಪರ್ದಿನಲ್ಲಿ ಇರಿಸಿಕೊಳ್ಳುವವಳು. ಬೇಬಿ ಸಿಟರ್ 'ದೊರೆತ ಶಿಶುಪಾಲಿನಿಯ ಕೆಲಸವನ್ನು ಬಿಡುವುದು ಹೇಗೆ?'

ಪ್ರೇಮಿಕೆ

ಪ್ರೀತಿಸುವವಳು.

'ಪ್ರಣಯಿನಿ. ಪ್ರೇಮಿಕೆಯಿಂದ ವಂಚಿತರಾದವರು ಮದ್ಯವನ್ನು ಕಡ್ಡಾಯವಾಗಿ ಕುಡಿಯಲೇ ಬೇಕೇನೋ ಎಂಬ ಅಭಿಪ್ರಾಯವನ್ನು ಅಂತಹ ಚಿತ್ರಗಳು ಉಂಟುಮಾಡಿ ಬಿಟ್ಟಿವೆ'. ಕನ್ನಡಕ್ಕೆ ಕೊಂಚ ಅಪರಿಚಿತವಾದ ಪದವಾಗಿದೆ.

ಹದಿಕನ್ಯೆ

ಕಾಮಾರ್ಯ ವಯೋಮಾನದ ಹುಡುಗಿ.

'ಹೋರಿಯಾಟದಲ್ಲಿ ಅದೃಷ್ಟವಿದ್ದವರಿಗೆ ಹದಿಕನ್ಯೆಯ ವರಮಾಲೆಯೂ ಇದೆ'. ಇಂಗ್ಲೀಷಿನ 'ಟೀನ್ ಏಜ್' ಎಂಬ ರಚನೆಗೆ ಸಂವಾದಿಯಾಗಿ ಬಳಕೆಯಾಗಿದೆ. ಹದಿಮೂರರಿಂದ ಹದಿನೆಂಟರವರೆಗಿನ ಸಂಖ್ಯೆಗಳ ಮೊದಲ ಭಾಗವಾದ 'ಹದಿ' ರೂಪವನ್ನು ಈ ಸಮಾಸ ಪದದಲ್ಲಿ ಬಳಸಲಾಗಿದೆ. ಇಂಗ್ಲೀಷಿನಲ್ಲಿಯೂ ಆ ಸಂಖ್ಯೆಗಳ ಕೊನೆಯ ಭಾಗವಾದ ಟೀನ್ ಅನ್ನು ಬಳಸಿರುವುದನ್ನು ಗಮನಿಸಬಹುದು.

ಜಗಳಗಾತಿ

ಜಗಳ ಮಾಡುವ ಹೆಂಗಸು.

'ಜಗಳಗಾತಿ ಮಗನರಿಯಳು. ಮಾಟಗಾತಿ ಮಗನರಿಯಳು' ಜಗಳಗಂಟಿ ಬಳಕೆಯಲ್ಲಿರುವ ರೂಪ ಮಾಟಗಾತಿ ರೂಪದೊಡನೆ ಪ್ರಾಸಕ್ಕಾಗಿ ಜಗಳಗಾತಿ ರೂಪವನ್ನು ಬಳಸಿರುವುದು ಸಾಧ್ಯ.

ಟೆನಿಸ್‌ಗಾತಿ

ಟೆನಿಸಿ ಆಟ ಆಡುವವಳು.

'ಮಾರ್ಟಿನ್ ಹಿಂಗಿಸ್ ಈ ಶತಮಾನದ ಅತಿ ಕಿರಿಯ ವಯಸ್ಸಿನ ಟೆನಿಸ್ ಗಾತಿಯೆಂಬ ಹಿರಿಮೆಗೆ ಪಾತ್ರರಾದರು' 'ಗಾರ' ಪದದ ಸ್ತ್ರೀ ಸೂಚಕ ಪ್ರತ್ಯಯವನ್ನಾಗಿ ಗಾತಿ ಗಾರ್ತಿ ರೂಪ ಬಳಕೆಯಲ್ಲಿದೆ.

ಡಕಾಯಿತೆ

'ಡಕಾಯತಿ' ಮಾಡುವ ಹೆಂಗಸು. ಡಕಾಯಿತ ರೂಪದ ಸ್ತ್ರೀಲಿಂಗ. 'ಡಕಾಯಿತೆ ಪೂಲನ್ ದೇವಿಯ ಆತ್ಮ ಚರಿತ್ರೆಯ ಪುಟಗಳು' ಮಾದರಿ: ಅಧ್ಯಕ್ಷೆ, ಸದಸ್ಯೆ.

ನೌಕರೆ.

ನೌಕರಿಯನ್ನು ಮಾಡುವವಳು. ಕೆಲಸವನ್ನು ಮಾಡುವವಳು.

ಆ ಪಕ್ಕದ ಮನೆಯ ಗಿರಿಜಾ ಸರಕಾರಿ ನೌಕರೆಯಾಗಿದ್ದಾಳೆ. ಇಲ್ಲಿ ನೌಕರ ಎನ್ನುವ ಪದ ಪುಲ್ಲಿಂಗ ಸೂಚಕವಾಗಿದ್ದು. ನೌಕರೆ ಎನ್ನುವ ಪದ ಸ್ತ್ರೀ ಸೂಚಕ ಪದ ಬಳಕೆಯಾಗಿದೆ. ನೌಕರ ಪದದ ರ ಕಾರವು ಅ ಕಾರಾಂತವಾಗಿದ್ದು. ನೌಕರೆ ಎನ್ನುವ ಪದದ ರೆ ಕಾರವು ಏ ಕಾರಾಂತವಾಗಿ ಸ್ತ್ರೀ ಸೂಚಕ ಪದವಾಗಿ ಬಳಕೆಯಾಗಿದೆ.

ಮಂತ್ರಿಣಿ.

ವಿಧಾನ ಸಭೆಗೆ ಆಯ್ಕೆಯಾದ ಮಹಿಳೆ.

೨೦೦೭ ೦೮ ನೇ ಸಾಲಿನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶೋಭಾ ಕರಂದ್ಲಾಜಿಯವರು ಜಯಗಳಿಸಿ ಮಂತ್ರಿಣಿಯಾಗಿದ್ದಾಳೆ. ಮಂತ್ರಿ ಎಂಬ ಪುರುಷ ವಾಚಕ ಪದಕ್ಕೆ ಣಿ ಪ್ರತ್ಯಯ ಸೇರಿ ಮಂತ್ರಿಣಿ ಎಂದಾಗಿ ಮಹಿಳಾ ಸೂಚಕ ಪದವಾಗಿ ಬಳಕೆಗೆ ಬಂದಿದೆ.

ಸನ್ಮಾನಿ

ಸನ್ಮಾನಕ್ಕೆ ಒಳಗಾಗಿರುವವಳು.

ಕನ್ನಡ ಪ್ರಭದಲ್ಲಿ ಮುಖ ಪುಟದಲ್ಲಿ ಎಂಟು ಮಂದಿ ಮಹಿಳೆಯರನ್ನು ಸನ್ಮಾನಿಸಿರುವ ಭಾವಚಿತ್ರ ನೀಡಿ ಸನ್ಮಾನಿನಿಯರು ಎಂದು ಬಳಕೆ ಮಾಡಲಾಗಿದೆ. ಸನ್ಮಾನ ಎಂಬ ನಾಮಪದವನ್ನು ಸ್ತ್ರೀ ವಾಚಕ ನಾಮಪದವನ್ನಾಗಿ ಬಳಕೆ ಮಾಡಲಾಗಿದೆ.

ಸಹಾಯದರ್ಶಿ.

ಸಹಾಯಕಳು.

ಆಕೆಯ ಹೆತ್ತ ತಾಯಿಯೂ ಅದಕ್ಕೆ ಸಹಾಯವರ್ತಿ ಆಗಿದ್ದಳು ಎನ್ನುವುದು ಮತ್ತೊಂದು ದುರಂತ.

ಸಮೀಪವರ್ತಿ ಮಾದರಿಯಲ್ಲಿ ಸಹಾಯಕವರ್ತಿ ಪದವನ್ನು ಬಳಕೆ ಮಾಡಲಾಗಿದೆ.

ವ್ರತಧಾರಿಣಿ

ವ್ರತವನ್ನು ಕೈಗೊಂಡವಳು.

ಮಕ್ಕಳನ್ನು ಪಡೆಯುವುದಕ್ಕೋಸ್ಕರವಾಗಿ ನಿರ್ಮಲ ಹನುಮಂತ

ದೇವರಿಗೆ ಮಾಲೆ ಧರಿಸಿ ವ್ರತಧಾರಿಣಿಯಾಗಿ ಗಂಡನಿಂದ ದೂರವಿದ್ದಳು.
ವೇಷಧಾರಿಣಿ ಮಾದರಿಯಲ್ಲಿ ಪದ ರಚನೆ ಮಾಡಲಾಗಿದೆ. ಅರ್ಥದಲ್ಲಿ ವೇಷಧಾರಿಣಿಗಿಂತ ಭಿನ್ನವಾಗಿದೆ.

ಭಿನ್ನಾಣಗಿತ್ತಿತನ

ಒಯ್ಯಾರಿಯಾಗಿ ನಟಿಸುವ ಸ್ಥಿತಿ ಈ ನಕಲಿ ಮಹಿಳೆಯರ ಬಿನ್ನಾಣಗಿತ್ತಿತನ, ಥಳುಕು ಬಳುಕಿಗೆ ಯುವತಿಯರು ನಕ್ಕು ನಲಿಯುತ್ತಾರೆ.

ಇಲ್ಲಿ ಬಿನ್ನಾಣಗಿತ್ತಿ ಪದ ಮೊದಲೇ ಬಳಕೆಯಲ್ಲಿ ಇತ್ತು. ಆದರೆ ತನ ಎನ್ನುವ ಪ್ರತ್ಯಯವನ್ನು ಹಚ್ಚಿ ಪದ ರಚನೆ ಮಾಡಲಾಗಿದೆ.

ನಗ್ನಿಕೆ

ಬೆತ್ತಲೆ ಕನ್ಯೆಯರು ಬಟ್ಟೆಯನ್ನು ಧರಿಸದೆ ಇರುವವಳು.

ಅಂತೂ ಈ ನಗ್ನಿಕೆಯರೇ ನೂತನ ಯುವ ದೇವತೆಗಳೂ. ನಗ್ನ ನಗ್ನತೆ ಪದಗಳು ಈಗಾಗಲೇ ಬಳಕೆಯಲ್ಲಿವೆ. ನಗ್ನ ಪದಕ್ಕೆ ಇಕೆ ಪ್ರತ್ಯಯವನ್ನು ಹಚ್ಚಿ ಸ್ತ್ರೀ ಸೂಚಕವಾಗಿ ಬಳಕೆ ಮಾಡಲಾಗಿದೆ.

ಸ್ತ್ರೀತ್ವ

ಸ್ತ್ರೀ ತನವನ್ನು ಹೊಂದಿರುವುದು.

ತಮಿಲು ಸ್ತ್ರೀತ್ವದ ಬಗೆಗಿನ ಆಗ್ರಮಾನ್ಯವೆಂಬಂತೆ ಈ ಹೇಳಿಕೆಯನ್ನು ರಾಜಕೀಯ ಪಕ್ಷಗಳು ಅತಿರಂಜಿತಗೊಳಿಸಿ ಬಳಸಿಕೊಳ್ಳುತ್ತಿವೆ.

ಇಲ್ಲಿ ಪುರುಷತ್ವ ಪದಕ್ಕೆ ವಿರುದ್ಧವಾಗಿ ಪದ ರಚನೆ ಮಾಡಲಾಗಿದೆ.

ಚೇತಕಿ

ಚೇತನವನ್ನು ಮಾಡುವವಳು.

ಕಾರ್ಯೋನ್ಮುಖಿಗೊಳಿಸುವಾಕೆ. ಬೀದರ ಖಾಲ್ಕಿ ಹಾಗೂ ಬಸವ ಕಲ್ಯಾಣಗಳ ಗ್ರಾಮ ಚಾತಕಿಯರ ಕಾರ್ಯಗಾರ ಮಾದರಿ ಪಾಲಕಿ, ಪೋಷಕಿ, ಶೋಷಕಿ, ಧಾವಕಿ.

ಎಣಿಕಾಧಾರಿಣಿ.

ಎಣಿಕೆ ಮಾಡುವ ಅಧಿಕಾರ ಹೊಂದಿರುವವಳು.

ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕ್ ಪಂಚಾಯತ್ ಮತ ಎಣಿಕೆ ಕಾರ್ಯದಲ್ಲಿ ನಡೆದ ನಲ್ಲಿ ಏಜಂಟರುಗಳಿಗಾಗಿ ಮತ ಎಣಿಕಾಧಿಕಾರಿಣಿಗಳೇ ಇಪ್ಪತ್ತು ನಿಮಿಷ ಕಾಯ್ದ ಪ್ರಸಂಗ ನಡೆಯಿತು.

ಇಲ್ಲಿ ಕನ್ನಡ ಮತ್ತು ಸಂಸ್ಕೃತ ಪದ ಸೇರಿ ಆಗಿರುವ ಪದ. ಸಂಧಿ ನಿಯಮ ಸ್ಪಷ್ಟವಿಲ್ಲ.

ಏಕಾಂಗಿನಿ

ಒಂಟಿಯಾದ ಹೆಣ್ಣು. ವ್ಯವಸ್ಥೆಯ ವಿರುದ್ಧ ಏಕಾಂಗಿನಿಯ ಸಮರ ಕೆಲವೊಂದು ಪದಗಳು ಪುರಷರನ್ನು ಸೂಚಿಸುತ್ತವೆಂಬ ತಪ್ಪು ಕಲ್ಪನೆಯಿಂದ ಅದಕ್ಕೆ ಪ್ರತ್ಯಯವನ್ನು ಸೇರಿಸಿ ಸ್ತ್ರೀ ವಾಚಿಯನ್ನಾಗಿ ಮಾಡಲಾಗುತ್ತದೆ.

ಕುಡುಕಿ.

ಮದ್ಯಪಾನವನ್ನು ಚಟವಾಗಿ ಉಳ್ಳ ಹೆಂಗಸು.

ಹೆಂಡತಿ ಗುಡುಕಿಯಾದರೆ ಗಂಡನ ಗತಿ ಏನು. ಇಲ್ಲಿ ಸ್ತ್ರೀ ವಾಚಕ ಪದ ಸೃಷ್ಟಿ ಮಾಡಲು ಮೂಲಪದದ ಕೊನೆಯ ಸ್ವರವನ್ನು ಇ ಕಾರಾಂತಗೊಳಿಸುವುದು. ಒಂದು ವಿಧಾನ. ಉದಾ. ಕುರುಡ ಕುರುಡಿ ಈ ಮಾದರಿಯಲ್ಲಿ ಬಂದಿರುವ ಹೊಸ ಪದ.

ನಿರೂಪಿಕೆ

ಕಾರ್ಯಕ್ರಮ ನಿರ್ವಹಿಸುವಳು.

ನಿರೂಪಿಕೆಯ ಸುರಕ್ಷಿತ ಬದುಕಿನ ಹಿನ್ನೆಲೆಯಲ್ಲಿ ವಿಧ ಹಾಗೂ ಸಮಾಜ ಇವೆರಡರ ಅಪಾಯಗಳನ್ನು ಮುಖಾ ಮುಖಿ ಆಗಿಸುವ ಇಂದಿರಾಳ ಪಾತ್ರ ಸ್ತ್ರೀ ವಾಚಕ ಪದಸೃಷ್ಟಿ ಇ. ಎ. ಇಣಿ ಇತ್ಯಾದಿಗಳನ್ನು ಸೇರಿಸಿ ನಡೆಯುತ್ತಿದೆ. ಆದರೆ ಕೆಲವೊಂದು ಪ್ರಸಂಗದಲ್ಲಿ ಉದಾ ಅಧ್ಯಾಪಕ ಅಧ್ಯಾಪಕಿ ಯಾಗಬೇಕಾದದ್ದು ಅಧ್ಯಾಪಿಕೆ ಎಂದು ಆಗುತ್ತದೆ. ಈಗಾಗಲೇ ನಿರೂಪಕಿ ಪದ ಬಳಕೆಯಲ್ಲಿರುವುದನ್ನು ಗಮನಿಸಬಹುದು. ನಾಯಿಕೆ ಅಧ್ಯಾಪಿಕೆ ಮಾದರಿಯ ಪದವಿದು.

ವಿಶ್ವಪ್ರಸಿದ್ಧೆ

ಎಲ್ಲೆಡೆಯೂ ಪರಿಚಿತ ಎಲರಿಗೂ ತಿಳಿದಿರುವವಳು, ಖ್ಯಾತಳು.

ಅಧ್ಯಕ್ಷೆ ಕೆನಡಿಯ ಪತ್ನಿ, ಈ ಕೆನಡಿಯ ತಾಯಿ, ವಿಶ್ವ ಪ್ರಸಿದ್ಧೆ. ಸ್ತ್ರೀ ಲಿಂಗ ಸೂಚಕವಾಗಿ ಎ ಪ್ರತ್ಯಯ ಬಳಸಿ ತಂದಿರುವ ಪದ.

ಸ್ಥಾಪನಕರ್ತೆ

ಆರಂಭಿಸಿರುವಾಕೆ ನೆಲೆಗೊಳಿಸಿರುವಾಕೆ.

ರಾಜೀವ್ ಗಾಂಧಿ ಮೆಡಿಕಲ್ ವಿ.ವಿ.ದ ಸ್ಥಾಪನಕಾರ್ತಿ ಹಾಗೂ ಪ್ರಪ್ರಥಮ ಉಪಕುಲಪತಿಯಾಗಿದ್ದು ಇತ್ತೀಚಿಗಷ್ಟೇ ನಿವೃತ್ತಿಯಾದ ಇಲ್ಲಿ ಸ್ಥಾಪಕ ಪದದ ಸ್ತ್ರೀಲಿಂಗ ರೂಪ ಸ್ಥಾಪಕಿ. ಕರ್ತ ಎಂಬ ಪದವನ್ನು ಉತ್ತರ ಪದವನ್ನಾಗಿಟ್ಟುಕೊಂಡು ಪದಗಳು ರಚನೆಯಾಗುತ್ತವೆ.

ಪದಕೋಶಗಳ ಪಟ್ಟಿ

ಅನುರಾಗಿಣಿ

ಎಂಪಿಣಿ

ಉಗ್ರಗಾಮಿನಿ

ಉದ್ಯೋಗಿನಿ

ಕೊಲೆಗಾರಿಣಿ

ಕ್ರೀಡಾಕಾರಿಣಿ

ಚೂಡಿಧಾರಿಣಿ

ಜೀನ್ಸ್‌ಧಾರಿಣಿ

ಗಂಡೋದರಿ

ಗಂಡತಿ

ತ್ಯಾಗಿಣಿ

ದುರ್ಗಿಣಿ

ನಗ್ನಿಣಿ

ನುಂಗಣ್ಣಿ

ಪೂಜಾರಿಣಿ

ಬಾಂಬಿಣಿ

ಬಾಸಿಣಿ

ಬ್ರಹ್ಮಚಾರಿಣಿ

ಮಾಲೀಕಣಿ

ಮುಕುಟಧಾರಿಣಿ

ಮೇಯರಿಣಿ

ಬಕಾಸೂರಣಿ

ವಕ್ತಾರಿಣಿ

ವರ್ಷಧಾರಿಣಿ

ವಾರಸುಧಾರಿಣಿ

ಶಾಕಿಣಿ

ಶಿರಸ್ತ್ರಾಣಧಾರಿಣಿ

ಸರಧಾರಿಣಿ

ಸರ್ವಾಧಿಕಾರಿಣಿ

ಸ್ಟಾರಿಣಿ

ಹಠವಾದಿಣಿ

ಶಾಸ್ತ್ರಿಣಿ

ವಜ್ರಾಂಗಿ

ಲಂಚಕೋರಿ

ಲಂಗುರಗಾರ್ತಿ

ರೋಷೋತ್ಪಾದಿಕಿ

ಮೇಷ್ಟ್ರಮ್ಮ

ಮಿಸ್ಸಮ್ಮ

ಮಹಿಳೋದಯ

ಮಹಿಳೀಕರಣ

ಬಜಾರಿತನ

ಡುಮ್ಮಣ್ಣಿ

ಛತ್ರಿಧಾರಿಣಿ

ಚಿತ್ರಕಾರಿಣಿ

ಕಣ್ಣೀರುಗಾರ್ತಿ

ಪೋಲಿಸಿಣಿ

ಇತಿಹಾಸಾಧ್ಯಯನಿ

ಚೋರಿಣಿ

ನಗೆಯೊಡತಿ

ಸಾಕ್ಷರಗಿತ್ತಿ

ಸಂದರ್ಶಕಳು

ಹೆಮ್ಮಕ್ಕಳು

ಶಿಶುಪಾಲಿನಿ

ಪ್ರೇಮಿಕೆ

ಹದಿಕನ್ಯೆ

ಟೆನಿಸ್‌ಗಾರ್ತಿ

ಜಗಳಗಾರ್ತಿ

ನೇತಾರಿಣಿ

ಅಭಿನಯಗಾರ್ತಿ

ಡಕಾಯಿತೆ

ಗ್ಯಾಸ್

ಸವಾರಿ

ಚಾಕು

ಪೀಸ್

ಡವ್

ಡಗಾರ್

ಮಾಲು

ಪೆಟ್ರೋಮ್ಯಾಕ್ಸ್

ಪಾರಿವಾಳ

ಚಿಂಕೆಮರಿ

ನೌಕರೆ

ಮಂತ್ರಿಣಿ

ಶಾಸಕಿ

ಸಚಿವೆ

ಸನ್ಮಾನಿ

ಸಹಾಯದರ್ಶಿ

ವ್ರತಧಾರಿಣಿ

ಭಿನ್ನಾಣಗಿತ್ತಿತನ

ನಗ್ನಿಕೆ

ಸ್ತ್ರೀತ್ವ

ಚೇತಕಿ

ಏಣಿಕಾಧಾರಿಣಿ

ಕುಡುಕಿ

ನಿರೂಪಿಕೆ

ವಿಶ್ವಪ್ರಸಿದ್ದೆ

ಸ್ಥಾಪನಕಾರ್ತಿ.

ಮಹಿಳಾ ಪುರವಣೆಗಳ ತಲೆಬರಹಗಳು

ಮಹಿಳಾ ಪುರವಣೆ ವಿವಿಧ ವಲಯಗಳಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆಯನ್ನು ಬಿಂಬಿಸುತ್ತದೆ. ಮಹಿಳೆ ಕೇವಲ ಗೃಹಿಣಿಯಾಗಿ ಮಾತ್ರ ಇರುವುದಿಲ್ಲ. ಆಕೆ ಗೃಹಿಣಿ, ತಾಯಿ, ಹೆಂಡತಿ, ಅತ್ತೆ , ಸೊಸೆ, ಹೀಗೆ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಾಳೆ. ಆಕೆ ನಿರ್ವಹಿಸುವ, ನಿರ್ವಹಿಸಬೇಕಾದ ಕಾರ್ಯಗಳ ಬಗೆಗಿನ ಮಾಹಿತಿಯನ್ನು ಈ ಪುರವಣೆಗಳು ಹೊಂದಿರುತ್ತವೆ. ಇಲ್ಲಿ ಬಳಕೆಯಾಗುವ ತಲೆಬರಹಗಳು ಈ ದಿಸೆಯನ್ನು ಸೂಚಿಸುವ ಶಬ್ದಗಳಿಂದ ಕೂಡಿರುತ್ತದೆ. ಉದಾಹರಣೆಗಾಗಿ ಕೆಲವನ್ನು ಇಲ್ಲಿ ನೀಡಲಾಗಿದೆ.

ಕಾಡುತ್ತಿದೆಯೇ ಕೂದಲ ಸಮಸ್ಯೆ

ಸಾಧ್ಯವಾದೀತೆ ಮಹಿಳಾ ವಿಮೋಚನೆ

ಮಹಿಳೆಯರಿಗೆ ಕಾನೂನು ಬದ್ಧ ಹಕ್ಕುಗಳು

ಲಿಪೋ ಥೆರಫಿ ಬೊಜ್ಜಿಗೆ ಹೇಳಬಹುದು ಗುಡ್ ಬೈ

ಸಂಧಿನೋವು ಸಾಮಾನ್ಯವಲ್ಲ.ರ

ತಪ್ಪಿಸಿಕೊಳ್ಳಿ ಮಳೆಗಾಲದ ಉಪಟಳ

ಮಗುವಿಗೆ ಬಯ್ಯುವಾಗ ಯೋಚಿಸಿ

ಗೃಹಿಣಿಯರೆಲ್ಲರೂ ಸುಖಿಗಳಲ್ಲ

ತಣ್ಣಗಿರಲಿ ತವರು

ನಗುತಲಿರು ಮನಸಾರ

ಚಲುವೆಯ ಅಂದದ ಅಂಗಕ ಬಂಗಾರ ಸಿಂಗಾರ ಚಂದಕೆ

ನಾವೆಷ್ಟು ಸಂತೋಷದಿಂದ ಇದ್ದೇವೆ

ಅಳಬೇಡ ಕಣೇ ಸುಮ್ಮಿರೆ

ವಾಹ್ ಜೆನ್ ಎಕ್ಸ್ ಮಹಿಳೆಯರಿವರು

ಸ್ವಲ್ಪ ಅಡ್ಜಸ್ಟ್ ಮಾಡಿಕೊಳ್ಳಿ ಪ್ಲೀಸ್

ಆಭರಣಗಳ ಉಲ್ಕಾ ಭುವಲ್ಕಾ

ಮಗು ಹೂಭಾರ ಮಡಿಲು ಹಗುರ ಮನಸು ಭಾರ

ಕೂದಲಿಗೆ ಮುಂಗಾರು ಮ್ಯಾಜಿಕ್

ಅತ್ತಾರೆ ಅತ್ತುಬಿಡು ನಕ್ಯಾಕ ಮರಸತೀ ದುಃಖ

ಮಹಿಳೆಯರೇ, ಉಪಹಾರದ ಬಗ್ಗೆ ಉದಾಸೀನ ಬೇಡ.

ಹೇಳೇ ಹೂವೆ ನಿನ್ನೀ ನಗುವಿಗೆ ಕಾರಣವೇನೆ

ಅಜ್ಜಿ ನೀ ಅಳಬೇಡ

ಇಷ್ಟವಿಲ್ಲದ ಕೋರ್ಸ್ ಮಾಡುವ ಕಷ್ಟ

ಗುಣ ನೋಡಿ ಹೆಣ್ಣು ಕೊಡ್ತಾರೆ.

ಚಿತ್ರ ಬಿಡಿಸಲಾ, ರಂಗೋಲಿ ಬರೆಯಲಾ

ನಿಮ್ಮ ಕನಸಿಗೆ ಅವರು ಕಣ್ಣು

ಮೂಲವ್ಯಾಧಿಗೆ ಆಯುರ್ವೇದ ಪರಿಹಾರ.

ವೈರಸ್ ಎಂಬ ಲೈಫ್ ಲೈನ್

ಬೊಜ್ಜಿನ ಬೆನ್ನಿಗೆ ಮಧುಮೇಹವೂ ಮಾಯ.

ಕಾಡ ದೇವತೆ ಕರಿಕಾಗಮ್ಮ

ಮಿತಿ ಮೀರದಿರಲಿ ಪ್ರೀತಿ.

ನೆನೆಯುವ ಮುನ್ನ ನೆನೆಯಿರಿ ನನ್ನ

ಛಲವೊಂದಿದ್ದರೆ ಫಲ ಉಂಟು.

ಹೂವಿನ ಸಾಂಗತ್ಯದಲ್ಲಿಬದುಕೇ ಪರಿಮಳ.

ಪ್ರೀತಿಗೆ, ಪರಿಮಳಕ್ಕೆ ಮತ್ತು ಲಾಭಕ್ಕೆ.

ಕಣ್ಣು ಕಾಣುವ ಕುರುಡಿ

ಮದುವೆಯೆಂಬ ವ್ಯಾಪಾರ ಪುರುಷ ಸಮಾಜಕ್ಕೆ ಸವಾಲು.

ಅತಿಥಿ ಸತ್ಕಾರವೂ ಒಂದು ಜೀವನ ಪ್ರೀತಿ

ಮಗಳನ್ನು ದೂರದ ಊರಿಗೆ ಉನ್ನತ ವಿಧ್ಯಾಭ್ಯಾಸಕ್ಕೆ ಕಳುಹಿಸುತ್ತಿರುವಿರಾ

ನೀನು ಒಬ್ಬಳೇ ಹೋಗುವುದಾ

ಮಹಿಳಾ ನ್ಯಾಯಾಲಯಗಳ ಆವಶ್ಯಕತೆ

ಗರ್ಭಕೋಶತೆಗೆಯುವ ಮುನ್ನ.

ಶುದ್ಧ ಒಲೆಯಲ್ಲಿ ಸುಲಭ ಅಡುಗೆ ತಯಾರಿ.

ಋತುಸ್ರಾವದ ಜೊತೆಗೆ ಕಾಣುವ ನೋವು ಹೇಳಲೊಂಥರಾ ಥರಾ

ಕಂದನಿಗೆ ಅಮೃತಪಾನ ಮಾಲೆ ಹಾಲು

ನಮ್ಮ ಕಾಲುಗಳನ್ನು ಬಚ್ಚಿಡಬೇಡಿ

ಅಥೆನ್ಸಂ ನಿಂದ ಬೀಜಿಂಗ್‌ವರೆಗೆ

ಜ್ಞಾನಾರ್ಜನೆ ನಡೆಯುತ್ತಿದೆ ಸದ್ದು

ಅವಸಾನದತ್ತ ಇಂಗಳೇಶ್ವರ ಸ್ಮಾರಕಗಳು

ಈ ಊರೇ ಒಂದು ಐತಿಹಾಸಿಕ ಮ್ಯೂಸಿಯಂ

ಬಣ್ಣದ ಬಟ್ಟೆ ಹೊಲಿಯುವವರ ಬದುಕು ಮೂರಾಬಟ್ಟೆ.

ನನ್ನವರಾರೂ ನನಗಲ್ಲ

ಓದೇ ಗುರಿಯಾದಾಗ ಹಂಗಿನ ಹಂಗೇಕೆ

ನಿಮ್ಮ ಮಕ್ಕಳನ್ನು ಹೀಗೆ ಬೆಳಸಿ ಹಂಗಿಸದಿರಿ, ಹುರಿದುಂಬಿಸಿ

ನವ ಗೃಹಿಣಿಯ ಹೊಸ ಹಾಡು.

ಚಿಗುರಿದ ಗಿಡದಲ್ಲಿ ಚಿಗುರೊಡೆವ ಕನಸು.

ಕಟ್ಟುವ ಕ್ರಿಯೆಯಲ್ಲಿ ಬೆಳೆಯುವ ಪ್ರಕ್ರಿಯೆ

ಹಳೇ ನೋಟ್ಸ್ ರದ್ದಿಗೆ ಖಾಲಿ ಹಾಳೆ ಬರೆಯೋದಕ್ಕೆ

ದಾಳಿಂಬೆಯ ಕೆಂಪು ಪ್ರಪಂಚ

ಆಪತ್ಕಾಲದಲ್ಲಿ ಆದವರೇ ನಂಟರು.

ಹಾಫ್ ಲೈಫ್ ಅಂದರೇನು

ಚಿಕ್ಕ ಚಿಕ್ಕ ಪಿಪ್ಪಲಕ್ಕಿ

ಮಕ್ಕಳ ಮೇಲೊಂದು ಕಣ್ಣಿರಲಿ

ಚಾಲೆಂಜ್ ಗೆದ್ದಾಯ್ತು ಮುಂದೇನು?

ಈಜಿನಲ್ಲಿ ವಿಶ್ವದಾಖಲೆ ಬರೆದ ಅಮೇರಿಕದ ಮೈಕಲ್ ಫೆಲ್ಪ್ಸ್.

ಗರುಡನ ಗಿರಿ ಬೆಟ್ಟದಲ್ಲಿ ಶಿಲಾ ಸಮೂಹ.

ಹೆಬ್ಬಂಡೆಯೆ ದೇಗುಲ, ಆಲದ ಮರವೇ ಚಪ್ಪರ.

ನಾವೂ ನಿಮ್ಹಾಂಗ ಗರತೀರಾಗ್ತೀವಿ

ಸರಸ ದಾಂಪತ್ಯಕ್ಕೆ ನಗೆಗುಳಿಗೆ

ನಗುವೇ ಪ್ರೇಮದ ಹಾಡು

ಹೆಣ್ಣು ಮಕ್ಕಳ ಸಾಹಸ, ಮಗನಿಗೆ ಕಂಟಕ

ಅಕ್ಕನಿಗೆ ಸಾಂತ್ವನ, ತಂಗಿಗೆ ಭರವಸೆ

ತೊಟ್ಟಿಲ ತೂಗುವ ಕೈಗೆ ಕ್ಯಾಮರಾ ಬಂದಾಗ

ಬೆಂಕಿಯ ಮುಂದೆ ಅರಳಿದ ಹೂ

ನಿಮ್ಮ ಮನೆ ನಮ್ಮ ಮನೆ ಆಗಿರಲಿ

ಸಕಲಕೆಲ್ಲಕೂ ನೀನೆ ಅಕಳಂಕ ಗುರು.

ಖರ್ಚಿಲ್ಲದ ಅಲಂಕಾರ.

ಹಿತ್ತಲಲ್ಲಿ ಅರಿಶಿನ ಇದ್ದರೆ ಮನೆಯಲ್ಲಿ ಕಾಯಿಲೆ ಇಲ್ಲ

ಎಲ್ಲಾ ಸರಿ ಆದ್ರೆ ಹುಡ್ಗಿ ಸ್ವಲ್ಪ ಕಪ್ಪು

ಬಣ್ಣದಲ್ಲೇನಿದೆ

ಸೌಭಾಗ್ಯಳ ದೌರ್ಭಾಗ್ಯ

ಜನುಮ ನೀಡುತ್ತಾಳೆ ಜೀವನಾಂಶ ಬೇಡುತ್ತಾಳೆ.

ತಾಯಿ ಮಕ್ಕಳ ನಡುವೆಯೊಂದು ಅಧಿನಿಯಮ

ಒಂಟಿ ಹಕ್ಕಿಯ ವಿಷಾದ ಗಾನ.

ಮಹಿಳಾ ಮಂಡಳಕ್ಕಿಲ್ಲಿ ಮೂವತ್ತರ ಹರೆಯ

ಫೈಡಿಂಗ್ ಮಾಡೋದು ಹೇಗೆ

ಮಸಿಯಾಗಿ ಹಲ್ಲುಜ್ಜಿ.

ಹೊನ್ನ ತ್ವಚೆಯ ಮೇಲೇಕ ತೊನ್ನ ಮಚ್ಚೆ

ಮಧುಮೇಹದ ಮಾತ್ರೆ ಬಳಕೆ ಜಾಗ್ರತೆ

ಮುಂಜಾನೆಯ ಪೌಷ್ಟಿಕ ತಿಂಡಿ ದಿನಕ್ಕೆಲ್ಲ ಸೌಖ್ಯ ಮುನ್ನುಡಿ.

ಗಂಡಸರೂ ಬದಲಾಗುತ್ತಿದ್ದಾರೆ

ವನಿತೆ ದೂರವಿಡು ಖಿನ್ನತೆ

ಮುಟ್ಟು ತಂದೊಡ್ಡುವ ತೊಂದರೆ

ಮಗುವಿಗೆ ಬೇಕು ಪೌಷ್ಟಿಕ ಉಪಹಾರ.

ಸುವರ್ಣ ಸೇತುವೆ ಎಲ್ಲಿದೆ

ಮನೆಯೊಂದು ಮನವೆರಡು

ಬಾಳೊಂದು ಹೋರಾಟ ಮರೆಯದಿರಿ

ತಾಯಿ ದೇವಿಯನು ಕಾಣೆ ಹಂಬಲಿಸ

ಯಾಕಳುವೆ ಎಲೆ ಕಂದ

ಬರುವಿರಾ ಗುಬ್ಬಿಗಳೆ

ಕೊಟ್ಟು ಕೆಟ್ಟವರಿಲ್ಲ.

ಆಹಾರವೇ ಔಷದವಾಗಿರಲ್ಲಿ ಔಷದ ಆಹಾರವಾಗದಿರಲಿ.

ಪ್ರೀತಿ ನೀ ಇಲ್ಲದೆ ನಾ ಹೇಗಿರಲಿ

ಆನಂದ ಭರಿತ ಜೀವನಕ್ಕೆ ಧ್ಯಾನ

ಮೋಡವೇ ದೂರಾ ನೀನಿರು.

ಆಯಾಸ ನಿವಾರಣೆಗೆ ಬಂದಿಷ್ಟು ಟಿಪ್ಸ್

ಮುದಗೊಳಿಸುವ ಮುಗುಳನಗೆ ಮುಕದ ಒಡವೆಯಾಗಿರಲಿ.

ಮಲ ವಿಸರ್ಜನೆಯಲ್ಲಿ ರಕ್ತಸ್ರಾವ ಎಚ್ಚರ ಅಗತ್ಯ.

ಉಗುರಿಗೊಂದು ಅಂದ ಚಂದ

ಸದ್ದಿಲ್ಲದೆ ಆವರಿಸುವ ಸರ್ವಿಕಲ್ ಕ್ಯಾನ್ಸರ್ ಸದ್ಯದಲ್ಲೇ ಲಸಿಕೆ.

ಲಂಚ್ ಬಾಕ್ಸ್‌ನಲ್ಲಿ ಇಲರಿ ಹಣ್ಣು ತರಕಾರಿ

ತಾಯಿಯ ಹಾಲು ಅಮೃತ

ಉಪ್ಪಿಗಿಂತ ರುಚಿ ಬೇರೆ ಇಲ್ಲ.

ಬ್ಯೂಟಿ ಪಾರ್ಲರ್ ಎಚ್ಚರವಿರಲಿ

ರತಿ ವಿಲಾಸ ರೋಗಗಳ ರಾಜ ಸಿಫಿಲಿಸ್

ಸಕ್ಕರೆ ಕಾಯಿಲಿಗೆ ಪ್ರಕೃತಿ ಚಿಕಿತ್ಸೆಯ ಉಪಚಾರ.

ಮಾರಕವಾಗದಿರಲಿ ಹಬ್ಬ ಸಂಭ್ರಮ.

ದುಡ್ಡು ದುಡ್ಡು ದುಡ್ಡು

ಮಳೆಗಾಲದಲ್ಲಿ ಮಹಿಳೆಯರ ಆರೋಗ್ಯ

ಮಹಿಳೆಯರನ್ನು ಕಾಡುವ ಮೂಲವ್ಯಾದಿ.

ಗೌರಿ ಗಣಪನ ಜನ್ಮ ತಾರೆಯರು

ಮಳೆಗಾಲದಲ್ಲಿ ಬಣ್ಣದ ಹಿಂದಿನ ಬದುಕು.

ವೇಶ್ಯೆಯ ಸಂಗ ಎಚ್ ಐ ವಿ ಟೆಸ್ಟ್ ಹೆಂಗ

ಮನಸ್ಸು ಅಂತರ್ಮುಖಿಯಾಗಲಿ

ಧರೆಗಿಳಿದ ಸ್ವಾತಿಮುತ್ತು

ಮುಖದ ಕಾಂತಿಗೆ ಹಣ್ಣು, ತರಕಾರಿ ಬಳಸಿ.

ಏನಿದು ಮೀಸಲು ಮುತ್ತು ಎಂಜಲು ಮುತ್ತು

ದಯೆ ಬೇಕು ಸಕಲ ಪ್ರಾಣಿಗಳಲಿ

ಸರ್ವ ರೋಗಕ್ಕೂ ತುಳಸಿ ಮದ್ದು.

ಫೈಬ್ರಾಯಿಡ್ ಗಡ್ಡೆಗಳಿಂದ ಭಯಬೇಡ.

ಕೂದಲ ರಕ್ಷಣೆಯಲ್ಲಿ ನಿಂಬೆ.

ಈ ನಿರೀಕ್ಷೆ ತೀರ ಸಹಜ

ತವರನ್ನು ನೆನೆಪಿಸುವ ಗೌರಿ ಪೂಜೆ.

ಏನಿದು ಪಾಲಿ ಸಿಸ್ಟಿಕಂ ಓವರಿಸ್

ಜಗದೋದ್ದಾರನ ಆಡಿಸಿದಳೆ ಶೋದೆ

ಮೈಸುತ್ತ ಆವರಿಸುವ ಸರ್ಪಸುತ್ತು.

ಪ್ರಯತ್ನಕ್ಕಿಂತ ದೊಡ್ಡ ಪವಾಡವಿಲ್ಲ

ಮಕ್ಕಳ ಸ್ವಾಭಾವ ಪಾಲಕರ ಪ್ರಭಾವ

ಜೀವದಾಯಿನಿಯ ಅಧ್ಭುತ ಆ ದಿನಗಳು

ಬಾಗಿಲೊಳಗೆ ಬಿಳಿ ವಿಘ್ನ

ಕಾಮನೋ ಭೀಮನೋ

ಬಂದ ದಂಡ ಕಮಂಡಲ ಸನ್ಯಾಸಿ

ಏನನ್ನು ಯೋಚಿಸುತ್ತೇವೋ ಅದನ್ನೇ ಪಡೆಯುತ್ತೇವೆ.

ಬಂದರೇ ಕೋಪ ಆರೋಗ್ಯಕ್ಕೆ ಶಾಪ.

ಅಕ್ಷರ ವಂಚನೆ ಬೇಡ.

ರಜೆಯ ಮಜಾ ಮಗಳಿಗಷ್ಟೆ ಅಲ್ಲ.

ಬರೀ ಅಮ್ಮನಲ್ಲ.

ಸುರಕ್ಷಿತ ತಾಯ್ತನ ಬೆಂಬಲವಿರಲಿ

ಕೋಲು ಕೋಲಣ್ಣಾ ಕೋಲೆ

ಬೇಕಾಗಿದ್ದಾರೆ ಪಾಕ್ಪರು ಅಲ್ಲ ಸಮಾಲೋಚಕರು

ಆಯುರ್ವೇದದಲ್ಲಿ ವಿಶ್ವಾಸ

ಕಣ್ಣೀರ ಧಾರೆ ಇದೇ ಕೋ

ಸಿಹಿ ಹೃದಯಾ, ಪ್ರವಾಸಕ್ಕೆ ಬರುವೆಯಾ

ಗೃಹಿಣಿಗೇಕೆ ಈ ಬಂಧನ

ಮದ್ವೆ ಮಾಡಿಬಿಟ್ರೆ ಮಗ ಸರಿಯಾಗಿಬಿಡ್ತಾನಾ

ತಂಬಾಕು ಬೇಕು

ಅವಳು ಚೆಲುವೆ ಅಂತರಂಗದ ಅಪ್ಸರೆ

ತಂಬಾಕು ತ್ಯಜಿಸಿದ

ಧೂಮಪಾನ ಸ್ತ್ರೀಯರಿಗೆ ಅಪಾಯ ಹೆಚ್ಚು.

ಅಧ್ಯಾಯ ೫

ಮಹಿಳಾ ಪುರವಣೆಗಳಲ್ಲಿನ ಪದಕೋಶ ಪಲ್ಲಟ

ಅಧ್ಯಾಯ ೫

ಮಹಿಳಾ ಪುರವಣೆಗಳಲ್ಲಿನ ಪದಕೋಶ ಪಲ್ಲಟ

ಒಬ್ಬ ಭಾಷಿಕನಲ್ಲಿ ಪದಕೋಶ ಹೇಗೆ ನೆಲೆಗೊಂಡುರುತ್ತದೆ ಎಂಬುದನ್ನು ನಿರ್ಧರಿಸಿ ಹೇಳಲಾಗದು. ಅಂತೆಯೇ ನೆಲೆಗೊಂಡಿರುವ ಪದಕೋಶ ಹೇಗೆ ಬಳಕೆಯಾಗುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಸಾಮಾನ್ಯ ತಿಳುವಳಿಕೆಯ ಪ್ರಕಾರ ಭಾಷಿಕನ ಮೆದುಳಿನಲ್ಲಿ ಪದಕೋಶ ಮುದ್ರಿತ ವಾಗಿರುತ್ತದೆ. ತನಗೆ ಬೇಕಾದ ಆ ಪದವನ್ನು ಆಯ್ಕೆಮಾಡಿಕೊಂಡು ಭಾಷೆಯನ್ನು ಬಳಸುತ್ತಾನೆ. ಹೀಗೆ ಬಳಕೆ ಮಾಡುವಾಗ ಪದದ ರೂಪ ಮತ್ತು ಅರ್ಥಗಳು ಸೂಕ್ತ ಸಂಯೋಜನೆಗೆ ಒಳಪಡದ ಹತ್ತಾರು ಸಂದರ್ಭಗಳು ಭಾಷಿಕನ ಜೀವನದಲ್ಲಿ ಒದಗುತ್ತವೆ. ಕೆಲವೊಂದು ಬಾರಿ ಅರ್ಥಗ್ರಹಿಕೆಗೆ ಬಂದು ಅದನ್ನು ಪ್ರತಿನಿಧಿಸುವ ಧ್ವನಿರೂಪಕ್ಕಾಗಿ ತಡಕಾಡುವುದುಂಟು ಇನ್ನು ಕೆಲವು ಬಾರಿ ಧ್ವನಿ ರೂಪಗಳು ಅರ್ಥಗ್ರಹಿಕೆ ಇಲ್ಲದೆ ನೆನಪಿಗೆ ಬರುವುದುಂಟು.

ಮಾನಸಿಕ ನೆಲೆಯಿಂದ ಪದಕೋಶದ ರಚನೆಯನ್ನು ಹೇಳುವುದಕ್ಕಿಂತ ಬಳಕೆಯಾಗುವ ಕ್ರಮವನ್ನು ಆಧರಿಸಿ ವಿವರಿಸುವುದು ಹೆಚ್ಚು ಸೂಕ್ತ ಎನಿಸುತ್ತದೆ. ಓದುವಾಗ, ಮಾತನ್ನು ಆಲಿಸುವಾಗ, ಬರೆಯುವಾಗ ಇಂತಹ ವಲಯಗಳಲ್ಲಿ ಪದಗಳು ಬಳಕೆಯಾಗುತ್ತದೆ ಮತ್ತು ಮುಖಾಮುಖಿಯಾಗುತ್ತವೆ. ಅಂದರೆ ಪದಕೋಶದಲ್ಲಿ ಮುಖ್ಯವಾಗಿ ಕ್ರಿಯಾತ್ಮಕ ಪದಕೋಶ ಮತ್ತು ನಿಷ್ಕ್ರಿಯಾತ್ಮಕ ಪದಕೋಶ ಎಂದು ಎರಡು ಬಗೆಗಳನ್ನು ಕಾಣಬಹುದು. ಒಬ್ಬ ಭಾಷಿಕ ತಾನೇ ಬಳಸುವ ಪದಕೋಶವನ್ನು ಕ್ರಿಯಾತ್ಮಕ ಪದಕೋಶವೆಂದು ತಾನು ಬಳಸದಿದ್ದರೂ ಇತರ ಮೂಲಗಳಿಂದ ಬಳಕೆಯಾದಾಗ ಗ್ರಹಿಕೆಗೆ ಒದಗುವ ಪದಕೋಶ ನಿಷ್ಕ್ರಿಯಾತ್ಮಕ ಪದಕೋಶ ಎಂದು ಅರ್ಥೈಸಲಾಗುತ್ತದೆ.

ಪ್ರಾಚೀನರು ಕನ್ನಡ ಪದಕೋಶವನ್ನು ದೇಶಿ ಅನ್ಯದೇಶಿ ಎಂಬ ವಿಭಾಗವನ್ನು ಮಾಡಿದ್ದಾರೆ. ತತ್ಸಮಗಳು, ಸಮಸಂಸ್ಕೃತಿಗಳು ಅನ್ಯದೇಶ ಗುಂಪಿನಲ್ಲಿ ಕಂಡುಬರುವುದರ ಜೊತೆಗೆ ಧ್ವನಿ ನಿಯಮಗಳಿಗೆ ಹೊಂದಿಕೊಂಡ ತದ್ಭವಗಳು ಕೂಡ ಕಾಣಿಸಿಕೊಂಡವು ಈ ತದ್ಭವಗಳಲ್ಲಿ ಕೆಲವನ್ನು ಕನ್ನಡವೇ ರೂಪಿಸಿಕೊಂಡಿದ್ದರೆ. ಮತ್ತೆ ಕೆಲವು ಪ್ರಾಕೃತದಿಂದ ಕನ್ನಡಕ್ಕೆ ಬಂದಿವೆ.

ಅನ್ಯ ದೇಶ ಪದಕೋಶದ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆ. ಪರ್ಷೋ, ಅರೇಬಿಕ್, ಮೂಲದ ಪದಗಳು ನೇರವಾಗಿ ಅಥವಾ ಬೇರೆ ಭಾಷೆಗಳ ಮೂಲಕ ಬಂದು ಸೇರಿವೆ.

ಅನ್ಯದೇಶ ಪದಕೋಶದ ವ್ಯಾಪ್ತಿ ವಿಶಾಲವಾದಂತೆ ದೇಶ ಪದಕೋಶದ ವ್ಯಾಪ್ತಿ ಸಂಕುಚಿತಗೊಳ್ಳುತ್ತದೆ. ಒಂದು ಭಾಷೆಯ ಪದಕೋಶದಲ್ಲಿ ಕೊರತೆಯನ್ನು ತುಂಬಲು ಅನ್ಯದೇಶ ಪದಗಳ ಬಳಕೆ ಅಗತ್ಯವೆನಿಸಿದರೂ, ಎಲ್ಲಾ ಸಂದರ್ಭಗಳಲ್ಲಿ ಇದನ್ನು ಒಪ್ಪುವಂತಿಲ್ಲ. ಉದಾ: ಕನ್ನಡ ಪದಕೋಶದಲ್ಲಿ ಮೈ ಪದವಿದ್ದರೂ 'ದೇಹ' ಎಂಬ ಪದ ಬಂದು ಸೇರಿದೆ. ಅದೇ ರೀತಿಯಾಗಿ ಗಂಡು ಹೆಣ್ಣು ಪದಗಳಿದ್ದರೂ ವಧು ವರ ಎಂಬ ಪದಗಳು ಬಂದು ಸೇರಿವೆ. ಈ ಸೇರುವಿಕೆಯ ಪ್ರಕ್ರಿಯೆ ನಡೆದಾಗ ಮೊದಲು ಇದ್ದ ಅರ್ಥ ಹಾಗೂ ಬಳಕೆಯ ವಿಧಾನಗಳು ಬದಲಾಗುತ್ತವೆ. ಉದಾ: ಬೀದಿ, ರಸ್ತೆ, ರೋಡು ಎಂಬ ಪದಗಳು ಬಂದು ಸೇರಿದಾಗ ಹಾದಿ, ದಾರಿ, ಎಂಬ ಪದಗಳು ಕೇವಲ ಸೀಮಿತ ವ್ಯಾಪ್ತಿಯಲ್ಲಿ ಬಳಕೆಯಾಗುವುದನ್ನು ಕಾಣಬಹುದು. ಈ ಪ್ರಕ್ರಿಯೆಯನ್ನು ಪದಕೋಶ ಪಲ್ಲಟ ಎಂದು ಕರೆಯಲಾಗುತ್ತದೆ.

ಪ್ರತಿಯೊಂದು ಭಾಷೆಯು ತನ್ನದೇ ಆದ ಪದಕೋಶವನ್ನು ಹೊಂದಿರುವಂತೆ ಭಾಷಾ ರಚನೆಯ ನಿಯಮಗಳನ್ನು ಹೊಂದಿರುತ್ತದೆ. ಈ ನಿಯಮಗಳನ್ನು ಮತ್ತು ಆಕೃತಿಗಳನ್ನು ಬಳಸುವುದರ ಮೂಲಕ ಪದಗಳನ್ನು ರಚಿಸಲಾಗುತ್ತದೆ. ಉದಾ: ಸಿರಿ ಮತ್ತು ತನ ಎಂಬ ಆಕೃತಿಗಳನ್ನು ಬಳಸಿ 'ಸಿರಿತನ' ಎಂಬ ಪದ ರಚನೆಯಾಗಿದೆ. ಅಲ್ಲದೆ ಸಣ್ಣ, ದೊಡ್ಡ, ಬಡ, ಒಳ್ಳೆಯ, ಹಿರಿ, ದುಡುಕು, ಜಿಪುಣ, ಸಿಡುಕು, ಕಿಲಾಡಿ, ಗುಲಾಮ, ಎಂಬ ಪದಗಳು 'ತನ' ಎಂಬ ಆಕೃತಿಯನ್ನು ಬಳಸಿಕೊಳ್ಳುವುದರಿಂದ ಸಣ್ಣತನ, ದೊಡ್ಡತನ, ಬಡತನ, ಒಳ್ಳೆಯತನ, ಹಿರಿತನ, ದುಡುಕುತನ, ಜಿಪುಣತನ ಸಿಡುಕುತನ, ಕಿಲಾಡಿ ತನ, ಗುಲಾಮತನ ಎಂಬ ಪದಗಳು ರಚನೆಯಾಗುತ್ತವೆ.

ಕನ್ನಡ ಪದಕೋಶ ಹೊಸ ರೂಪಗಳಿಗಾಗಿ ಮುಖ್ಯವಾಗಿ ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳನ್ನು ಅವಲಂಬಿಸಿದೆ. ಈ ಅವಲಂಬನೆಗೆ ಅಥವಾ ಒಂದು ಭಾಷೆಯ ಪದಕೋಶಕ್ಕೆ ಅನ್ಯಭಾಷಾ ಪದಗಳು ಬರುವುದು ಭಾಷಾ ಸಂಪರ್ಕವೇ ಪ್ರಮುಖ ಕಾರಣವಾಗಿದೆ. ಹಿಂದೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಸಂಬಂಧವನ್ನು ಭಾಷಾ ಸಂಪರ್ಕವೆಂದು ಹೇಳಬಹುದಿತ್ತು ಆದರೆ ಈಗ ಎರಡು ಭಾಷೆಗಳ ಸಂಬಂಧವನ್ನು ಸಂಪರ್ಕ ಎಂದು ಹೇಳಲು ಆಗಿಲ್ಲ, ಸಾವಿರಾರು ವರ್ಷಗಳ ಹಿಂದನ ಪರಿಸ್ಥಿತಿ ಇಂದು ಉಳಿದಿಲ್ಲ. ಏಕೆಂದರೆ ಸಂಸ್ಕೃತ ಭಾಷಿಕರಾಗಲಿ, ಸಂಸ್ಕೃತವನ್ನು ರಾಜಕೀಯ ಮಾಧ್ಯಮವನ್ನಾಗಿ ಮಾಡಿದ ಅಧಿಕಾರ ಕೇಂದ್ರಗಳಾಗಲಿ, ಧಾರ್ಮಿಕ ಸಂಸ್ಥೆಗಳಾಲೀ ಈಗ ಇರದಿದ್ದರೂ ಕೂಡ ಕನ್ನಡ ಸಂಸ್ಕೃತ ಪದಗಳನ್ನೇ ಹೆಚ್ಚಾಗಿ ರೂಪಿಸುತ್ತದೆ. ತನ್ಮೂಲಕ ಪದಕೋಶವನ್ನು ವೃದ್ಧಿಗೊಳಿಸುತ್ತದೆ.

ಕನ್ನಡ ಸಂಸ್ಕೃತ ರೂಪಗಳನ್ನು ತಾನೇ ರೂಪಿಸಿಕೊಳ್ಳುವುದರ ಜೊತೆಗೆ ಅನ್ಯ ಭಾಷೆಗಳ ಮೂಲಕವೂ ಪಡೆದುಕೊಳ್ಳುತ್ತಿದೆ. ಅದರಲ್ಲೂ ಹಿಂದಿಯಿಂದ ಇಂಥ ಪದರಾಶಿಗಳು ಕನ್ನಡಕ್ಕೆ ದಾಳಿ ಇಡುತ್ತವೆ. ಉದಾ: 'ವಿಪಕ್ಷ' ಎಂಬ ಪದವು ಸಂಸ್ಕೃತ ಮೂಲದ್ದಾದರೂ ಕನ್ನಡ ಈ ಪದವನ್ನು ಹಿಂದಿಯ ಮೂಲಕ ಪಡೆದು ಕೊಂಡಿದೆ. ಸೆಕ್ರೆಟರಿ ಮತ್ತು ಮಿನಿಸ್ಟರ್, ಎಂಬ ಪದಗಳಿಗೆ ಕಾರ್ಯದರ್ಶಿ, ಸಚಿವ ಎಂಬ ರೂಪಗಳನ್ನು ಕನ್ನಡ ಪಡೆದುಕೊಂಡಿದೆ ಆದರೆ ಇದೇ ರೂಪಗಳನ್ನು ಹಿಂದಿ ಪಡೆಯುವುದರ

ಮೂಲಕ ಕನ್ನಡಕ್ಕೆ ಪ್ರವೇಶ ಪಡೆದಿದೆ. ಅಂದರೆ ಸಂಸ್ಕೃತ ನಿಯಮಗಳನ್ನು ಬಳಸಿ ಕನ್ನಡದ್ದೇ ಪದಗಳನ್ನು ರೂಪಿಸುವ ಪ್ರಕ್ರಿಯೆ ಹಾಗೂ ಅನ್ಯ ಭಾಷೆಯ ಮೂಲಕ ಸಂಸ್ಕೃತ ರೂಪಗಳನ್ನು ಪಡೆಯುವ ಪ್ರಕ್ರಿಯೆ ಇವೆರೆಡು ಪರಸ್ಪರ ಎದುರಾಗುತ್ತವೆ.

ಭಾಷಾ ಸಂಪರ್ಕದ ಪರಿಣಾಮದಿಂದಾಗಿ ಕನ್ನಡ ಪದಕೋಶಕ್ಕೆ ಇಂಗ್ಲೀಷ್ ಪದಗಳು ಬಂದು ಸೇರಿಕೊಳ್ಳುತ್ತಿವೆ. ಹೀಗೆ ಸೇರಿಕೊಳ್ಳುವಾಗ ಯಥಾವತ್ತಾಗಿ ಸೇರುವ ಪ್ರಕ್ರಿಯೆ ತೀವ್ರವಾಗಿದೆ. ಬಂದು ಸೇರಿದ ಪದಗಳನ್ನು ಕನ್ನಡ ತನ್ನ ಪದಕೋಶದಲ್ಲಿ ಇರಿಸಿಕೊಳ್ಳುತ್ತಿದೆ.

ಕನ್ನಡ ಪದಕೋಶಕ್ಕೆ ಇಂಗ್ಲೀಷ್ ಪದಗಳು ಬಂದು ಸೇರುವಾಗ ಇಂಗ್ಲೀಷಿನ ಯಾವ ನಿಯಮ ಬಳಕೆಯಾಗುತ್ತದೆ ಎಂಬುದರ ಬಗ್ಗೆ ಸಾಕಷ್ಟು ಗೊಂದಲಗಳಿವೆ. ನುಡಿಬೆರಿಕೆಯ ಒಂದು ಸಂದರ್ಭವನ್ನು ಉದಾ: ನೋಡಬಹುದು. 'ಅವಳು ವಾಕ್ ಮಾಡುತ್ತಾಳೆ', ಅವಳು ವಾಕಿಂಗ್ ಮಾಡುತ್ತಾಳೆ ಎಂಬ ನುಡಿಬೆರಕೆಯ ಎಂಡು ವಾಕ್ಯಗಳಲ್ಲಿ ಮೊದಲನೆಯ ವಾಕ್ಯದಲ್ಲಿ ವಾಕ್ ಎಂಬ ಇಂಗ್ಲೀಷಿನ ಕ್ರಿಯಾಪದಕ್ಕೆ ಮಾಡು ಎಂಬ ಸಹಾಯಕ ಪದ ಕ್ರಿಯಾಪದ ಬಳಕೆಯಾಗಿದೆ. ಆದೇ ರೀತಿಯಾಗಿ ಎರಡನೆ ವಾಕ್ಯದಲ್ಲಿ 'ವಾಕ್' ಪದದ ಕ್ರಿಯಾನಾಮ ರೂಪ ಡ್ರೈವಿಂಗ್ ಅನ್ನು ಆಯ್ಕೆ ಮಾಡಿಕೊಂಡು 'ಮಾಡು' ಎಂಬ ಸಹಾಯಕ ಕ್ರಿಯಾಪದವನ್ನು ಬಳಸಲಾಗಿದೆ.

ಆಧುನೀಕರಣವನ್ನು ದೃಷ್ಟಿಯಲ್ಲಿಟ್ಟಕೊಂಡು ಕನ್ನಡ ಪದಕೋಶವನ್ನು ನೋಡಲಾಗಿದೆ. ಆಧುನೀಕರಣದಿಂದ ಕನ್ನಡ ಪದಕೋಶ ವಿಸ್ತಾರವಾಗುತ್ತಿದೆ. ಸೂಕ್ತವಾದ ಸಂವಹನ ಕ್ರಿಯೆ ಹಾಗೂ ಸೌಲಭ್ಯ ಆಧುನೀಕರಣದ ಮಾನದಂಡಗಳಾಗುತ್ತವೆ ನಿಜ. ಆದರೆ ಯಾವುದು ಸೂಕ್ತವಾದ ಸಂವಹನ ಕ್ರಿಯೆ ಎಂಬುದು ಪ್ರಶ್ನೆಯಾಗುತ್ತದೆ. ಉದಾ: ಆಕ್ಸಿಜನ್, ಆಮ್ಲಜನಕ, ಪ್ರಾಣವಾಯು ಈ ಮೂರು ಪದಗಳಲ್ಲಿ ಯಾವುದು ಸೂಕ್ತವಾದ ಪದ. ಆದೇ ರೀತಿಯಾಗಿ ಇರಿಗೇಷನ್, ಹನಿನಿರಾವರಿ, ಜಿನುಗು ನೀರಾವರಿ ಇವುಗಳಲ್ಲಿ ಯಾವುದು ಸೂಕ್ತಪದ, ರಸಗೊಬ್ಬರ, ಸೀಮೆಗೊಬ್ಬರ, ರಾಸಾಯನಿಕ ಗೊಬ್ಬರ ಈ ಪದಗಳಲ್ಲಿ ಯಾವುದು ಸೂಕ್ತ? ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬೇಕಾದರೆ ಪ್ರಮಾಣೀಕರಣಕ್ಕೆ ಮಾರು ಹೋಗಬೇಕಾಗುತ್ತದೆ. ಆಂದರೆ ಕನ್ನಡ ಪದಕೋಶ ಆಧುನೀಕರಣಕ್ಕಾಗಿ ಇಂಗ್ಲೀಷನ್ನು ಪ್ರಮಾಣೀಕರಣಕ್ಕಾಗಿ ಸಂಸ್ಕೃತ ಭಾಷೆಯನ್ನು ಅವಲಂಬಿಸಿದೆ. ಎಂಬುದು ತಿಳಿಯುತ್ತದೆ.

ತಂತ್ರಜ್ಞಾನದ ಬೆಳೆವಣಿಗೆ ಹಾಗೂ ಭಾಷಾ ಸಂಪರ್ಕದಿಂದಾಗಿ ಕನ್ನಡ ಪದಕೋಶ ಆಧುನೀಕರಣ ಪ್ರಕ್ರಿಯೆಗೆ ಒಳಗಾಗುತ್ತದೆ. ಈ ಪ್ರಕ್ರಿಯೆಗ್ಗೆ ಇಂಗ್ಲೀಷ್ ಭಾಷೆ ಆವಕಾಶ ಮಾಡಿಕೊಡುತ್ತದೆ. ಉದಾ: ಕಂಪ್ಯೂಟರ್ ಎಂಬ ಪದವನ್ನೇ ಗಮನಿಸೋಣ ಬಹುತೇಕ ಕಲಿತ ಕನ್ನಡಿಗರ ಪದಕೋಶದಲ್ಲಿ ಈ ಪದ ಸೇರಿಹೋಗಿದೆ. ಆದರೆ ಆ ವಸ್ತುವಿನ ಬಳಕೆಗಳ ಮೂಲಕ ಅದನ್ನು ಜನರು ಗ್ರಹಿಸಬಲ್ಲರೇ ಹೊರತು ವಾಸ್ತವಾಗಿ ಆ ವಸ್ತುವಿನ ಸ್ವರೂಪವನ್ನಲ್ಲ.

ಕನ್ನಡ ಪದಕೋಶ ಇಂಗ್ಲೀಷ ಪದಗಳನ್ನು ಸ್ವೀಕರಿಸುವಾಗ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ಸಮಸ್ಯೆಗಳಿಗೆ ಸಂಸ್ಕೃತದ ಭಾಷಾನಿಯಮಗಳನ್ನು ಬಳಸಿಕೊಳ್ಳುವುದರ

ಮೂಲಕ ಪರಿಹಾರವನ್ನು ಕೊಂಡುಕೊಳ್ಳುವುದು ಸಹಜವಾಗಿದೆ. ವಿವಿಧ ವಲಯಗಳಲ್ಲಿ ದಿನ ನಿತ್ಯ ಈ ರೀತಿಯ ಸಮಸ್ಯೆಗಳು ಎದುರಾದಗಲೆಲ್ಲ ಕನ್ನಡ ಅನುಸರಿಸಿದ್ದು ಇದೇ ಮಾರ್ಗವನ್ನು, ಉದಾ: 'ನೇಷನ್' ಎಂಬ ಇಂಗ್ಲೀಷ ಪದಕ್ಕೆ ನಾಡು ಎಂದು ಹೇಳಿ ಬಿಟ್ಟರೆ ಸಾಲದು. ನೇಷನ ಪದದ ಸಾಧಿತ ಪದಗಳಾದ ನೇಷನಲ್ ನೇಷನಲಿಸಂ, ನೇಷನಿಸಂ ಎಂಬ ರೂಪಗಳಿವೆ. ಬರೀ ಕನ್ನಡದ ನಾಡು ಎಂದು ಮಾರುಹೋಗುವುದು ಅನಿವಾರ್ಯವಾಗುತ್ತದೆ. ಇಂತಹ ರೂಪಗಳಲ್ಲಿ ಎಷ್ಟೋ ಕನ್ನಡವೇ ನೇರವಾಗಿ ರೂಪಿಸಿಕೊಂಡಿದ್ದು ಒಂದೆಡೆಯಾದರೆ ಮತ್ತೊಂದೆಡೆ ಭಾರತೀಯ ಇತರ ಭಾಷೆಗಳಲ್ಲಿ ರೂಪಗೊಂಡು ಕನ್ನಡಕ್ಕೆ ಎರವಲು ಬಂದಿವೆ.

ಪಾರಿಭಾಷಿಕ ಪದಕೋಶ ಹಾಗೂ ಪರಿಭಾಷೆಯ ಸಮಸ್ಯೆಗೆ ಹೊಸ ಶಾಸ್ತ್ರಗಳು ಪ್ರವೇಶ ಪಡೆದ ಮೇಲೆ ಪರಿಹಾರ ಸಿಕ್ಕಂತಾಯಿತು. ಆದರೆ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದೆ ಎನ್ನವಂತಿಲ್ಲ. ಕೆಲವರು ಶಾಸ್ತ್ರಗಳನ್ನು ಅಗತ್ಯ ಬಿದ್ದಷ್ಟು ಬಳಸಿಕೊಂಡು ಉನ್ನತಸ್ತರದ ಬರವಣಿಗೆಗೆ ಇಂಗ್ಲೀಷನ್ನು ಅವಲಂಬಿಸಿರುತ್ತಾರೆ. ಈ ರೀತಿಯ ಅವಲಂಬನೆಗೆ ಕಾರಣ ಇಂಗ್ಲೀಷ ಭಾಷೆಯನ್ನು ಸಂಪರ್ಕ ಭಾಷೆಯನ್ನಾಗಿ ಸ್ವೀಕರಿಸುವುದು. ಮಿಗಿಲಾಗಿ ಭಾರತೀಯ ಭಾಷೆಗಳನ್ನು ಉನ್ನತಸ್ತರದ ಬರವಣಿಗೆಗೆ ಸೂಕ್ತವೆಂದು ಪರಿಗಣಿಸುವುದು ಸಾದ್ಯವಿಲ್ಲದ್ದು. ಈ ಎರಡು ಪ್ರಕ್ರಿಯೆಯಿಂದಾಗಿ ಯುಕ್ತ ಪರಿಭಾಷೆ ಹಾಗೂ ಪಾರಿ ಭಾಷಿಕ ಪದಕೋಶವನ್ನು ರೂಪಿಸಕೊಳ್ಳುವುದು ಅವಶ್ಯಕವಾಗಿದೆ. ಇದರಿಂದಾಗಿ ಕನ್ನಡ ಮತ್ತು ಇಂಗ್ಲೀಷ ಭಾಷೆಗಳ ಬಳಕೆಯಲ್ಲಿ ಒಂದು ನಿರ್ದಿಷ್ಟ ಆಯ್ಕೆ ಕಂಡು ಬರುತ್ತದೆ. ಈ ಆಯ್ಕೆಯ ಮೂಲಕ ಸಮಸ್ಯೆಗೆ ಪರಿಹಾರ ಸಿಕ್ಕವುದು ಒಂದೆಡೆಯಾದರೆ ಮತ್ತೊಂದೆಡೆ ಭಾಷಿಕವಾಗಿ ಹೊಸ ಸಮಸ್ಯೆ ಉದ್ಭವವಾಗುತ್ತದೆ. ಕೆಲವು ಶಾಸ್ತ್ರಗಳು ನಿಧಾನವಾಗಿ ನಮ್ಮ ಸಾಂಸ್ಕೃತಿಕ ನೆನಪಿನ ಭಾಗವಾಗುತ್ತ ನಡೆದು ವಾಸ್ತವದಲ್ಲಿ ಅವು ನಿರುಪಯುಕ್ತವಾಗುತ್ತಿರವುದು ಕಂಡುಬರುತ್ತದೆ.

ಉದಾ: ಕುಂಬಾರಿಕೆಯ ಶಾಸ್ತ್ರ ಮಡಿಕೆಗಳ ಜಾಗವನ್ನು ಇತರ ಲೋಹ ಸಾಮಾಗ್ರಿಗಳು ಹಿಡಿಯುತ್ತ ಹೋದಂತೆ ಕುಂಬಾರಿಕೆ ಮೂಲೆ ಗುಂಪಾಗಿ ಅದಕ್ಕೆ ಸಂಬಂಧಿಸಿದ ಪರಿಭಾಷೆ ಕನ್ನಡದಲ್ಲಿ ನಿರುಪಯುಕ್ತವಾಗುತ್ತಾ ಹೋಗುತ್ತವೆ. ಇನ್ನೂ ಕೆಲವು ಶಾಸ್ತ್ರಗಳು ತಮ್ಮ ಪಾರಂಪರಿಕ ಲಕ್ಷಣಗಳೊಡನೆ ಆಧುನಿಕತೆಯನ್ನು ಮೈಗೂಡಿಸಿಕೊಳ್ಳುಬೇಕಾಗಿ ಬಂದಾಗ ಸಮಸ್ಯೆ ಎದುರಾಗುತ್ತವೆ. ಉದಾ: ಕೃಷಿ, ಬೇಸಾಯ ನೂರಾರು ತಲೆಮಾರುಗಳಿಂದ ಜನ ಜೀವನದ ಭಾಗವಾಗಿ ಬೆಳೆದು ತನ್ನದೇ ಆದ ಶಾಸ್ತ್ರವನ್ನು ಹೊಂದಿದೆ.

ಒಂದು ನಿರ್ದಿಷ್ಟ ಪದ ನಿರ್ದಿಷ್ಟ ವಲಯದಲ್ಲಿ ಒಂದು ಅರ್ಥದಲ್ಲಿ ಬಳಕೆಯಲ್ಲಿದ್ದರೆ. ಅದೇ ಪದ ಮತ್ತೊಂದು ವಲಯದಲ್ಲಿ ಬಳಕೆಯಲ್ಲಿರುವ ರೀತಿಯಲ್ಲೇ ಬಳಕೆಯಲ್ಲಿರಬಹುದು ಇಲ್ಲವೇ ಮೂಲಕ್ಕಿಂತ ಭಿನ್ನವಾಗಿ ಬಳಕೆಯಾಗುವ ಪ್ರಕ್ರಿಯೆಗೆ ಪದಕೋಶ ಪಲ್ಲಟ ಎಂದು ಕರೆಯುವರು. ಮಹಿಳಾ ಪುರವಣೆಗಳಲ್ಲಿ ಬಳಕೆಯಾಗುವ ಬೇರೆ ಭಾಷಾ ಪದಗಳನ್ನು ಆಧಾರವಾಗಿಟ್ಟುಕೊಂಡು ಪದಕೋಶ ಪಲ್ಲಟ ಹೇಗೆ ಆಗುತ್ತವೆ ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಸ್ಪಷ್ಟ

ಪಡಿಸಿಕೊಳ್ಳಬಹುದು. ಉದಾ: **ಚೇಲಿ** ಎನ್ನುವ ಪದವು ಮೂಲ ಅರ್ಥದಲ್ಲಿ ಹಿಂದಿಯಲ್ಲಿ ಬಲತ್ಕಾರವಾಗಿ ಎಳೆವಯಸ್ಸಿನಲ್ಲಿ ಮುಸ್ಲಿಂಳನ್ನಾಗಿ ಮತಾಂತರ ಮಾಡಲ್ಪಟ್ಟವಳು ಎಂಬ ಅರ್ಥದಲ್ಲಿ ಬಳಕೆಯಾದರೆ ಈಗ ಈ ಪದವು ಪ್ರಚಲಿತ ರಾಜಕೀಯ ವಿದ್ಯಾಮಾನಗಳ ಸ್ಥಿತಿಗತಿಯನ್ನು ತಿಳಿಸುವ ನಿಟ್ಟಿನಲ್ಲಿ ಸೇವಕಿ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಅದೇ ರೀತಿಯಾಗಿ '**ಚೌಕಾಸಿ**' ಎನ್ನುವ ಈ ನಾಮಪದವು ಮೂಲಾರ್ಥದಲ್ಲಿ ವ್ಯಾಪಾರ ವ್ಯವಹಾರಗಳಲ್ಲಿ ಕಡಿಮೆ ಬೆಲೆಗೆ ಕೇಳುವುದು ಎಂದು ಬಳಕೆಯಾದರೆ ಇನ್ನೊಂದು ವಲಯದಲ್ಲಿ ಇದೇ ಪದವು ಜಿಪುಣೆ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಇಂಗ್ಲೀಷನಲ್ಲಿ ಕಂಜೂಷ್ ಎಂದು ಕರೆಯುತ್ತಾರೆ. ಉದಾ: ಅವಳು ಬಹಳ ಚೌಕಾಸಿ ಇದ್ದಾಳೆ. ಆದೇ ರೀತಿಯಾಗಿ '**ಪೆಟ್ರೋಮ್ಯಾಕ್ಸ**' ಎನ್ನವ ಈ ನಾಮ ಪದವು ಮೂಲ ಅರ್ಥದಲ್ಲಿ ಅನಿಲದಿಂದ ತುಂಬಿದ ಹೂಜಿ, ಅಥವ ಕೊಳಾಯಿ, ದೀಪಗಳನ್ನು ಉರಿಸುವ ಸಾಮಾಗ್ರಿ ಎಂದು ಬಳಕೆಯಾದರೆ ಇದೇ ಪದವು ಇನ್ನೊಂದು ವಲಯದಲ್ಲಿ ಹೆಣ್ಣನ್ನು ಅಶ್ಲೀಲತೆ, ಅವಾಚ್ಯ, ಕೆಟ್ಟ ನಡತೆಯನ್ನು ಹೇಳುವಲ್ಲಿ ಈ ಶಬ್ದವನ್ನು ಬಳಸುತ್ತಾರೆ.

ಇದೇ ರೀತಿಯಲ್ಲಿ ಹೆಣ್ಣು ಪದವನ್ನು 'ಸ್ತ್ರೀ' ಮತ್ತು 'ಲೇಡಿ' ಪದಗಳು ಬರಹದ ನೆಲೆಯಲ್ಲಿ ಸ್ತ್ರೀ ಹೆಚ್ಚು ಬಳಕೆಯಾದರೆ ಬಳಕೆಯ ನೆಲೆಯಲ್ಲಿ ಲೇಡಿ ಪದ ಹೆಚ್ಚು ಬಳಕೆಯಲ್ಲಿದೆ. ಅಂದರೆ ಹೆಣ್ಣು/ ಹೆಂಗಸು/ ಮಹಿಳೆ/ ಪದಗಳು ಸೀಮಿತ ವಲಯದಲ್ಲಿ ಬಳಕೆಯಾಗುತ್ತಿದ್ದು ಸ್ತ್ರೀ ಮತ್ತು ಲೇಡಿ ಪದಗಳು ವ್ಯಾಪಕ ವಲಯದಲ್ಲಿ ಬಳಕೆಯಾಗುತ್ತಿರುವ ಪ್ರಕ್ರಿಯೆಯನ್ನು ಪದಕೋಶ ಪಲ್ಲಟ ಎಂದು ಕರೆಯಲಾಗುತ್ತದೆ.

ಇದೇ ರೀತಿಯಲ್ಲಿ ಹೆಂಡ್ತಿ/ ಮನೆಯವಳು/ ಯಜಮಾನತಿ/ ಪದಗಳ ಕೆಲಸವನ್ನು ಗೃಹಿಣಿ ವೈಫ್ ಪದಗಳು ನಿರ್ವಹಿಸುತ್ತಿರುವುದು ಪದಕೋಶದ ಪಲ್ಲಟವನ್ನು ಹೇಳುತ್ತದೆ. ಹಾಗೆಯೇ ಅವ್ವ/ ತಾಯಿ/ ಅಮ್ಮ/ ಮದರ್/ ಮಮ್ಮಿ/ ಪದಗಳಲ್ಲಿ ಅವ್ವ ತುಂಬಾ ಸೀಮಿತ ವಲಯದಲ್ಲಿ ಬಳಕೆಯಲ್ಲಿದೆ. ವ್ಯಾಪಕವಾಗಿ ಮಮ್ಮಿ ಪದದ ಬಳಕೆ ಪದಕೋಶದ ಪಲ್ಲಟವನ್ನು ಧ್ವನಿಸುತ್ತದೆ.

ಸುಂದರಿ/ ಚಲುವೆ/ ಪದಗಳು ತುಂಬಾ ನಿರ್ದಿಷ್ಟ ವಲಯದಲ್ಲಿ ಬಳಕೆಯಲ್ಲಿದ್ದು ಇವುಗಳ ಕೆಲಸವನ್ನು ಬ್ಯೂಟಿ ಫಿಗರ್ ಪದಗಳು ನಿರ್ವಹಿಸುತ್ತಿರುವ ಪ್ರಕ್ರಿಯೆಯ ಪದಕೋಶದ ಪಲ್ಲಟವನ್ನು ಹೇಳುತ್ತದೆ. ಹಾಗೆಯೇ ತಂಗಿ /ಸಹೋದರಿ/ ಪದಗಳು ತುಂಬಾ ಸಂಕ್ಷಿಪ್ತ ವಲಯದಲ್ಲಿ ಬಳಕೆಯಲ್ಲಿದ್ದು ಇವುಗಳ ಕೆಲಸವನ್ನು ಇಂಗ್ಲೀಷ ಪದವಾದ ಸಿಸ್ಟರ್ ಎಂಬ ಪದವು ಕಾರ್ಯ ನಿರ್ವಹಿಸುತ್ತಿದೆ. ಈ ಪ್ರಕ್ರಿಯೆ ಪದಕೋಶದ ಪಲ್ಲಟವನ್ನು ಹೇಳುತ್ತದೆ. ಅದೇ ರೀತಿಯಾಗಿ ಪಾರಿವಾಳ ಎನ್ನುವ ನಾಮಪದವು ಮೂಲ ಅರ್ಥದಲ್ಲಿ ಒಂದು ಪಕ್ಷಿಯ ಹೆಸರನ್ನು ಸೂಚಿಸಲು ಬಳಕೆಯಾಗಿದೆ. ಹಿಂದಿಯಲ್ಲಿ ಇದಕ್ಕೆ ಕಬೂತ್ ಎಂದು ಕರೆಯುವುದುಂಟು. ಆದರೆ ಇದೇ ಪದವು ಇನ್ನೊಂದು ವಲಯದಲ್ಲಿ ಸ್ತ್ರೀಯನ್ನು ಕುರಿತು ಬಳಕೆಯಾಗಿದೆ. ಉದಾ: ಆ ಪಾರಿವಾಳ ಬಂತು ಕಾಳು ಹಾಕು ಎಂದು ಬಳಕೆಯಾಗಿದೆ. ಅದೇ ರೀತಿಯಾಗಿ **ಗ್ಯಾಸ್** ಎನ್ನುವ ಪದವು ಮೂಲಾರ್ಥದಲ್ಲಿ ಇಂಧನ ಎಂದು ಬಳಕೆಯಾದರೆ ಪ್ರಸ್ತುತ

ಸಾಮಾಜಿಕ ಸಂದರ್ಭದಲ್ಲಿ ಮತ್ತೊಂದು ವಲಯದಲ್ಲಿ ಈ ಪದವು ಸುಳ್ಳು, ಡೂಪು, ಬೊಗಳೆ, ರೀಲ್ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಮತ್ತೊಂದು ವಲಯದಲ್ಲಿ ಅವಳು ಗ್ಯಾಸ್ ಬಿಟ್ಟಳು ಎಂದರೆ ಹೂಸು, ಗಾಳಿ, ಎಂದರ್ಥ.

ಅದೇ ರೀತಿಯಾಗಿ **ಸವಾರಿ** ಎನ್ನುವ ಈ ನಾಮಪದವು ಮೂಲ ಅರ್ಥದಲ್ಲಿ ಸಂಚಾರ, ತಿರುಗಾಟ, ಎಂಬ ಅರ್ಥದಲ್ಲಿ ಬಳಕೆಯಾದರೆ ಇದೇ ಪದವು ಮತ್ತೊಂದು ವಲಯದಲ್ಲಿ ದಬ್ಬಾಳಿಕೆ, ದೌರ್ಜನ್ಯ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಮತ್ತೊಂದು ವಲಯದಲ್ಲಿ ಕುದುರೆಯಮೇಲೆ ಸವಾರಿ ಮಾಡುವುದು (à;] ! ; [illegible] N Ú]: [illegible] [illegible] % ; α ಅತ್ತೆಯು ಸೊಸೆಯ ಮೇಲೆ ಸವಾರಿ ಮಾಡುತ್ತಾಳೆ ಎಂದು ಬಳಕೆಯಾಗಿದೆ. ಅದೇ ರೀತಿಯಾಗಿ **ಚಾಕು** ಎನ್ನುವ ಈ ನಾಮಪದವು ಮೂಲ ಅರ್ಥದಲ್ಲಿ ಕೊಯ್ಯುವ ಸಾಧನ ಎಂದು ಬಳಕೆಯಾದರೆ ಇತ್ತೀಚಿನ ದಿನಮಾನಗಳಲ್ಲಿ ಈಪದವು ಇನ್ನೊಂದು ವಲಯದಲ್ಲಿ ವ್ಯಕ್ತಿಯ ದೈಹಿಕ ಸ್ವರೂಪವನ್ನು ಸೂಚಿಸುವ ಪದವಾಗಿ ಬಳಕೆಯಾಗಿದೆ. ಉದಾ: ಆ ಹೆಣ್ಣು ನೋಡಲಿಕ್ಕೆ ಒಳ್ಳೆಯ ಚಾಕುವಿನಂತೆ ಇದ್ದಾಳೆ (ತೆಳ್ಳಗೆ) ಎಂದು ಬಳಕೆಯಾಗುತ್ತದೆ.

ಕಾಲೇಜು ಹಂತದಲ್ಲಿರುವ ಹದಿ ಹರೆಯದ ಗುಂಪುಗಳಲ್ಲಿ ಕೆಲವೊಂದು ಪದಗಳಿಗೆ ವಿಶಿಷ್ಟವಾದ ಅರ್ಥಗಳನ್ನು ನೀಡಿ ಬಳಕೆಮಾಡಲಾಗುತ್ತಿರುತ್ತದೆ. ಅಂತಹ ಪದಗಳಲ್ಲಿ ಪೀಸ್.

ಪೀಸ್ ತುಂಡು ಎಂಬುದು ಅರ್ಥವಾದರೂ ಹದಿ ಹರೆಯದವರಲ್ಲಿ ಬೇರೆ ಅರ್ಥವೇ ಇದೆ. 'ಹೊಡೆದ ಏಟಿಗೆ ಗಾಡಿ ಎರಡು ಪೀಸ್ ಆಗಿಹೋಯಿತು'. ಆದರೆ ಪರ್ಯಾಯವಾಗಿ ಸಮಾಜದಲ್ಲಿ ಹದಿಹರೆಯದ ಹುಡುಗರು ಹುಡುಗಿಯನ್ನು ಪೀಸ್ ಎಂಬುದಾಗಿ ಬಳಕೆಯಾಗುವುದು. ಇಲ್ಲಿ ಪೀಸ್ ಎಂದರೆ ಸುಂದರವಾದ, ಹದಿಹರೆಯದ ಹುಡುಗಿ ಎಂಬರ್ಥ ಬರುತ್ತದೆ.

ಇನ್ನೊಂದು ವಲಯದಲ್ಲಿ ಪೀಸ್ ಎಂದರೆ ಶಾಂತಿ, ನೆಮ್ಮದಿ ಎಂದರ್ಥ ಬರುತ್ತದೆ.

ಡವ್ ಇದು ಇಂಗ್ಲೀಷಿನ ಡೋವ್ ಎಂಬ ಪದದ ಕನ್ನಡ ಲಿಪ್ಯಂತರ, ಹಕ್ಕಿ ಎಂಬುದು ಇದರ ಅರ್ಥ. ಹದಿಹರೆಯದ ಗುಂಪುಗಳಲ್ಲಿ ಹಕ್ಕಿ ಎಂಬುದನ್ನು ಹುಡುಗಿಗೆ ಅನ್ವಯಿಸಿ ಹೇಳಲಾಗುತ್ತದೆ.

ಉದಾ: ನಿನ್ನ ಡವ್ ಬಂದ್ಲಾ ಅಂದರೆ ಇಲ್ಲಿ ಹುಡುಗನಿಗೆ ಇಷ್ಟವಾದ ಹುಡುಗಿಯೇ ಡವ್ ಎಂದು ಸೂಚಿಸುತ್ತದೆ.

ಡಗಾರ್ ಸುಂದರವಾದ ಮೈಕಟ್ಟುಳ್ಳ ಹುಡುಗಿ ಅಥವಾ ಮಹಿಳೆಯನ್ನು ಸೂಚಿಸಲು ಬಳಕೆಯಾಗುತ್ತದೆ. ಈ ಪದ ಕೇವಲ ಹದಿ ಹರಿಯದ ಹುಡುಗರಲ್ಲಿ ಮಾತ್ರ ಬಳಕೆಯಲ್ಲಿದೆ. ಈ ಪದದ ಬಳಕೆಯ ಮೂಲಕ ಲೈಂಗಿಕತೆಯ ವಿವಿಧ ಮಜಲುಗಳನ್ನ ಪರಿಚಯಿಸಲು ಈ ಪದವನ್ನು ಹೆಚ್ಚಾಗಿ ಬಳಕೆಗೆ ತರಲಾಗಿದೆ. ಆದರೆ ಡಗಾರ್ ಪದದಲ್ಲಿ ಮೇಲುನೋಟಕ್ಕೆ ಅಶ್ಲೀಲತೆ ಕಂಡು ಬಂದರೂ ಒಳ ಅರ್ಥದಲ್ಲಿ ಮಹಿಳೆಯ ಸೌಂದರ್ಯಕ್ಕೆ ವಿಶೇಷವಾದ ಅರ್ಥವಿದೆ.

ಮಾಲು ಮಾಲು ಎನ್ನುವುದು ಮೂಲತಃ ಯಾವುದೇ ಸರಕಿನ ಸಂದರ್ಭದಲ್ಲಿ ಬಳಕೆಯಾಗುತ್ತದೆ. ಅಂದರೆ ವ್ಯಾಪಾರಿಗಳು ಇಂದು ಮಾರ್ಕೆಟಿಗೆ ತುಂಬಾ ಮಾಲು ಬಂದಿದೆ. ಎಂಬುದನ್ನು ಬಳಸುವುದನ್ನು

ನೋಡುತ್ತೇವೆ. ಅದೇತೆರನಾಗಿ ಈ ಮಾಲು ಎಂಬ ಪದವನ್ನು ಕೆಲವು ಮಹಿಳೆಯರಿಗೂ ಕರೆಯುವುದುಂಟು ಹೇಗೆಂದರೆ ವೇಶ್ಯಾವಾಟಿಕೆ ಮಾಡುವವರು ಸುಂದರವಾದ, ಚೆನ್ನಾಗಿರುವ ಮಹಿಳೆ ಇದ್ದರೆ ಇದು ಚೆನ್ನಾಗಿರುವ ಮಾಲು ಇದೆ ಎಂಬುದನ್ನು ಬಳಕೆ ಮಾಡಲಾಗುತ್ತದೆ.

ಪೆಟ್ರೋಮ್ಯಾಕ್ಸ್ ಮದುವೆಯಾದ ಒಬ್ಬ ಮನುಷ್ಯ ಹೆಂಡತಿಗೆ ಪರ್ಯಾಯವಾಗಿ ಇನ್ನೊಬ್ಬರನ್ನು ಸ್ವೀಕರಿಸಿಕೊಂಡಿರುವುದಕ್ಕೆ ಈ ಪದವನ್ನು ಬಳಕೆ ಮಾಡಲಾಗುತ್ತದೆ. ಇದಕ್ಕೆ ಪರ್ಯಾಯವಾಗಿ 'ಸ್ಟೆಪ್ನಿ' ಎಂಬ ಪದವನ್ನೂ ಬಳಸುವುದುಂಟು. ಈಮೇಲೆ ವಿವರಿಸುದ ಪೀಸ್,ಡವ್,ಡಗಾರ್,ಮಾಲು, ಪೆಟ್ರಾಮೆಕ್ಸ್ ಇತ್ಯಾದಿ ಪದಗಳೆಲ್ಲವು ಸಮಾಜದಲ್ಲಿ ನೇರವಾಗಿ ಬಳಕೆಯಾಗದೆ ಗುಪ್ತಭಾಷೆಯಾಗಿ ಹೆಂಗಸನ್ನು ಸೂಚಿಸಲು ಬಳಕೆಯಾಗುವುದನ್ನು ಕಾಣುತ್ತೇವೆ.

ಅದೇ ರೀತಿಯಾಗಿ ಸ್ಪೀಕರ್ ಎನ್ನುವ ಈ ನಾಮಪದವು ಮೂಲ ಅರ್ಥದಲ್ಲಿ ಧ್ವನಿಪೆಟ್ಟಿಗೆ ಎಂದು ಬಳಕೆಯಾದರೆ ಇನ್ನೊಂದು ವಲಯ ಅಂದರೆ ರಾಜಕೀಯ ವಲಯದಲ್ಲಿ ಸಭಾಧ್ಯಕ್ಷ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ.

ಉದಾ: ನಯನ ಹಾಡನ್ನು ಹಾಡುವಾಗ ಸ್ಪೀಕರ್ ಕೈಕೊಟ್ಟಿತು.ಹೀಗೆ ಒಂದು ನಿರ್ದಿಷ್ಟ ಪದ ನಿರ್ದಿಷ್ಟ ವಲಯದಲ್ಲಿ ಒಂದು ಅರ್ಥದಲ್ಲಿ ಬಳಕೆಯಾದರೆ ಅದೇ ಪದ ಮತ್ತೊಂದು ವಲಯದಲ್ಲಿ ಈಗಾಗಲೇ ಬಳಕೆಯಲ್ಲಿರುವ ಅರ್ಥದಲ್ಲಿಯೇ ಬಳಕೆಯಲ್ಲಿರಬಹುದು ಇಲ್ಲವೇ ಮೂಲ ಅರ್ಥಕ್ಕಿಂತ ಭಿನ್ನವಾದ ಅರ್ಥದಲ್ಲಿ ಬಳಕೆಯಾಗುತ್ತವೆ. ಈ ರೀತಿಯಾಗಿ ಮಹಿಳಾ ಪುರವಣಿಗಳಲ್ಲಿ ಬಳಕೆಯಾದ ಭಾಷಾ ಪದಗಳು ಪಲ್ಲಟವಾಗುತ್ತವೆ.

ಅಧ್ಯಾಯ ೬

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಭಾಷೆ ನಿತ್ಯ ನೂತನವಾದದ್ದು, ದಿನ ದಿನವೂ ಹೊಸ ಹೊಸ ರೂಪವನ್ನು ಪಡೆದುಕೊಳ್ಳುತ್ತದೆ. ಅದರಲ್ಲೂ ಮುಖ್ಯವಾಗಿ ಮಾಧ್ಯಮ ಮುಖಿಯಾಗಿ ಬರುವ ಭಾಷೆ ವಿಶೇಷವಾಗಿರುತ್ತದೆ.

ಹಲವಾರು ಮಾಧ್ಯಮಗಳಲ್ಲಿ ಪತ್ರಿಕಾ ಮಾಧ್ಯಮವು ಒಂದಾಗಿದೆ. ವಿಭಿನ್ನ ಮನಸ್ಸಿನ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಕ್ರೀಡೆ, ಸಿನಿಮಾ, ಮಹಿಳಾ ಪುರವಣಿಗೆ ಹೀಗೆ ಹತ್ತು ಹಲವು ಕ್ಷೇತ್ರಗಳ ಒಳತೋಟಿಯನ್ನು ಬಿಂಬಿಸುತ್ತವೆ. ಪತ್ರಿಕೆಯಲ್ಲಿನ ಕ್ರೀಡಾ ಪುಟವು ಕ್ರೀಡೆಯ ಭೂತ, ವರ್ತಮಾನ ಮತ್ತು ಭವಿಷತ್ ಕುರಿತು ತಿಳಿಸುತ್ತವೆ. ಹಾಗೆಯೇ ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಕ್ಷೇತ್ರದ ಒಳ ಮತ್ತು ಹೊರಗನ್ನು ಪರಿಚಯಿಸುತ್ತದೆ. ಪತ್ರಿಕೆಗಳಲ್ಲಿ ಬಳಕೆಯಾಗುವ ಭಾಷೆ ಸಾಮಾನ್ಯವಾಗಿ ಶಿಷ್ಟ ಕನ್ನಡವಾಗಿದ್ದರೂ ಬದಲಾಗುವ ಜಗತ್ತಿಗನುಗುಣವಾಗಿ ಜಾಗತೀಕರಣ, ಉದಾರೀಕರಣ, ಕೈಗಾರೀಕರಣ ಹಾಗೂ ನಗರೀಕರಣಗಳ ಪ್ರಭಾವದಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದ ಹಿನ್ನೆಲೆಯಲ್ಲಿ ಪತ್ರಿಕಾ ಮಾಧ್ಯಮದ ಪದಕೋಶದಲ್ಲಿ ಪರಿಣಾಮಕಾರಿ ಪಲ್ಲಟ ಕಂಡುಬಂದಿದ್ದು, ಕನ್ನಡ ಭಾಷೆಯ ಜೊತೆಗೆ ಸಂಸ್ಕೃತ, ಇಂಗ್ಲಿಷ್, ಹಿಂದಿ, ಅರೇಬಿಕ್, ಇನ್ನು ಮುಂತಾದ ಪದಗಳು ಬಂದು ಸೇರಿಕೊಳ್ಳುತ್ತಿವೆ. ಮಹಿಳಾ ಪತ್ರಿಕೆಗಳ ವಿವಿಧ ಕಾಲಂಗಳನ್ನು ಗಮನಿಸಿದಾಗ ಪ್ರಮಾಣೀಕರಣದ ಕನ್ನಡ ಭಾಷೆಯೊಂದಿಗೆ ಅನ್ಯ ಭಾಷೆಯ ಪದಗಳು ಬಳಕೆಯಾಗಿರುವುದು ಕಂಡುಬರುತ್ತದೆ.

ಈ ಅಧ್ಯಯನದ ''ಮಹಿಳಾ ಪುರವಣಿಗಳ ಭಾಷಿಕ ಅಧ್ಯಯನ'' ಎಂಬ ವಿಷಯದ ಕುರಿತಾಗಿದೆ. ಮಹಿಳಾ ಪುರವಣಿಯಲ್ಲು ಮಹಿಳೆಯರ ಕುರಿತಾದ ಅನ್ನುವುದಕ್ಕಿಂತ ಮಹಿಳೆಯರೇ ಕೇಂದ್ರ ವಸ್ತುವಾಗಿದ್ದರೆ. ಮಹಿಳೆಯರ ನೋವು ನಲಿವುಗಳಿರಬಹುದು, ವಿವಿಧ ಕ್ಷೇತ್ರದಲ್ಲಿನ ಸಾಧನೆಯಿರಬಹುದು, ಅಲಂಕಾರ ಸಾಮಾನುಗಳು, ವಸ್ತುಗಳನ್ನು ಪರಿಚಯಿಸುವುದರ ಮುಖಾಂತರ ಅವುಗಳ ಬಳಕೆ ವಿಧಾನದ ಮಾಹಿತಿಯನ್ನು ಮಹಿಳಾ ಪುರವಣಿಯಲ್ಲಿ ಕಾಣಬಹುದು. ಹೀಗೆ ಓದುಗನಿಗೆ ಪರಿಚಯಿಸಬೇಕಾದ ಸಂದರ್ಭದಲ್ಲಿ ವಸ್ತುವಿನಷ್ಟೆಯೇ ಭಾಷೆಯ ಬಳಕೆಯ ಕೂಡ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ವಿಷಯಕ್ಕೆ ಪೂರಕವಾಗುವಂತೆ ಹಲವು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ. ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳು ಈ ಕೆಳಕಂಡಂತಿವೆ.

ಅಧ್ಯಾಯ ಒಂದರಲ್ಲಿ ಅಧ್ಯಯನದ ಸ್ವರೂಪ, ಉದ್ದೇಶವನ್ನು ಕುರಿತು ಚರ್ಚಿಸಲಾಗಿದೆ. ಕನ್ನಡ ಭಾಷೆಯೊಳಗೆ ಮಹಿಳಾ ಸೂಚಕವಾದ ವಿಚಾರಗಳನ್ನು ಪುರುಷ ಸೂಚಕವಾದ ಬಾಷೆಯಲ್ಲಿ ವಿವರಿಸಿರುವುದು ನೋಡಬಹುದಾಗಿದೆ. ಇಂತಹ ಚಾರಿತ್ರಿಕವಾದ ಸತ್ಯಸಂಗತಿಯನ್ನು ನಿದರ್ಶನಗಳ ಮೂಲಕ ವಿವರಿಸುತ್ತಾ ಲಿಂಗ ತಾರತಮ್ಯ ಹೇಗೆ ನಡೆದಿದೆ, ಲಿಂಗ ತಾರತಮ್ಯ ಕುರಿತು ಹೇಳುವ ಸಂದರ್ಭದಲ್ಲಿ ಭಾಷೆಯ ಬಳಕೆಯ ಬಗೆ ಎಂಥದ್ದು ಅನ್ನುವುದು ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ. ಅಧ್ಯಯನದ ಸ್ವರೂಪ ಮತ್ತು ಈ ಅಧ್ಯಯನ ಎಂ.ಫಿಲ್. ಪ್ರಬಂಧ ಆಗಿರುವುದರಿಂದ ಇದಕ್ಕಿರುವ ಮಿತಿಯನ್ನು ಕೂಡ ಇಲ್ಲಿ ಹೇಳಿದೆ. ಜೊತೆಗೆ ಈ ಅಧ್ಯಯನಕ್ಕೆ ಅಳವಡಿಸಿದ ವೈಧಾನಿಕತೆಯನ್ನು ಇಲ್ಲೆ ಹೇಳಲಾಗಿದೆ.

ಎರಡನೇ ಅಧ್ಯಾಯದಲ್ಲಿ ಒಟ್ಟು ಕನ್ನಡ ಭಾಷೆಯಲ್ಲಿ ಮಹಿಳಾ ಸೂಚಕ ಭಾಷೆಯ ರಚನೆಯನ್ನು ಕುರಿತು ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಅಂದರೆ ಇಲ್ಲಿಯವರೆಗೆ ಮಹಿಳೆಯರನ್ನು ಕುರಿತು ಹಾಗೂ ಮಹಿಳಾ ಭಾಷೆಯ್ನು ಕುರಿತು ಏನೇನು ಅಧ್ಯಯನಗಳು ನಡೆದಿವೆ. ಎಂಬುದನ್ನು ಮತ್ತು ಅವುಗಳಲ್ಲಿ ಮುಖ್ಯವಾಗಿ ಚರ್ಚಿಸಲಾದ ವಿಧಾನಗಳನ್ನು ವಿವರಿಸಲಾಗಿದೆ.

ಅಧ್ಯಾಯ ಮೂರು ಮತ್ತು ನಾಲ್ಕರಲ್ಲಿ ಮಹಿಳಾ ಪುರವಣಿಗಳ ಭಾಷಾ ವೈವಿಧ್ಯತೆ ಮತ್ತು ಹೊಸ ಪದಗಳ ಪ್ರಯೋಗ ಬಳಕೆ, ಹಾಗೂ ಹೊಸ ಪದಗಳ ಸ್ತ್ರೀಕರಣದ ಕುರಿತು ವಿವರಿಸಲಾಗಿದೆ. ಮಹಿಳೆಯರ ಸಮಸ್ಯೆಗಳನ್ನು ವಿವರಿಸುವ ಸಂದರ್ಭದಲ್ಲಿ ಅತ್ಯಂತ ಕರುಣಾ ಮಯಿಯಾಗಿ ಚಿತ್ರಿಸುವುದು. ಉದಾಹರಣೆಗೆ ಅಧ್ಯಯನದ ಮುಖ್ಯ ಭಾಗವಾದ ಈ ಅಧ್ಯಾಯಗಳಲ್ಲಿ ಮಹಿಳಾ ಸೂಚಕ ಪದಗಳನ್ನು ಭಾಷಿಕ ರಚನೆ ಮತ್ತು ಬಳಕೆ ಹಿಂದಿನ ಒತ್ತಡಗಳ ಹಿನ್ನೆಲೆಯಲ್ಲಿ ಅಂದರೆ ಸಮಾಜೋ-ಭಾಷಿಕ ಅಧ್ಯಯನ ವಿಧಾನದಡಿಯಲ್ಲಿ ಚರ್ಚಿಸಲಾಗಿದೆ. ''ಏನಿದು? ಮುತ್ತು ಎಂಜಲು ಮುತ್ತು'' ಎನ್ನುವ ವಾಕ್ಯದಲ್ಲಿ ಹೆಣ್ಣಿನ ಬದುಕಿನ ಕರಾಳಛಾಯೆ ಶತ-ಶತಮಾನಗಳಿಂದ ನಡೆಯುತ್ತಾ ಬಂದಿರುವ ಈ ಶೋಷಣೆ ತಪ್ಪುವುದಿಲ್ಲ ಎಂಬ ಅಭಿಪ್ರಾಯವನ್ನು ತೋರಿಸುತ್ತದೆ. ಅಂದರೆ ಪುರಷ ಪ್ರಧಾನತೆಯಲ್ಲಿ ಹೆಣ್ಣು ಹೇಗೆ ಬದುಕನ್ನು ನಿರ್ವಹಿಸಬೇಕು ಎಂಬುದನ್ನು ತಿಳಿಸುತ್ತದೆ. ಅದೇ ರೀತಿಯಾಗಿ ಕನ್ನಡ ಚಿತ್ರಗೀತೆಯೊಂದರ ಸಾಲುಗಳಾದ ''ಕಣ್ಣೀರ ಧಾರೆ ಇದೇಕೋ'' ಹಾಡನ್ನು ತೆಗೆದುಕೊಂಡು ಹೆಣ್ಣಿನ ಸಂಕಷ್ಟವನ್ನು ವಿವರಿಸುವುದು ಓದುಗನನ್ನು ಸೆಳೆಯವು ತಂತ್ರವಾಗಿರಬಹುದು, ಇಲ್ಲವೆ ಓದುಗನಿಗೆ ಒಂದು ಸರಳ ಹಾಡಿನ ಮೂಲಕ ಪುರಷ ಕೇಂದ್ರಿತ ಸಮಾಜದಲ್ಲಿ ಹೆಣ್ಣಿನ ಪ್ರತಿನಿಧೀಕರಣ ಯಾವ ಬಗೆಯದ್ದೆಂದು ಗುರಿತಿಸಲಾಗಿದೆ.

''ಮದ್ವೆ ಮಾಡಿ ಬಿಟ್ರೆ ಮಗ ಸರಿಯಾಗಿ ಬಿಡ್ತಾನಾ?'' ಎನ್ನುವ ನುಡಿ ಪತ್ರಿಕೆಯಲ್ಲಿ ಪ್ರಯೋಗವಾಗಿತ್ತು. ಮೇಲಿನ ವಾಕ್ಯದ ಒಳಾರ್ಥ ಗಮನಿಸಿದಾಗ ಹೆಣ್ಣಿನ ಮಹತ್ವವನ್ನು ಹೇಳುತ್ತಿದೆಯೋ ಅಥವಾ ಕೆಟ್ಟು ಹೋದ ಹುಡುಗನನ್ನು ಕಟ್ಟಿಕೊಂಡು ಶಿಕ್ಷೆಯನ್ನು ಕೊಡುವ ಶಿಕ್ಷಕಿಯೋ? ಅಥವಾ ಗಂಡಿನ ಜೀವನದಲ್ಲಿ ಬರುವ ಹೆಣ್ಣು ಕೇವಲ ಭೋಗಕ್ಕೆ ಮಾತ್ರ ಸೀಮಿತಳು ಎನ್ನುವ ಅರ್ಥವೂ ಧ್ವನಿಸುತ್ತದೆ.

ಹೆಣ್ಣಿನ ಕರುಣಾಹೀನಾ ಬದುಕನ್ನು ವಿವರಿಸುವ ಸಂದರ್ಭದಲ್ಲಿ ಕಾವ್ಯಮಯವಾದ ಹೇಳಿಕೆಗಳು ಏನೂ ಅರಿಯದ ಮುಗ್ದಳು ಎನ್ನುವ ಮನೋಭಾವವನ್ನು ಹೊಂದಿದ ಮನಸ್ಸುಗಳ ಹೇಳಿಕೆಗಳು ಹೆಣ್ಣು ವಿಚಾರ

ಮಟ್ಟ ತಲುಪಲು ಸಾಧ್ಯವಿಲ್ಲವೆಂದು ಹೇಳುತ್ತವೆ. ಹೀಗೆ ಹೆಣ್ಣಿನ ಜೀವನವನ್ನು ವಿವರಿಸುವ ಸಂದರ್ಭದಲ್ಲಿ ಭಾಷೆ ಒಂದು ಬಗೆಯಾಗಿ ಬಳಕೆಯಾದರೆ, ಅಲಂಕಾರ, ಉಡುಪು, ಸೌಂದರ್ಯ ವರ್ಧಕ ಸಾಧನಗಳನ್ನು ಪರಿಚಯಿಸುವ ಸಂದರ್ಭದಲ್ಲಿ ಹೆಣ್ಣಿಗೆ ಮಾತ್ರ ಮುಖ್ಯವೆಂದು ಹೆಳುವುದು.

ಪುರುಷ ಕೇಂದ್ರಿತ ಹಿನ್ನೆಲೆಯಲ್ಲಿ ನಿರ್ಮಾಣಗೊಂಡಂತಹ ಪದಗಳು ಇತ್ತೀಚಿಗೆ ಮಹಿಳಾ ಸೂಚಕ ಪದಗಳಾಗಿ ಹೇಗೆ ಮಾರ್ಪಾಡುಗಳಾಗಿವೆ ಎಂಬುದನ್ನು ವಿವರಿಸಿದ್ದೇನೆ. ಉದಾ ಅನುರಾಗಿಣಿ, ನೇತಾರಿಣಿ, ಪಾದಚಾರಿಣಿ, ಜಗಳಗಾತಿ, ಜಾಲಕಿ, ಎನ್ನುವ ಮುಂತಾದ ಪದಗಳು ಸ್ತ್ರೀ ಸೂಚಕ ಪದಗಳಾಗಿ ಬಳಕೆಯಾಗಿವೆ ಎಂಬುದನ್ನು ಚರ್ಚಿಸಿದ್ದೇನೆ. ಹಾಗೆ ಇನ್ನೂ ಕೆಲವೊಂದು ಪದಗಳು ಮಹಿಳೆಯರನ್ನು ಕುರಿತು ಒಂದೊಂದು ವಲಯದಲ್ಲಿ ಪದಗಳ ಪ್ರಯೋಗ ಮತ್ತು ಬಳಕೆ ಆಗಿಲ್ಲ. ಎಂದರೆ ಅದಕ್ಕೆ ಸಂವಾದಿಯಾದ ಪದಗಳು ಹುಟ್ಟಿಕೊಂಡಿಲ್ಲ ಎನ್ನುವುದನ್ನು ಪ್ರಸ್ತುತ ಮೂರು ಮತ್ತು ನಾಲ್ಕನೇ ಅಧ್ಯಾಯದಲ್ಲಿ ಚರ್ಚೆಗೆ ಗುರಿಪಡಿಸಿದ್ದೇನೆ.

ಐದನೇ ಅಧ್ಯಾಯದಲ್ಲಿ ಮಹಿಳಾ ಪುರವಣಿಗಳಲ್ಲಿ ಬಳಕೆಯಾಗಿರುವ ಮಹಿಳೆಯರಿಗೆ ಸಂಬಂಧಿಸಿದಂತೆ ಪದಗಳ ಪಟ್ಟಿಯನ್ನು ನೀಡಲಾಗಿದೆ. ಇದರ ಉದ್ದೇಶ ಶೈಕ್ಷಣಿಕವಾಗಿ ಮಹತ್ತರವಾದದ್ದು. ಏಕೆಂದರೆ ಇಡೀ ಅಧ್ಯಯನದಲ್ಲಿ ಮಹಿಳಾ ಸೂಚಕ ಪದಗಳ ಸ್ವರೂಪ ಒಂದೇ ಕಡೆ ಲಭ್ಯವಾಗುವ ಉದ್ದೇಶವಿಟ್ಟುಕೊಂಡು ಈ ಪ್ರಸ್ತುತ ಅಧ್ಯಾಯವನ್ನು ಅಳವಡಿಸಲಾಗಿದೆ. ಜೊತೆಗೆ ಮಹಿಳಾ ಪುರವಣಿಗೆಯಲ್ಲಿ ಬಳಕೆಯಾಗುವ ಭಾಷೆ ಅದು ಮಹಿಳಾ ಸೂಚಕವಾಗಿ ಮಾತ್ರವಲ್ಲದೇ ಬೇರೆ ವಲಯದ ಪದಗಳು ಬಳಕೆಯಲ್ಲಿವೆ. ಹಾಗೆ ಬಳಕೆಯಾಗುವಾಗ ತಮ್ಮ ಮೂಲದ ಅರ್ಥವನ್ನು ಉಳಿಸಿಕೊಂಡು ಬಳಕೆಯಲ್ಲಿದ್ದರೆ ಕೆಲವು ಪದಗಳು ಮೂಲ ಅರ್ಥಕ್ಕಿಂತ ಬಳಕೆಯ ವಲಯದ ಅರ್ಥಕ್ಕನುಗುಣವಾಗಿ ಬಳಕೆಯಲ್ಲಿವೆ. ಇಂತಹ ಪ್ರಕ್ರಿಯೆಯನ್ನು ಪದಕೋಶ ಪಲ್ಲಟ ಎಂದು ಕರೆಯಲಾಗಿದೆ. ಅಂದರೆ ಯಾವುದೇ ಒಂದು ಭಾಷೆಯಲ್ಲಿ ಇಂತಹ ಪದಕೋಶ ಪಲ್ಲಟ ನಡೆಯುವುದು ಸಾಮಾನ್ಯ ಸಂಗತಿಯಾದರೂ ಮಹಿಳಾ ಪುರವಣಿಯಲ್ಲಿ ಬಳಕೆಯಾಗುವ ಪದಕೋಶ ಪಲ್ಲಟ ವಿಶೇಷ ಎನಿಸಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಪ್ರಸ್ತುತ ಅಧ್ಯಯನ ಅನ್ವಯಿಕ ಭಾಷಾ ಶಾಸ್ತ್ರದಲ್ಲಿ ಒಂದು ವಿಶಿಷ್ಟವಾದದ್ದು.

ಶೈಕ್ಷಣಿಕವಾಗಿ ಮಹಿಳೆಯನ್ನು ಕುರಿತು ಭಾಷಾ ನೀತಿ ಮತ್ತು ಭಾಷಾ ಯೋಜನೆಗಳನ್ನು ರೂಪಿಸುವಾಗ ಇಂತಹ ಅಧ್ಯಯನಗಳು ಸಹಾಯಕ್ಕೆ ಬರುತ್ತವೆ. ಪ್ರಸ್ತುತ ಅಧ್ಯಯನ ಮಹಿಳೆಯರ ಭಾಷೆಯನ್ನು ಕುರಿತು ಅಧ್ಯಯನ ಮಾಡುವವರಿಗೆ ಒಂದು ಆಕರ ಸಾಮಾಗ್ರಿಯಾಗಬಲ್ಲುದು.

ಅನುಬಂಧ

ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್. ಎಸ್. ಸಂ., ೧೯೯೭, ಭಾಷಾಕ್ಷೇತ್ರ ಕಾರ್ಯ, ಸಮಾಜ ಪುಸ್ತಕಾಲಯ, ಧಾರವಾಡ

೨. ಅಂಗಡಿ ಎಸ್. ಎಸ್. ಸಂ., ೨೦೦೫, ಕನ್ನಡ ವ್ಯಾಕರಣ ಪರಿಭಾಷೆ, ವಿದ್ಯಾನಿಧಿ ಪ್ರಕಾಶನ, ಗದಗ

೩. ಅಂಗಡಿ ಎಚ್. ಎಸ್. ೨೦೦೩ ಕನ್ನಡ ನಿಘಂಟು ರಚನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಅಶೋಕ ಕುಮಾರ ರಂಜೇರೆ, ೨೦೦೫ ಭಾಷೆ ಮತ್ತು ಶಿಕ್ಷಣ, ನಿಧಿ ಪ್ರಕಾಶನ, ಹೊಸಪೇಟೆ

೫. ಇಕ್ಬಾಲ್ ಅಹಮದ್ ಕೆ. ಆರ್., ಲೇ ೨೦೦೩ ಪತ್ರಿಕೋದ್ಯಮದ ಮೂಲತತ್ವಗಳು ಪ್ರಿಯದರ್ಶಿನಿ ಸಾಹಿತ್ಯ ಪ್ರಕಾಶನ, ಬೆಂಗಳೂರು

೬. ಎಚ್ಚೆಸ್ಕೆ, ೨೦೦೪ ಆಡಳಿತ ಕನ್ನಡ, ಚೇತನ ಬುಕ್ ಹೌಸ್, ಮೈಸೂರು

೭. ಎಚ್ಚೆಸ್ಕೆ, ೨೦೦೧, ಕನ್ನಡದ ಸ್ಥಿತಿಗತಿ ಮಹಿಮ ಪ್ರಕಾಶನ, ಮೈಸೂರು

೮. ಎಚ್ಚೆಸ್ಕೆ, ೨೦೦೪, ಬಳಕೆಯ ಭಾಷೆ, ಚೇತನ ಬುಕ್ ಹೌಸ್, ಮೈಸೂರು

೯. ಕಮ್ಮಾರ ಎಸ್. ಎಂ., ೧೯೯೯, ಸಮೂಹ ಮಾಧ್ಯಮಗಳು ಹಾಗೂ ಸಮುದಾಯ, ಮುಂಡರಗಿ

೧೦. ಗುಂಡಪ್ಪ ಡಿ. ವಿ., ೧೯೨೮ ವೃತ್ತಪತ್ರಿಕೆ, ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು

೧೧. ಗೋಪಾಲಕೃಷ್ಣಯ್ಯ ಕೆ. ಎಲ್. ೨೦೦೩, ಭಾಷೆಯ ಬೆಳಕು ನವಕರ್ನಾಟಕ ಪ್ರಕಾಶನ.

೧೨. ಗೋಪಾಲಕೃಷ್ಣ ಹೆಗಡೆ ೨೦೦೪ ಕ್ರೀಡಾ ಪತ್ರಿಕೋದ್ಯಮ ಕರ್ನಾಟಕ ಮಾದ್ಯಮ ಅಕಾಡೆಮಿ ಬೆಂಗಳೂರು.

೧೩. ಚಂದ್ರಶೇಖರ್ ಬಿ.ಎಸ್. ೨೦೦೩ ಸಂವಹನ ಮಾದ್ಯಮಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೪. ಚಿದಾನಂದಮೂರ್ತಿ. ಎಂ., ೧೯೮೧, ವಾಗರ್ಥ, ಭಾಪ್ಕೊ ಪ್ರಕಾಶನ, ಬೆಂಗಳೂರು

೧೫. ದೇವೇಂದ್ರಕುಮಾರ ಹಕಾರಿ ೧೯೮೫, ವೃತ್ತಪತ್ರಿಕೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೧೬. ನಾಗರಾಜರಾವ್. ಹಂ. ಪ., ೧೯೭೩, ಭಾಷೆ, ಬೆಂಗಳೂರು
೧೭. ನಾಯಕ್ ಡಿ.ಬಿ. ೨೦೦೩ ಸಮೂಹ ಮಾಧ್ಯಮಗಳು ಮತ್ತು ಸಮಾಜ ಬಂಜಾರು ಪ್ರಕಾಶನ ಗುಲಬರ್ಗಾ.
೧೮. ನಾರಾಯಣ ಕೆ.ವಿ. ೧೯೯೮ ದ್ವಿಭಾಷಿಕತೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೧೯. ನಾಯಕ್.ಡಿ.ಬಿ. ೨೦೦೫ ಸಂವಹನ ಕನ್ನಡ ಬಂಜಾರ ಪ್ರಕಾಶನ ಗುಲಬರ್ಗಾ.
೨೦. ಮಹಾದೇವಯ್ಯ ಪಿ. ೨೦೦೬ ದಿನ ದಿನ ೩ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೧. ನಾರಾಯಣ ಕೆ.ವಿ. ೧೯೯೭ ದಿನ ದಿನ ೧ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೨. ನಾರಾಯಣ ಕೆ.ವಿ. ೧೯೯೯ ಕನ್ನಡ ಭಾಷಾಭಿವೃದ್ಧಿ ಸಾಧನೆ ಮತ್ತು ಮುನ್ನೋಟ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೩. ನಾವಿಕರಾಜ ರಾವ್ ಹ.ವೆಂ. ೧೯೯೮ ವಾರಪತ್ರಿಕೆಗಳು ಕರ್ನಾಟಕ ಪತ್ರಿಕಾ ಅಕಾಡೆಮಿ ಬೆಂಗಳೂರು.
೨೪. ನಾರಾಯಣ ಕೆ.ವಿ. ೨೦೦೬ ಕನ್ನಡ ಶೈಲಿ ಕೈಪಿಡಿ ಕನ್ನಡ ವಿಶ್ವವಿದ್ಯಾಲಯ ಹಂಪಿ ಸಿ.ಐ.ಐ.ಎಲ್. ಮೈಸೂರು.
೨೫. ನಾರಾಯಣ ಕೆ.ವಿ. ೨೦೦೦ ಭಾಷೆ : ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೧ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೨೬. ನಾರಾಯಣ ಕೆ.ವಿ. ೨೦೦೫ ನಮ್ಮೊಡನೆ ಲೋಹಿಯಾ ಪ್ರಕಾಶನ ಬಳ್ಳಾರಿ.
೨೭. ಪದ್ಮರಾಜ ದಂಡಾವತಿ ೨೦೦೧ ಪತ್ರಿಕಾ ಭಾಷೆ ಕರ್ನಾಟಕ ಮಾಧ್ಯಮ ಅಕಾಡೆಮಿ ಬೆಂಗಳೂರು
೨೮. ಮರುಳಯ್ಯ ಸಾ.ಶಿ. ೧೯೯೯ ಕನ್ನಡ ಭಾಷೆಯ ಚರಿತೆ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು.
೨೯. ಮಹಾದೇವಯ್ಯ ಪಿ. ೨೦೦೦ ಸಾಮಾಜಿಕ ಉಪಭಾಷೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೩೦. ಮಹಾದೇವಯ್ಯ ಪಿ. ೨೦೦೬ ದಲಿತರು ಭಾಷೆ ಮತ್ತು ಸಮಾಜ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
೩೧. ರಾಜ ಪುರೋಹಿತ ಬಿ.ಬಿ. ೨೦೦೫ ಭಾಷೆ ಮತ್ತು ಅರ್ಥಗಳ ಗುಟ್ಟು ಮೈಸೂರು.
೩೨. ವಿಶ್ವೇಶ್ವರ ಭಟ್ ೨೦೦೧ ತಲೆಬರಹ ಕರ್ನಾಟಕ ಪತ್ರಿಕಾ ಅಕಾಡೆಮಿ ಬೆಂಗಳೂರು
೩೩. ಶಂಕರ ಭಟ್.ಡಿ.ಎನ್. ೧೯೯೯ ಕನ್ನಡ ಪದಗಳ ಒಳಚರನೆ ಭಾಷಾ ಪ್ರಕಾಶನ ಬೆಂಗಳೂರು.
೩೪. ಶ್ರೀಮತಿ ಹೆಚ್. ಎಸ್. ೨೦೦೪ ಹೆಣ್ಣು ಮತ್ತು ಭಾಷೆ, ಇಳಾ ಪ್ರಕಾಶನ, ಬೆಂಗಳೂರು

೩೪. ಸಾಂಬಮೂರ್ತಿ ೨೦೦೧ ದಿನ ದಿನ ೨ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩೫. ಹಾವನೂರು ಶ್ರೀನಿವಾಸ ೨೦೦೪ ಕನ್ನಡ ಪತ್ರಿಕಾ ಸೂಚಿ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ಮೈಸೂರು.

ಸಂಶೋಧನಾ ಪ್ರಬಂಧಗಳು

೧. ಹೂಲೆಪ್ಪ ಸಂಡೂರು ೨೦೦೭ ದೂರದರ್ಶನದಲ್ಲಿ ಕ್ರೈಂ ನ್ಯೂಸ್ ಭಾಷಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಸೂಗಣ್ಣ ೨೦೦೭ ಕನ್ನಡ ದಿನಪತ್ರಿಕೆಗಳಲ್ಲಿನ ಕ್ರೀಡಾಪುಟದ ಭಾಷೆ ಕನ್ನಡ ವಿಶ್ವವಿದ್ಯಾಲಯ ಹಂಪಿ.

೩. ಮಂಜುಳಾ ಬಿ.ಎಸ್. ದೂರದರ್ಶನ ಜಾಹಿರಾತುಗಳು ಒಂದು ಸಾಂಸ್ಕೃತಿಕ ಅಧ್ಯಯನ ಕನ್ನಡ ವಿಶ್ವವಿದ್ಯಾಲಯ ಹಂಪಿ.

೪. ಲೀಲಾವತಿ ಎಂ.ಎನ್. ಲಾಂಗ್ವೇಜ್ ಆಫ್ ಹೆಡ್‌ಲೈನ್ಸ್ ಇನ್ ಕನ್ನಡ ಡೈಲೀಸ್ ಅಪ್ರಕಟಿತ ಮಹಾ ಪ್ರಬಂಧ ಮೈಸೂರು ವಿಶ್ವವಿದ್ಯಾಲಯ ಮೈಸೂರು ೧೯೯೬

ಸಂಶೋಧನಾ ಆಕಾರಗಳು

೧.	ಪ್ರಜಾವಾಣಿ	-	ಭೂಮಿಕಾ ಪುರವಣಿ
೨.	ಕನ್ನಡ ಪ್ರಭ	-	ಸಖಿ ಪುರವಣಿ
೩.	ವಿಜಯ ಕರ್ನಾಟಕ	-	ಮಹಿಳಾ ವಿಜಯ
೪.	ಸಂಯುಕ್ತ ಕರ್ನಾಟಕ	-	ಸಿಂಧೂರ
೫.	ಉದಯವಾಣಿ	-	ಮಹಿಳಾ ಸಂಪದ